ಜನಶಕ್ತಿ

ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 50-51
ಡಿಸೆಂಬರ್ 16, 2012

ಪುಟ 16 ರೂ. 5/-



ಕಾಂಗ್ರೆಸ್-ಬಿಜೆಪಿ ಪಕ್ಷಗಳನ್ನು ತಿರಸ್ಕರಿಸಿ





ಜನಪರ ಹೋರಾಟಗಳ ಪರ್ಯಾಯ ಬಲಪಡಿಸಿ



ಬಾಬ್ರಿ ಮಸೀದಿಯ ಧ್ವಂಸದ ಎರಡು ದಶಕಗಳು

ದುಷ್ಟ ಅಜೆಂಡಾವನ್ನು ಸೋಲಿಸಲು ಗಟ್ಟಿಗೊಳ್ಳಲಿ ಸಂಕಲ್ಪ



ಜನಮನ ಸೆಳೆದ ರಾಜಕೀಯ ಜಾಥಾಗಳು

ಹೈದ್ರಾಬಾದ್-ಕರ್ನಾಟಕ ವಿಶೇಷ ಸ್ಥಾನಮಾನ

ಒಣ ರಾಜಕಾರಣ



ಅಭೂತಪೂರ್ವ ಮಹಾ ಧರಣ

ಯುಪಿಎ ಸರ್ಕಾರಕ್ಕೆ ಅಸಂಘಟಿತ ಕಾರ್ಮಿಕರ ಎಚ್ಚರಿಕೆಯ ಗಂಟೆ


ಅಂಗನವಾಡಿಗಳ ಮೇಲಿನ ಹಿಡಿತಕ್ಕೆ ವೇದಾಂತ ಫೌಂಡೇಷನ್ ಎಂಬ ವಂಚಕ ಕಂಪನಿ ಸಂಚು

'ಮಡೆಸ್ನಾನ–ಎಡೆಸ್ನಾನ ಎರಡೂ ಒಂದೇ'

ಮಳವಳ್ಳಿ ತಾಲ್ಲೂಕು ಮಟ್ಟದ ದಲಿತ ಸಮಾವೇಶ

ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲ್ಲೂಕಿನ ಸುಮಾರು 140ಕ್ಕೂ ಹೆಚ್ಚು ಹಳ್ಳಿಗಳಲ್ಲಿ ದಲಿತರಿದ್ದಾರೆ. ಇಲ್ಲಿಯ ದಲಿತರಿಗೆ ಭೂಮಿ ಇಲ್ಲ. ಇದ್ದರೂ ಅಲ್ಪಸಲ್ಪ. 10 ಗುಂಟೆ ಅಥವಾ 20 ಗುಂಟೆ. ಅತಿ ಹೆಚ್ಚೆಂದರೆ 2 ಎಕರೆ. ಭೂಹೀನರ ಸಂಖ್ಯೆ ಹೆಚ್ಚು. ಸವರ್ಣೀಯರ ಭೂಮಿಯನ್ನ ಅವಲಂಭಿಸಿ ಕೆಲಸ ಮಾಡುತ್ತಾರೆ. ಗ್ರಾಮಗಳಲ್ಲಿ ಹೆಚ್ಚಾಗಿ ಸವರ್ಣೀಯರ ಪ್ರಾಬಲ್ಯ ಇರುತ್ತದೆ. ಬಹುತೇಕ ದಲಿತ ಯುವಕರು ಉದ್ಯೋಗ ಹುಡುಕಿಕೊಂಡು ನಗರ ಪ್ರದೇಶಗಳಿಗೆ ಹೋಗಿರುತ್ತಾರೆ. ಬಹಳಷ್ಟು ಗ್ರಾಮಗಳಲ್ಲಿ ದಲಿತರು ಗುಡಿಸಲುಗಳಲ್ಲಿಯೇ ವಾಸ ಮಾಡುತ್ತಿರುತ್ತಾರೆ. ರಸ್ತೆ, ಕುಡಿಯುವ ನೀರು, ಶೌಚಾಲಯ, ಚರಂಡಿ ವ್ಯವಸ್ಥೆ, ಸ್ಮಶಾನ, ಬೀದಿ ದೀಪ ಮುಂತಾದ ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ದೌರ್ಜನ್ಯ, ಅತ್ಯಾಚಾರ, ಬಹಿಷ್ಕಾರಗಳಲ್ಲಿ ಸಿಕ್ಕಿ ನರಳುತ್ತಿರುತ್ತಾರೆ. ಒಂದು ಕಡೆ ಪೌಷ್ಟಿಕ ಆಹಾರದ ಕೊರತೆ, ರಕ್ತ ಹೀನತೆಯಿಂದ ದಲಿತ ಮಹಿಳೆಯರು ಬಳಲುತ್ತಿದ್ದರೆ, ಇನ್ನೊಂದು ಕಡೆ ಕುಡಿಯುವ ಶುದ್ಧ ನೀರು ಸಿಗದೆ ಕಲುಷಿತ ವಾತಾವರಣದಲ್ಲಿ ಜೀವನ ಸಾಗಿಸುತ್ತಿರುತ್ತಾರೆ. ಬಿಟ್ಟಿ ದುಡಿಮೆ, ಜೀತ ಪದ್ಧತಿ ಜೀವಂತವಾಗಿದೆ.

ಹೊಸಪುರ ಗ್ರಾಮದಲ್ಲಿ ದಲಿತ ಯುವಕನ ಕೈಯಿಂದ ಗ್ರಾಮಕ್ಕೆ ಕುಡಿಯುವ ನೀರು ಬಿಡುತ್ತಾರೆ ಎಂದು ಗಲಾಟೆ ಮಾಡಿ ದಲಿತ ಕೇರಿಗೆ ಬಹಿಷ್ಕಾರ ಹಾಕಲಾಗಿತ್ತು. ಹೊಸ್ಕೂರು ಗ್ರಾಮದಲ್ಲಿ ಯುಗಾದಿ ಹಬ್ಬದ ದಿನ ರಾತ್ರಿ ಕೆಲವು ದಲಿತ ಯುವಕರು ರಸ್ತೆಯ ಪಕ್ಕ ಜಗಲಿ ಕಟ್ಟೆಯ ಬಳಿ ಮಾತನಾಡುತ್ತಾ ಕುಳಿತಿದ್ದಾಗ, ಸವರ್ಣೀಯ ಯುವಕರು ಬೈಕ್‌ನಲ್ಲಿ ಬಹಳ ವೇಗವಾಗಿ ದಲಿತರ ಕೇರಿಯಲ್ಲಿ ಹಾದು ಹೋಗುತ್ತಿದ್ದರು. ಮುಂದೆ ರಸ್ತೆ ದುರಸ್ತಿಗಾಗಿ ಹಳ್ಳ ಮಾಡಲಾಗಿತ್ತು. ಇದನ್ನು ಗಮನಿಸಿದ ದಲಿತ ಯುವಕರು ಬೈಕ್ ಸವಾರರಿಗೆ, 'ಓ, ಹಳ್ಳ ಇದೆ, ನಿಧಾನಕ್ಕೆ ಹೋಗು' ಎಂದು ಕೂಗಿ ಹೇಳಿದ್ದೇ ತಪ್ಪಾಯಿತು. ದಲಿತ ಕೇರಿಗೆ ನೂರಾರು ಸಂಖ್ಯೆಯಲ್ಲಿ ನುಗ್ಗಿ, ಕೈಗೆ ಸಿಕ್ಕ ದಲಿತ ಯುವಕರಿಗೆ ಹೊಡೆದು, ಬಿಡಿಸಲು ಬಂದ ಮಹಿಳೆಯರ ಮೇಲೆ ಹಲ್ಲೆ ಮಾಡಿ ದಲಿತ ಯುವಕರ ಮೇಲೆ ಸುಳ್ಳು ಕೇಸು ದಾಖಲು ಮಾಡಿದರು. ಕಿರುಗಾವಲು ಗ್ರಾಮದಲ್ಲಿ ಚಿಕ್ಕ ಮಂಚಯ್ಯ ಎಂಬ ದಲಿತ ಕ್ಷೌರ ಮಾಡಿಸಲು ಹೋದಾಗ ಆತನ ಮೂಗನ್ನೇ ಕತ್ತರಿಸಲಾಯಿತು. ಇಂತಹ ಅನೇಕ ಪ್ರಕರಣಗಳು ನಡೆಯುತ್ತಲೇ ಇರುತ್ತವೆ. ಬೆಳಕಿಗೆ ಬರುವುದಿಲ್ಲ. "ನಮ್ಮ ಹಣೆಬರಹ ಅಷ್ಟೇ" ಎಂದು ಎಲ್ಲವನ್ನು ಸಹಿಸಿಕೊಂಡು ಬೇರೆ ಕಡೆಗಳಲ್ಲಿ ಇರುವಂತೆ ಇಲ್ಲಿಯ ದಲಿತರು ಸಹ ಜೀವನ ಸಾಗಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ತಾಲ್ಲೂಕಿನ ದಲಿತರ ಪರಿಸ್ಥಿತಿಯನ್ನು ಚರ್ಚಿಸಲು ಕಳೆದ ನವೆಂಬರ್ 29 ರಂದು ಮಳವಳ್ಳಿಯಲ್ಲಿ ಸಿಪಿಐ(ಎಂ)ನ ತಾಲ್ಲೂಕು ದಲಿತ ಹಕ್ಕುಗಳ ಸಮಿತಿಯ ಆಶ್ರಯದಲ್ಲಿ ತಾಲ್ಲೂಕು ಮಟ್ಟದ ದಲಿತ ಸಮಾವೇಶವನ್ನು ಆಯೋಜಿಸಲಾಗಿತ್ತು. ರಾಜ್ಯ ಮಟ್ಟದ ದಲಿತ ಹಕ್ಕುಗಳ ಸಮಿತಿಯ ಮುಖಂಡರಾದ ಗೋಪಾಲಕೃಷ್ಣ ಅರಳಹಳ್ಳಿ ಅವರು ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತ್ತಾ, ದಲಿತರ ಆರ್ಥಿಕ ಅಭಿವೃದ್ಧಿಗಾಗಿ ಜಾರಿಗೆ ತರಲಾದ ವಿಶೇಷ ಘಟಕ ಯೋಜನೆ (ಎಸ್‌ಸಿಪಿ)ಯ ಪ್ರಯೋಜನ ದಲಿತರಿಗೆ ಸರಿಯಾಗಿ ದೊರೆಯುತ್ತಿಲ್ಲ. ಸರ್ಕಾರದ ಖಾಸಗೀಕರಣ ನೀತಿಯಿಂದಾಗಿ ಉದ್ಯೋಗ ಮೀಸಲಾತಿ ಅರ್ಥ ಕಳೆದುಕೊಂಡಿದೆ. ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ನಿಡಲಾಗುತ್ತಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು



ಭರ್ತಿ ಮಾಡದೆ ದಲಿತ ಯುವಕರಿಗೆ ಉದ್ಯೋಗ ನಿರಾಕರಿಸಲಾಗುತ್ತಿದೆ. ದಲಿತರ ಅಭಿವೃದ್ಧಿಗಾಗಿ ಮೀಸಲಪಟ್ಟಿರುವ ಹಣವೂ ಸಹ ಬೇರೆ ಉದ್ದೇಶಗಳಿಗೆ ಬಳಕೆಯಾಗುತ್ತಿದೆ. ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆಗಳು ಕಟ್ಟುನಿಟ್ಟಾಗಿ ಜಾರಿ ಆಗುತ್ತಿಲ್ಲ. ದಲಿತರನ್ನು ಮೂಢನಂಬಿಕೆ, ಅಂಧಶ್ರದ್ಧೆಯಲ್ಲಿ ಮುಳುಗಿಸಲಾಗಿದೆ. ಉಡುಪಿ ಮಠದಲ್ಲಿ ಪಂಕ್ತಿ ಭೇದ ಆಚರಿಸುವ ಮೂಲಕ ಬಹಿರಂಗವಾಗಿ ಜಾತಿ ಭೇದವನ್ನು ಆಚರಿಸಲಾಗುತ್ತಿದೆ. ಕುಕ್ಕೆ ಸುಬ್ರಮಣ್ಯದಲ್ಲಿ ಬ್ರಾಹ್ಮಣರ ಎಂಜಲಿನ ಮೇಲೆ ದಲಿತರನ್ನು ಉರುಳಾಡಿಸುವ ಪದ್ಧತಿಯನ್ನು ಜೀವಂತವಾಗಿ ಇಡಲಾಗಿದೆ. ಮಡೆ ಸ್ನಾನದ ಬದಲು ಎಡೆ ಸ್ನಾನ ಎಂಬ ಹೆಸರಿನಲ್ಲಿ ಜಾತಿ ಭೇದ ಮತ್ತು ಮೂಢನಂಬಿಕೆಗಳನ್ನು ಭದ್ರಗೊಳಿಸಲಾಗುತ್ತಿದೆ. ಇಂತಹ ಅಮಾನವೀಯ ಜಾತಿ ಪದ್ಧತಿ, ಅಸ್ಪೃಶ್ಯತೆಯನ್ನು ತೊಡೆದುಹಾಕಬೇಕೆಂದು ಬಯಸುವ ದಲಿತರು ಮತ್ತು ದಲಿತೇತರರು ಒಂದಾಗಿ ಬಲಿಷ್ಠವಾದ ಹೋರಾಟ ಮಾಡಬೇಕಾಗಿದೆ ಎಂದು ಕಾಂ.ಗೋಪಾಲಕೃಷ್ಣ ಹೇಳಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಾಂ.ಎಂ. ಪುಟ್ಟಮಾದು ಮಾತನಾಡುತ್ತಾ ಈ ಕ್ಷೇತ್ರದ ಶಾಸಕರು ದಲಿತರೇ ಆಗಿದ್ದರೂ ದಲಿತ ವಿರೋಧಿ ನೀತಿಗಳನ್ನೇ ಅನುಸರಿಸುತ್ತಾರೆ. ಕೇವಲ ಒಂದೆರಡು ರಸ್ತೆಗಳ ಡಾಂಬರೀಕರಣ ಮಾಡಿಸಿ ಅದನ್ನೇ ಅಭಿವೃದ್ಧಿ ಎಂದು ಪ್ರಚಾರ ಮಾಡುತ್ತಿದ್ದಾರೆ. ದಲಿತರಿಗಾಗಿ ವ್ಯಯ ಮಾಡಬೇಕಾದ ಸರ್ಕಾರದ ಹಣವನ್ನು ಬಂಡವಾಳ ಮಾಡಿಕೊಳ್ಳುತ್ತಿದ್ದಾರೆ. ಜಿಲ್ಲಾ ದಲಿತರಿಗೆ ಸಿಗಬೇಕಾದ ಸೌಲಭ್ಯಗಳನ್ನು ತಮ್ಮ ಹಿಂಬಾಲಕರಿಗೆ ಮಾತ್ರ ಸಿಗುವಂತೆ ಮಾಡಿ ಪಕ್ಷಪಾತ ಮಾಡುತ್ತಿದ್ದಾರೆ ಎಂದು ವಿವರಿಸಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಕಾರ್ಯದರ್ಶಿ ಕಾಂ. ಬಸವರಾಜು ಅವರು ದಲಿತರಿಗೆ ಆಗುತ್ತಿರುವ ಅನ್ಯಾಯಗಳನ್ನು ವಿವರಿಸುತ್ತಾ ನಾವೆಲ್ಲರೂ ಸಂಘಟಿತರಾಗಿ ಹೋರಾಡಬೇಕು ಎಂದು ಹೇಳಿದರು. ರಾಜ್ಯ ದಲಿತ ಹಕ್ಕುಗಳ ಸಮಿತಿಯ ಸದಸ್ಯರಾದ ಆರ್. ಕೃಷ್ಣ ಅಧ್ಯಕ್ಷತೆಯನ್ನು ವಹಿಸಿದ್ದರು. ಆರಂಭದಲ್ಲಿ ಶಶಿಕಾಂತ ಎಲ್ಲರನ್ನೂ ಸ್ವಾಗತಿಸಿದರು. ನಂಜುಂಡಮ್ಮ ನಿರೂಪಣೆ ಮಾಡಿದರು. ಶಿವಬೋರಯ್ಯ ವಂದಿಸಿದರು. ಸಮಾವೇಶದಲ್ಲಿ ಆರ್. ಕೃಷ್ಣ ಸಂಚಾಲಕರಾಗಿರುವ 21 ಜನರ ಸದಸ್ಯರುಳ್ಳ ತಾಲ್ಲೂಕು ಮಟ್ಟದ ದಲಿತ ಹಕ್ಕುಗಳ ಸಮಿತಿಯನ್ನು ಪುನರ್‌ರಚಿಸಲಾಯಿತು.

ವರದಿ: ಆರ್. ಕೃಷ್ಣ

ವಿಶೇಷ ಸಂಚಿಕೆ – ಜಾಹಿರಾತು ಸಂಗ್ರಹಕ್ಕೆ ಕೈ ಜೋಡಿಸಿ

ಬಂಧುಗಳೇ,

'ರಾಜ್ಯೋತ್ಸವ–ವಿಶೇಷ ಸಂಚಿಕೆ'ಯನ್ನು ಹೊರತರಲು ಸಿದ್ದತೆಗಳು ನಡೆದಿವೆ. ಡಿಸೆಂಬರ್ ತಿಂಗಳ ಕೊನೆಯಲ್ಲಿ ಈ ಸಲದ ವಿಶೇಷ ಸಂಚಿಕೆಯನ್ನು ಹೊರತರಲು ಉದ್ದೇಶಿಸಲಾಗಿದ್ದು ಅದನ್ನು 'ಕರ್ನಾಟಕ– ಜಾಗತೀಕರಣದ ಎರಡು ದಶಕಗಳು– ಪರಿಣಾಮಗಳು ಮತ್ತು ಪರಿಹಾರಗಳು' ಎಂಬ ವಿಷಯ ಆಧಾರಿತವಾಗಿ ರೂಪಿಸಲೂ ತೀರ್ಮಾನಿಸಲಾಗಿದೆ. ಪತ್ರಿಕೆಯ ಪ್ರಸಾರ ಮಾಸ–ಡಿಸೆಂಬರ್ ತಿಂಗಳಲ್ಲಿ ಗರಿಷ್ಠ ಪ್ರಮಾಣದಲ್ಲಿ ಜಾಹಿರಾತುಗಳನ್ನು ಸಂಗ್ರಹಿಸಲು ತಾವೆಲ್ಲರೂ ಸಮಯ ನೀಡಬೇಕೆಂದು ಪ್ರಸಾರಾಂದೋಲನವನ್ನು ಯಶಸ್ವಿಗೊಳಿಸಬೇಕೆಂದು ಈ ಮೂಲಕ ಕೋರುತ್ತೇವೆ.

– ಸಂಪಾದಕರು

'ಜನಶಕ್ತಿ' ಬೆಲೆ ವಿವರ

ಬಿಡಿ ಪ್ರತಿ : 10.00 ರೂ.

ಚಂದಾದರ	ವಾರ್ಷಿಕ ಚಂದಾ	ದ್ವೈವಾರ್ಷಿಕ ಚಂದಾ
ವ್ಯಕ್ತಿಗಳಿಗೆ	350–00ರೂ.	700–00ರೂ.
ಸಂಘ ಸಂಸ್ಥೆಗಳಿಗೆ	500–00ರೂ.	1,000–00ರೂ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಡಿಸೆಂಬರ್ 2012 ಪತ್ರಿಕೆ ಪ್ರಸಾರ ಮಾಸ

ದೇಶದ ಮತ್ತು ವಿಶೇಷವಾಗಿ ಕರ್ನಾಟಕ ರಾಜ್ಯದ, ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ವಿದ್ಯಮಾನಗಳನ್ನು ಜನಪರ ದೃಷ್ಟಿಕೋನದಲ್ಲಿ ವಿಶ್ಲೇಷಿಸುತ್ತಾ ಜನ ಸಮುದಾಯಗಳ ಚಲನಶೀಲತೆಗೆ ಒಂದು ಪ್ರೇರಣಾ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತಾ ಬಂದಿರುವ 'ಜನಶಕ್ತಿ' ಕನ್ನಡ ವಾರ ಪತ್ರಿಕೆಯು ಹೊಸ ವಿನ್ಯಾಸದೊಂದಿಗೆ ಪ್ರಕಟವಾಗಲು ಆರಂಭಿಸಿ ಐದು ವರ್ಷಗಳಾಗಿವೆ. 1947 ರಲ್ಲಿ ಕನ್ನಡದ ಖ್ಯಾತ ಸಾಹಿತಿ ನಿರಂಜನರ ಸಂಪಾದಕತ್ವದಲ್ಲಿ ಆರಂಭಗೊಂಡ 'ಜನಶಕ್ತಿ' ದುಡಿಯುವ ಜನರ ಆಶೋತ್ತರಗಳ ಅಭಿವ್ಯಕ್ತಿಯಾಗಿ, ಅವರ ಹೋರಾಟಗಳಿಗೆ ಸೈದ್ಧಾಂತಿಕ ಅಸ್ತ್ರವಾಗಿ ಲಭ್ಯವಾಗುತ್ತಾ ಬಂದಿದೆ. ಜನ ಸಮುದಾಯಗಳ ಬದುಕಿನ ಮೇಲೆ ನವ–ಉದಾರೀಕರಣ ನೀತಿಗಳ ದಾಳಿಗಳು ತೀವ್ರಗೊಂಡಿರುವ ಈ ಕಾಲಘಟ್ಟದಲ್ಲಿ 'ಜನಶಕ್ತಿ' ಪತ್ರಿಕೆಯ ಹೊಣೆಗಾರಿಕೆ ಹಲವು ಪಟ್ಟು ಹೆಚ್ಚಾಗುತ್ತಿದೆ. ಪತ್ರಿಕೆಯ ಓದುಗರ ಚಂದಾದಾರರ ಮತ್ತು ಏಜನ್ಸಿದಾರರ ನಿರಂತರ ಬೆಂಬಲ ಮತ್ತು ಸಹಕಾರದಿಂದ ಮಾತ್ರ ಪತ್ರಿಕೆಯು ತನ್ನ ಜನಪರ ಜವಾಬ್ದಾರಿಯನ್ನು ಹೆಚ್ಚೆಚ್ಚು ಸಮರ್ಥವಾಗಿ ನಿರ್ವಹಿಸಲು ಸಾಧ್ಯ.


ಉನ್ನತ ವಲಯಗಳಲ್ಲಿ ಹೆಚ್ಚುತ್ತಿರುವ ಭ್ರಷ್ಟಾಚಾರದಿಂದಾಗಿ ರಾಜಕೀಯ ವಾತಾವರಣ ಕಲುಷಿತಗೊಂಡಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಶ್ರೀಸಾಮಾನ್ಯರು ಕಂಗೆಟ್ಟಿದ್ದಾರೆ. ಆಳವಾಗುತ್ತಿರುವ ಕೃಷಿ ಬಿಕ್ಕಟ್ಟಿನಿಂದ ರೈತರು, ಕೃಷಿ ಕೂಲಿಕಾರರು ದಿಕ್ಕು ತೋಚದಂತವರಾಗಿದ್ದಾರೆ. ಹೆಚ್ಚೆಚ್ಚು ಅಸಂಘಟಿತ ವಲಯಕ್ಕೆ ತಳ್ಳಲ್ಪಡುತ್ತಿರುವ ಕಾರ್ಮಿಕ ವರ್ಗ ಈ ಹಿಂದೆ ಕಷ್ಟಪಟ್ಟು ಗಳಿಸಿದ ಹಕ್ಕುಗಳಿಂದ ವಂಚಿತರಾಗುತ್ತಿದ್ದಾರೆ. ನಿರುದ್ಯೋಗ ಸಮಸ್ಯೆ ಉಲ್ಬಣಗೊಳ್ಳುತ್ತಿದ್ದು ಯುವಜನರು ಹತಾಷರಾಗುತ್ತಿದ್ದಾರೆ. ಹೆಚ್ಚುತ್ತಿರುವ ಸಾಮಾಜಿಕ ದಮನ ದೌರ್ಜನ್ಯಗಳಿಂದ ಮಹಿಳೆಯರು ಮತ್ತು ದಲಿತರು ಖಿನ್ನತೆಯಿಂದ ನರಳುತ್ತಿದ್ದಾರೆ. ಶೋಷಣೆಯ ವಿರುದ್ಧ ಶೋಷಿತರು ಒಂದುಗೂಡುವುದನ್ನು ತಡೆಯುವಲ್ಲಿ ಕೋಮುವಾದ ಮತ್ತು ಮೂಲಭೂತವಾದಿ ಶಕ್ತಿಗಳು ತುಂಬಾ ಕ್ರಿಯಾಶೀಲವಾಗಿವೆ.

ಇಂತಹ ಪ್ರತಿಗಾಮಿ ಪರಿಸ್ಥಿತಿಯಲ್ಲಿ 'ಜನಶಕ್ತಿ' ಪತ್ರಿಕೆಯ ಜವಾಬ್ದಾರಿ ಸಹಜವಾಗಿಯೇ ಹಿರಿದಾಗುತ್ತಿದೆ. ನಮ್ಮ ದುಡಿಯುವ ಜನಸಮೂಹಗಳ ನಡುವೆ ಇನ್ನೂ ದೊಡ್ಡ ಪ್ರಮಾಣದಲ್ಲಿ ನಮ್ಮ ಪತ್ರಿಕೆಯ ಪ್ರಚಾರ ಆಗಬೇಕಾಗಿದೆ. ಉದಾರೀಕರಣದ ಮೋಸದ ಆಕರ್ಷಣೆಗಳಿಗೆ ಸೆಳೆಯಲ್ಪಡುತ್ತಿರುವ ಮಧ್ಯಮ ವರ್ಗದ ಜನರ ನಡುವೆ ಪತ್ರಿಕೆಯ ಪ್ರಚಾರ ಹೆಚ್ಚಾಗುವುದು ಸಹಾ ತೀರಾ ಅಗತ್ಯವಾಗಿದೆ. ಈ ಕೆಲಸಕ್ಕೆ ಪತ್ರಿಕೆಯ ಓದುಗರ, ಚಂದಾದಾರರ, ಏಜೆನ್ಸಿದಾರರ ಮತ್ತು ಜಾಹಿರಾತುದಾರರ ಶ್ರಮ ಮತ್ತು ಸಹಕಾರ ಭಾರೀ ಮುಖ್ಯವಾಗುತ್ತದೆ. ಆದ್ದರಿಂದ 2012 ಡಿಸೆಂಬರ್ ತಿಂಗಳನ್ನು ಪತ್ರಿಕೆಯ ಪ್ರಚಾರ ಮಾಸವಾಗಿ ಆಚರಿಸಲು ನಿರ್ಧರಿಸಲಾಗಿದ್ದು ತಾವೆಲ್ಲರು ಕೈಜೊಡಿಸಬೇಕೆಂದು ಕೋರುತ್ತೇವೆ. ಅದೇ ಸಮಯದಲ್ಲಿ, ಪ್ರಸಕ್ತ ಸವಾಲುಗಳನ್ನು ಎದುರಿಸುವಲ್ಲಿ ಪತ್ರಿಕೆಯನ್ನು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿಸಲು ನಿಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ಸ್ವಾಗತಿಸುತ್ತೇವೆ.

ಬೆಲೆ ಏರಿಕೆಯ ಬಿಸಿ ಪತ್ರಿಕೆಗೂ ತಟ್ಟಿದೆ. ಪತ್ರಿಕೆಯ ಚಂದಾ ಹಾಗೂ ಬಿಡಿ ಪತ್ರಿಕೆಯ ಬೆಲೆಯನ್ನು ಹೆಚ್ಚಿಸುವುದು ಅನಿವಾರ್ಯವಾಗಿದೆ. ಏಜೆನ್ಸಿದಾರರಿಗೆ ನೀಡಲಾಗುತ್ತಿರುವ ಕಮಿಷನ್ ಸ್ವಲ್ಪ ಪ್ರಮಾಣದಲ್ಲಿ ಹೆಚ್ಚಿಸಲು ನಿರ್ಧರಿಸಲಾಗಿದೆ. ಹಾಗೆಯೇ ಚಂದಾ ನೋಂದಾಯಿಸುವವರಿಗೂ ಸ್ವಲ್ಪ ಕಮಿಷನ್ ನೀಡಬೇಕೆಂದು ಅಭಿಪ್ರಾಯಪಡಲಾಗಿದೆ. ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವುದೇ ಈ ಕ್ರಮಗಳ ಉದ್ದೇಶವಾಗಿದೆ. ಪತ್ರಿಕೆಯ ಪ್ರಸಾರ ಹೆಚ್ಚಾದರೆ ಮತ್ತು ಏಜೆನ್ಸಿದಾರರಿಂದ ಕ್ರಮಬದ್ಧವಾಗಿ ಹಣ ಸಂದಾಯವಾದರೆ ಪತ್ರಿಕೆಯ ಮೇಲೆ ಹೆಚ್ಚಿನ ಹೊರೆ ಬೀಳಲಾರದು. ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವುದಕ್ಕೆ ನಿಮ್ಮ ಸಹಕಾರವನ್ನು ಕೆ ಜೊತೆಯಲ್ಲಿ ಅನಿವಾರ್ಯ ಬೆಲೆ ಹೆಚ್ಚಳಕ್ಕೂ ಚಂದಾದಾರರು ಸಹಕರಿಸಬೇಕೆಂದು ವಿನಂತಿಸುತ್ತೇವೆ.

ಹಿಂದೆ 'ಐಕ್ಯರಂಗ' ಮತ್ತು ಈಗ 'ಜನಶಕ್ತಿ' ಪತ್ರಿಕೆಯನ್ನು ಇಷ್ಟೊಂದು ಕಡಿಮೆ ಬೆಲೆಗೆ ಓದುಗರಿಗೆ ತಲುಪಿಸಲು ಸಾಧ್ಯವಾಗಿರುವುದು ಪ್ರತಿ ವರ್ಷ ಹೊರತರುವ ವಿಶೇಷ ಸಂಚಿಕೆಗೆ ಜಾಹಿರಾತುಗಳನ್ನು ಸಂಗ್ರಹಿಸುವ ಮೂಲಕ. ಮುಂದೆಯೂ ವಿಶೇಷ ಸಂಚಿಕೆಗೆ ಜಾಹಿರಾತು ಸಂಗ್ರಹಿಸುವ ಕ್ರಮವನ್ನು ಮುಂದುವರಿಸುವುದು ಅನಿವಾರ್ಯವಾಗಿದೆ. ಈ ಸಲ ರಾಜ್ಯೋತ್ಸವ ಅಂಗವಾಗಿ ವಿಶೇಷ ಸಂಚಿಕೆಯನ್ನು ಹೊರತರಲು ಸಿದ್ಧತೆಗಳು ನಡೆದಿವೆ. ಡಿಸೆಂಬರ್ ತಿಂಗಳ ಕೊನೆಯಲ್ಲಿ ಈ ಸಲದ ವಿಶೇಷ ಸಂಚಿಕೆಯನ್ನು ಹೊರತರಲು ಉದ್ದೇಶಿಸಲಾಗಿದ್ದು ಅದನ್ನು 'ಕರ್ನಾಟಕ–ಜಾಗತೀಕರಣದ ಎರಡು ದಶಕಗಳು–ಪರಿಣಾಮಗಳು ಮತ್ತು ಪರಿಹಾರಗಳು ಎಂಬ ವಿಷಯ ಆಧಾರಿತವಾಗಿ ರೂಪಿಸಲೂ ತೀರ್ಮಾನಿಸಲಾಗಿದೆ. ಪತ್ರಿಕೆಯ ಪ್ರಸಾರ ಮಾಸ– ಡಿಸೆಂಬರ್ ತಿಂಗಳಲ್ಲಿ ಗರಿಷ್ಠ ಪ್ರಮಾಣದಲ್ಲಿ ಜಾಹಿರಾತುಗಳನ್ನು ಸಂಗ್ರಹಿಸಲು ಹಾಗೂ ಚಂದಾದಾರರನ್ನು ನೋಂದಾಯಿಸಲು ತಾವೆಲ್ಲರೂ ಸಮಯ ನೀಡಬೇಕೆಂದು ಈ ಮೂಲಕ ಕೋರುತ್ತೇವೆ.

ಹೈ–ಕ ವಿಶೇಷ ಸ್ಥಾನಮಾನ: ಒಣ ರಾಜಕಾರಣ



ಇದನ್ನು ಹೊಣೆಗೇಡಿತನ ಎನ್ನಬೇಕೋ ಅಥವಾ ಕೀಳು ರಾಜಕೀಯ ತಂತ್ರ ಎನ್ನಬೇಕೋ, ಇಲ್ಲವೇ ಇವೆಲ್ಲವುಗಳ ಮೊತ್ತವೇ ಈ ಬಿಜೆಪಿ ಸರಕಾರ ಎಂದರೆ ಅದೇ ಸರಿಯೋ ! ಇಂತಹ ಪ್ರಶ್ನೆಗಳು ಇತ್ತೀಚೆಗೆ ಹೆಚ್ಚುತ್ತಿವೆ. ಕಾವೇರಿ ನದಿ ನೀರಿ ಹಂಚಿಕೆಯ ವಿಚಾರದಲ್ಲಿ ಈ ಸರಕಾರ ಹಾಗೇ ನಡೆದುಕೊಂಡಿತು. ಈಗ ಪ್ರಾದೇಶಿಕ ಅಸಮಾನತೆಯ ದಳ್ಳುರಿಯಲ್ಲಿ ನಲುಗುತ್ತಿರುವ ಹೈದ್ರಬಾದ್ ಕರ್ನಾಟಕವನ್ನು ಸಂವಿಧಾನದ 371ನೇ ಕಲಮಿನಡಿ ತಿದ್ದುಪಡಿ ತರಬೇಕೆಂದು ಸತತವಾಗಿ ಈ ಭಾಗದ ಜನತೆಯಿಂದ ಬಂದ ಆಗ್ರಹದ ಹಿನ್ನೆಲೆಯಲ್ಲಿ ಅಂತಹ ಒಂದು ಕರಡು ಮಸೂದೆ ಸಂಸತ್ತಿನ ಸ್ಥಾಯಿ ಸಮಿತಿ, ನಂತರದಲ್ಲಿ ಸಚಿವ ಸಂಪುಟದ ಮೂಲಕ ಹಾದು ಅಧಿವೇಶನದಲ್ಲಿ ಅಂಗೀಕಾರಕ್ಕೆ ಮಂಡನೆಯಾಗಲು ಸಿದ್ಧವಾಗಿರುವಾಗ ಇದನ್ನು ತಾನು ಒಪ್ಪುವುದಿಲ್ಲವೆಂದು ಗುಪ್ತವಾಗಿ ಕೇಂದ್ರ ಸರಕಾರಕ್ಕೆ ಸರಕಾರ ಪತ್ರ ಬರೆಯುವುದೆಂದರೆ ಏನರ್ಥ? ಅದೇ ದಾರಿಯಲ್ಲಿ ಸ್ಥಾಯಿ ಸಮಿತಿಯ ಅಧ್ಯಕ್ಷರಾಗಿರುವ ಬಿಜೆಪಿ ಸಂಸದ ವೆಂಕಯ್ಯನಾಯ್ಡು ತಿದ್ದುಪಡಿ ಮಸೂದೆಯನ್ನು ತಡೆ ಹಿಡಿಯುವಂತೆ ಪತ್ರ ಬರೆಯುವುದರ ಉದ್ದೇಶ ಏನು? ಈ ಸಂಗತಿಗೆ ಜಗಜ್ಜಾಹೀರಾಗಿ ತೀವ್ರವಾದ ಪ್ರತಿಭಟನೆ, ಟೀಕೆಗಳು ವ್ಯಕ್ತವಾಗಿ ಛೀಮಾರಿ ಹಾಕಿಸಿಕೊಂಡ ಬಳಿಕ ತನ್ನ ನಿಲುವನ್ನು 'ಸಡಿಲಿಸಿ' ಒಪ್ಪುವುದೆಂದರೆ ಏನರ್ಥ ?

ಅಡ್ಡಗಾಲು

ರಾಜ್ಯ ಸರಕಾರಕ್ಕೆ, ರಾಷ್ಟ್ರೀಯ ಪಕ್ಷವಾದ ಬಿಜೆಪಿಗೆ ಅನುಭವದ ಕೊರತೆಯಿದೆ ಎಂದು ಯಾರಾದರೂ ಹೇಳಿದರೆ ನಂಬುವುದು ಅಸಾಧ್ಯ. ಬದಲಾಗಿ ತಿದ್ದುಪಡಿ ಅಂಗೀಕಾರವಾಗಿ ಬಿಟ್ಟರೆ, ಅದರ ಕೀರ್ತಿ ಕಾಂಗ್ರೆಸ್ ಪಾಲಾಗಿ ಬಿಡುತ್ತಲ್ಲಾ ಎಂದು ಅಂಗೀಕಾರಕ್ಕೆ ಅಡ್ಡಗಾಲು ಹಾಕುವುದು ಜನದ್ರೋಹದ ಕುತಂತ್ರವಲ್ಲದೇ ಬೇರೇನಲ್ಲ. ಇಂತಹ ಕೃತ್ಯಕ್ಕೆಳಸಿದ ಉತ್ತರ ಕರ್ನಾಟಕದವರೇ ಆದ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಖಂಡಿತಕ್ಕೂ ಖಂಡನಾರ್ಹರು.

ಅನುಕೂಲ ಸಿಂಧು ರಾಜಕೀಯ


ಹಿಂದೆ ಬಿಜೆಪಿ ರಾಜ್ಯದಲ್ಲಿ ವಿರೋಧ ಪಕ್ಷವಾಗಿದ್ದಾಗ, ನಂತರ ರಾಜ್ಯದಲ್ಲಿ ಅಧಿಕಾರದಲ್ಲಿದ್ದರೂ ಕೇಂದ್ರದಲ್ಲಿ ವಿರೋಧ ಪಕ್ಷವಾಗಿರುವಾಗ ಬಿಜೆಪಿ 371ನೇ ಕಲಮಿನ ಪ್ರಶ್ನೆಯನ್ನು ನೋಡಿದ್ದು ಅದರ ಮಹತ್ವ ಏನು ಎಂದು ಅರಿತು ಅಲ್ಲ, ಬದಲಾಗಿ ಕಾಂಗ್ರೆಸ್ ಪಕ್ಷಕ್ಕೆ ಇದು ಎಷ್ಟರ ಮಟ್ಟಿಗೆ ಇರುಸು ಮುರುಸು ಉಂಟು ಮಾಡಬಲ್ಲುದು, ಜನರನ್ನು ಎಷ್ಟು ಹೇಗೆಲ್ಲ ಕೇಂದ್ರದ ವಿರುದ್ಧ ಎತ್ತಿ ಕಟ್ಟಬಹುದು ಎಂಬ ಲೆಕ್ಕಾಚಾರದಲ್ಲಿ. ಆದ್ದರಿಂದ ಅಷ್ಟು ಮಟ್ಟಿಗೆ ಮಾತ್ರ ವಿಷಯವನ್ನು ಬೆಳೆಸಿತು. ಹಿಂದೆ ವಾಜಪೇಯಿಯವರು ಪ್ರಧಾನಿಯಾಗಿದ್ದಾಗ , ಲೋಹಪುರುಷನೆಂದೇ ವಂಧಿ ಮಾಗಧರಿಂದ ಕರೆಸಿಕೊಳ್ಳುತ್ತಿದ್ದ ಎಲ್.ಕೆ. ಆದ್ವಾನಿ ಕೇಂದ್ರ ಗೃಹ ಸಚಿವರಾಗಿದ್ದಾಗ ಈ ಬೇಡಿಕೆಯನ್ನು ಖಂಡ ತುಂಡವಾಗಿ ನರಾಕರಿಸಿದ್ದರು! ಸ್ವತಃ ಇಂತಹ ಪ್ರಜಾಸತ್ತಾತ್ಮಕ ಬೇಡಿಕೆಗಳ ಬಗ್ಗೆ ತೀರಾ ವಿರೋಧವಿರುವ ಬಿಜೆಪಿಯು ಆಕ್ಷೇಪಿಸಿದ್ದು ಸಹಜವೇ ಆಗಿತ್ತು. ಆದರೆ ಅದರ ನಂತರವೂ ತನ್ನ ನಟನೆಯನ್ನು ಬಿಟ್ಟಿರಲಿಲ್ಲವೆಂಬುದು ಅನುಕೂಲ ಸಿಂಧು ರಾಜಕೀಯದ ಸೂಚಕ.

ಈ ಅಧಿವೇಶನದಲ್ಲೇ ಅಂಗೀಕಾರ ಬೇಕು

ಮಸೂದೆಯ ಕರಡಿನ ಬಗ್ಗೆ ಬಿಜೆಪಿ ಸರಕಾರ ವಿರೋಧ ವ್ಯಕ್ತಪಡಿಸಿದ್ದು ತರ್ಕಹೀನವಾಗಿತ್ತು. ಅಂದ

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್



ಹೈ-ಕ ವಿಶೇಷ ಸ್ಥಾನಮಾನ....

ಪುಟ 3 ರಿಂದ

ಮಾತ್ರಕ್ಕೆ ಈಗ ಕಾಂಗ್ರೆಸ್ ಪ್ರಸ್ತಾಪಿತ ಸೂಚನೆಗಳೆಲ್ಲಾ ಸರಿಯಾಗಿವೆಯೆಂದು ಇದರರ್ಥವಲ್ಲ. ರಾಜ್ಯದ ಅಧಿಕಾರಗಳನ್ನು ಮೊಟಕು ಮಾಡುವ ಅದರಲ್ಲಿನ ಹಲವಾರು ಅಂಶಗಳನ್ನು ಬದಲಾಯಿಸಲೇ ಬೇಕಿದೆ. ಆದರೆ ಬಿಜೆಪಿ ಇಂತಹ ತಕರಾರರನ್ನು (ಇದ್ದಲ್ಲಿ) ಸಕಾರಣವಾಗಿ ಮಂಡಿಸಿಲ್ಲ ಎಂಬುದು ಗಮನಾರ್ಹ. ಇಂದಿನ ಸನ್ನಿವೇಶದಲ್ಲಿ ಆ ಮಸೂದೆ ಅಂಗೀಕಾರವಾಗದೇ ಮುಂದಕ್ಕೆ ದೂಡುವುದು ಅಥವಾ ದೂಡಿಸುವುದು ಎಂದರೆ ಅದನ್ನು ಮೂಲೆಗೆ ತಳ್ಳಿದಂತೆಯೇ ಸರಿ. ಆದ್ದರಿಂದ ಅದು ಮಂಡಿತವಾದಾಗ ನಿರ್ದಿಷ್ಟ ತಿದ್ದುಪಡಿಗಳನ್ನು ಸೂಚಿಸಿ ಅಂಗೀಕಾರಗೊಳ್ಳುವಂತಾಗಬೇಕು.

ಸರಕಾರ ವಿಫಲ

ಇದರ ಪೂರ್ವಭಾವಿ ಸಮಾಲೋಚನೆಯನ್ನು ಅದಕ್ಕಾಗಿ ಬಳಸಿಕೊಳ್ಳಬೇಕಿತ್ತು. ಹಾಗೆ ಮಾಡಲು ರಾಜ್ಯ ಸರಕಾರ ಮುಂದಾಗಲಿಲ್ಲ. ಇವನ್ನೆಲ್ಲಾ ಯೋಚಿಸಲು ಶೆಟ್ಟರ್‌ಗಾಗಲೀ, ಗೃಹ ಸಚಿವ ಅಶೋಕ್‌ಗಾಗಲೀ, ಉಳಿದ ನಾಯಕ ಮಣಿಗಳಿಗೆ ಪುರುಸೊತ್ತಾದರೂ ಎಲ್ಲಿದೆ ? ಅದೂ ಭಿನ್ನಮತ, ಕಿತ್ತಾಟ, ಪಕ್ಷ ವಿಭಜನೆಯಾಗಿ ಸರಕಾರವೇ ಉರುಳುವ ಆತಂಕದಲ್ಲಿ ಇರುವಾಗ ರಾಜ್ಯದ ಹಿತಚಿಂತನೆಗೆ ವ್ಯವದಾನವಾದರೂ ಎಲ್ಲಿ?

ಬಾಧ್ಯತೆ

ಈಗಾಗಲೇ ದೇಶದ ಹಲವು ರಾಜ್ಯಗಳ ಕೆಲವು ಪ್ರದೇಶಗಳಲ್ಲಿ 371 ರ ಅಡಿ ಇಂತಹ ಸೌಲಭ್ಯ ನೀಡಲಾಗಿದೆ. ಅದರಂತೆ ಇಲ್ಲಿಯೂ ಶಿಕ್ಷಣ ಮತ್ತು ಉದ್ಯೋಗದಲ್ಲಿ ವಿಶೇಷ ಆದ್ಯತೆಯಾಗಿ ಪರಿಗಣಿಸಿ ಮೀಸಲು ಕಲ್ಪಿಸುವ ಅವಕಾಶಗಳನ್ನು ಒದಗಿಸಲಾಗಿದೆ. ಇದಲ್ಲದೇ ಹೈ-ಕ ಪ್ರದೇಶಕ್ಕೆ ಆರ್ಥಿಕ, ಬೌಗೋಳಿಕ ಅಭಿವೃದ್ಧಿಯ ಹಿನ್ನೆಲೆಯಲ್ಲಿ ಇತರೆ ಕೆಲವೆಡೆ ಇರುವಂತೆ ಈ ವ್ಯಾಪ್ತಿಯ ಜಿಲ್ಲೆಗಳಿಗೆ ಪ್ರತ್ಯೇಕ ಅಭಿವೃದ್ಧಿ ಮಂಡಳಿಯನ್ನು 371 ಜೆ (1) ರ ಅಡಿ ರಚಿಸಲು ಅವಕಾಶ ಸಿಗಲಿದೆ. ಅಭಿವೃದ್ಧಿಗಾಗಿ ಮಂಡಳಿ ಕೈಗೊಳ್ಳುವ ಕ್ರಮಗಳ ವರದಿಯನ್ನು ರಾಜ್ಯದ ವಿಧಾನಸಭೆಗೆ ಮಂಡಿಸುವ ಬಾಧ್ಯತೆ ಇರುತ್ತದೆ.

ಇಲ್ಲಿ ಗಮನಸಬೇಕಾದದ್ದು, ಈ ಮಂಡಳಿಗೆ ರಾಷ್ಟ್ರಪತಿಗಳ ಪ್ರತಿನಿಧಿಯಾಗಿರುವ ರಾಜ್ಯಪಾಲರೇ ಅಧ್ಯಕ್ಷರಾಗಿ ಅವರ ವ್ಯಾಪ್ತಿಯಲ್ಲಿಯೇ ಕೆಲಸ ಮಾಡಬೇಕಾಗುತ್ತದೆ ಎಂಬುದು. ಮಂಡಳಿಗೆ ಸದಸ್ಯರ ನೇಮಕಾತಿ, ಅಭಿವೃದ್ಧಿ ಯೋಜನೆಗಳು ಎಲ್ಲವೂ ಅವರೇ ನೋಡಿಕೊಳ್ಳುತ್ತಾರೆ. ಇದು ವಿದರ್ಭದಲ್ಲಿದೆ. ಅದರಂತೆ ನಮ್ಮಲ್ಲಿಯೂ ತರಲಿರುವ ಮಸೂದೆಗೆ ಇಂತಹ ತಿದ್ದುಪಡಿಯನ್ನು ಪ್ರಸ್ತಾಪಿಸಲಾಗಿದೆ.

ಇಲ್ಲಿ ಒಂದು ಸರಿಯಾದ ನಿಲುವು ತೆಗೆದುಕೊಳ್ಳುವುದು ಅಗತ್ಯ.

ನಮ್ಮದು ಒಕ್ಕೂಟದ ವ್ಯವಸ್ಥೆಯಾಗಿದ್ದು ಚುನಾಯಿತ ಸರಕಾರವನ್ನು , ಜನಪ್ರತಿನಿದಿಯಾಗಿರುವ ವಿಧಾನಸಭೆಯನ್ನು ನಿರ್ಲಕ್ಷಿಸಿ ನೇರವಾಗಿ ಕೇಂದ್ರ ಎಲ್ಲವನ್ನೂ ನಿರ್ವಹಿಸುವುದು ಸರಿಯಲ್ಲ. ಈ ಹಿನ್ನೆಲೆಯಲ್ಲಿ ಎಲ್ಲಿಯೇ ಆಗಲಿ ರಾಜ್ಯದ ಹಕ್ಕುಗಳನ್ನು ಮೊಟಕುಗೊಳಿಸುವುದನ್ನು ಖಂಡಿತ ಒಪ್ಪಲಾಗುವುದಿಲ್ಲ. ಆದ್ದರಿಂದ ಈ ಅಂಶವನ್ನು ಪರಿಗಣಿಸಿ ಅಗತ್ಯ ಬದಲಾವಣೆಗಳನ್ನು ಒಳಗೊಂಡ ಮಸೂದೆಯನ್ನು ತಂದು ಸಂಸತ್‌ನಲ್ಲಿ ಮಂಡಿಸಿ ಅಂಗೀಕರಿಸಬೇಕು. ಇದಕ್ಕೆ ಬೇಕಾಗಿರುವುದು ಗಂಭೀರವಾದ ಪ್ರಯತ್ನ.

ಸರ್ವಾಧಿಕಾರಿತನ

ಆದರೆ ಇಲ್ಲಿ ಬಿಜೆಪಿ ಪಕ್ಷ ಹಾಗೂ ಸರಕಾರಕ್ಕೆ ಸಂಕುಚಿತ ಹಿತಾಸಕ್ತಿಗಳಿರುವಂತೆಯೇ ಕಾಂಗ್ರೆಸ್ ಪಕ್ಷಕ್ಕೂ ಸಹ ತನ್ನದೇ ಆದ ಹಿತಾಸಕ್ತಿಗಳಿವೆ. ಮೊದಲನೆಯದಾಗಿ ಅದು ಪ್ರಜಾಪ್ರಭುತ್ವೀಕರಣಕ್ಕೆ ವಿರೋಧವಾಗಿದ್ದು ಸರ್ವಾಧಿಕಾರಿಯಾಗಿದೆ, ಪ್ರಧಾನ ನೀತಿಗಳಲ್ಲಿ ಸಂಸತ್ತನ್ನೇ ಕಡೆಗಣಿಸಿ ಬದಲಾಯಿಸಿ ಜಾರಿಗೊಳಿಸುವ ದಾರ್ಷ್ಟ್ಯವನ್ನು ಸರಕಾರ ತೋರುತ್ತಿದೆ, ನೀತಿಗಳನ್ನೇ ಬುಡಮೇಲುಗೊಳಿಸುವ ಪ್ರವೃತಿಯನ್ನು ಮನಮೋಹನಸಿಂಗ್ ತೋರಿಸುತ್ತಿದ್ದು ಈ ದೃಷ್ಟಿಯಲ್ಲಿ ಸರಕಾರ ಹೆಚ್ಚೆಚ್ಚು ಸರ್ವಾಧಿಕಾರಿಯಾಗುತ್ತಿದೆ. ಚಿಲ್ಲರೆ ವ್ಯಾಪಾರ ಕ್ಷೇತ್ರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ವಿಷಯದಲ್ಲಿ ಅದು ಇನ್ನಷ್ಟು ನಗ್ನಗೊಂಡಿದೆ.

ಕಾಳಜಿಯಿಲ್ಲದ ಮೇಲೆ...

ಇಂತಹ ವಾತಾವರಣದಲ್ಲಿ ನಿಜಕ್ಕೂ ಬಿಜೆಪಿ ,ಕಾಂಗ್ರೆಸ್ ಪಕ್ಷಗಳಿಗೆ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಿ ಸಮಾನ ಅಭಿವೃದ್ಧಿ ಸಾಧಿಸುವುದು ಬೇಕಿಲ್ಲ. ಅಸಮಾನತೆಯೇ ಮೂಲವಾಗಿರುವ ಅವರ ಬಂಡವಾಳಶಾಹಿ ಆರ್ಥಿಕತೆಗೆ ಅಂತಹ ಚಿಂತನೆಯು ವಿರುದ್ಧವಾದುದು. ಆದ್ದರಿಂದಲೇ 371ರ(ಜೆ) ಅಡಿಯಲ್ಲಿ ತಿದ್ದುಪಡಿ ತಂದಿರುವ ಯಾವ ಪ್ರದೇಶವೂ ಗಮನಾರ್ಹವಾದ ಮುನ್ನಡೆಯನ್ನು ಸಾಧಿಸಿಲ್ಲ, ಪರಿಸ್ಥಿತಿಯೂ ಬದಲಾಗಿಲ್ಲ ಎಂಬುದನ್ನು ಹಲವಾರು ಅಧ್ಯಯನಗಳು ತೋರಿಸಿವೆ. ನಿಜ ಕಾಳಜಿ ಇಲ್ಲದೇ ಕೇವಲ ಚುನಾವಣೆ ಲಾಭ ಮತ್ತು ಹಣ ದೋಚಲು ಹೊಂಚು ಹಾಕುವಂತಹ ತೋರುಂಬ ಲಾಭ ಕಾಣುವವರಿಂದ ಇನ್ನೇನು ಮಾಡಲಾದೀತು? ಆಳುವ ಮತ್ತು ವಿರೋಧ ಪಕ್ಷಗಳೂ ಅವರೆ ಆಗಿರುವಾಗ 'ಜನತೆ ತಮ್ಮ ಹಕ್ಕು ಪತ್ರವನ್ನು 'ಅವರಿಗೆ ಒಪ್ಪಿಸಿಕೊಡಲಾದೀತೆ.

ಕಾಮ್ರೇಡ್ ಕೆ.ವಿ. ಶ್ರೀನಿವಾಸನ್ ಸ್ಮಾರಕಭವನ ನಿರ್ಮಾಣ ಗ್ರಾಮ ಪಂಚಾಯ್ತಿಗೆ ಹಸ್ತಾಂತರ

ಅಖಿಲ ಭಾರತ ವಿಮಾ ನೌಕರರ ಸಂಘವು 2009 ರಲ್ಲಿ ಕರ್ನಾಟಕದಲ್ಲಿ ಬಂದಂತಹ ಪ್ರಕೃತಿ ವಿಕೋಪದ ಪರಿಣಾಮವಾಗಿ ಹಾನಿಗೊಳಗಾದ ಪ್ರದೇಶದ ಪರಿಹಾರ ಕಾರ್ಯದ ಭಾಗವಾಗಿ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಪಲಕನ ಮರಡಿ ಗ್ರಾಮ ಪಂಚಾಯತ್ ಅಡಿಯಲ್ಲಿ ಬರುವ ಮದರಕಲ್ ಗ್ರಾಮದಲ್ಲಿ ನಿರ್ಮಿಸಿರುವ ಸಮುದಾಯ ಭವನ ಉದ್ಘಾಟನೆ ಕಾರ್ಯಕ್ರಮವು ದಿನಾಂಕ 27-10-2012 ರಂದು ಅತ್ಯಂತ ಅದ್ದೂರಿಯಾಗಿ ನೆರವೇರಿತು. ಸುಮಾರು ಸಾವಿರ ದಷ್ಟಿದ್ದ





ಸಾರ್ವಜನಿಕರ ಮಧ್ಯೆ ಭವನದ ಉದ್ಘಾಟನೆಯನ್ನು ಅಖಿಲ ಭಾರತ ವಿಮಾ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕಾ!! ಕೆ.ವೇಣುಗೋಪಾಲ್ ನೆರವೇರಿಸಿದರು. ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಕಾಂ. ಕೆ.ವೇಣುಗೋಪಾಲ್ ಸಂಘಟನೆಯು ದೇಶದ ಯಾವುದೇ ಭಾಗದಲ್ಲಿ ಪ್ರಕೃತಿ ವಿಕೋಪ ಸಂಭವಿಸಿದಾಗ ಸಂಕಷ್ಟಕ್ಕೆ ಒಳಗಾದ ಜನರಿಗೆ ತಕ್ಕ ಮಟ್ಟಿನ ಸಹಾಯ ಮಾಡುವುದು ಹಿಂದಿನಿಂದಲು ಹಾಕಿಕೊಂಡು ಬಂದ ಪರಂಪರೆ ಅದರ ಭಾಗವಾಗಿ 2009ರ ನೆರಹಾವಳಿಯಿಂದ ತೊಂದರೆಗೊಳಗಾದ ಮದರಕಲ್ ಗ್ರಾಮಕ್ಕೆ ಈ ಸಮುದಾಯ ಭವನವನ್ನು ನಾವು ನಿರ್ಮಿಸಿ ಕೊಟ್ಟಿದ್ದೇವೆ ಭವನವನ್ನು ಹೈದರಬಾದ್ ಕರ್ನಾಟಕ ರಾಜ್ಯಗಳ ವಿಮಾ ನೌಕರರ ಸಂಘದ ಮುಂಚೂಣಿ ನಾಯಕರ, ಸಂಘಟಿತ ಅಸಂಘಟಿತ ಕಾರ್ಮಿಕರ ಮಧ್ಯೆ ಐಕ್ಯ ಚಳುವಳಿಗಾಗಿ ನಿರಂತರ ಶ್ರಮಿಸಿದ ಕಾ. ಕೆ.ವಿ.ಶ್ರೀನಿವಾಸನ್‌ರ ನಾಮಕರಣ ಮಾಡಿರುವದು ಅತ್ಯಂತ ಸೂಕ್ತವಾಗಿದ್ದು. ಈ ಭವನ ಇನ್ನು ಮುಂದೆ ಈ ಭಾಗದ ಜನರ ಉಪಯೋಗಕ್ಕೆ ಮುಡಿಪಾಗಲಿ.

ಅಲ್ಲದೆ, ಪ್ರಜಾಸತ್ತಾತ್ಮಕ ಚಳುವಳಿ ಬೆಳೆದು ಬರಲು ಈ ಭವನವು ಕೇಂದ್ರವಾಗಲಿ ಎಂದು ಹಾರೈಸಿದರು. ಮುಖ್ಯ ಅತಿಥಿಗಳಾಗಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಕಾಂ. ಜಿ.ವಿ.ಶ್ರೀರಾಮ ರೆಡ್ಡಿ ಮಾತನಾಡಿ, ದೇಶದ ಕಾರ್ಮಿಕ ಚಳುವಳಿಯಲ್ಲಿ ಅಖಿಲ ಭಾರತ ವಿಮಾ ನೌಕರರ ಸಂಘವು ಒಂದು ವಿಶಿಷ್ಟವಾದ ಸಂಘಟನೆ. ಸೌಕರ್ಯ ಸೌಲಭ್ಯಗಳನ್ನು ಪಡೆದುಕೊಳ್ಳುವ ಮಟ್ಟಿಗೆ ಮಾತ್ರವೇ ಸೀಮಿತವಾಗದ ಈ ಸಂಘದ ಕಾರ್ಯಚಟುವಟಿಕೆ ಯಾವುದೇ ಸರಕಾರವು ಮಾಡದ ಜನಪರ ಕೆಲಸ ಮಾಡುತ್ತಿದೆ. ಈ ಭವನ ನಿರ್ಮಿಸುವ ಮೂಲಕ ಅದನ್ನು ಮತ್ತೊಮ್ಮೆ ಸಾಬಿತು ಮಾಡಿದೆ. ಇದು ಸರಕಾರದ ಕಣ್ಣು ತೆರೆಸಬೇಕು ಎಂದು ಅವರು ಹೇಳಿದರು. ನೆರೆ ಬಂದು 3 ವರ್ಷ ಕಳೆದು ಸಮಾರು 1,200 ಕೋಟಿ ರೂ.ಗಳು ಸಂಗ್ರಹವಾಗಿದ್ದು ರಾಜ್ಯ ಸರಕಾರ ಇದುವರೆಗೆ ವಿನಿಯೋಗ ಮಾಡಿಲ್ಲ ಇಂತಹ ನಿಷ್ಕ್ರಿಯ ಸರಕಾರಗಳನ್ನು ಕಿತ್ತು ಹಾಕಿ ಜನಪರ ಸರಕಾರಗಳನ್ನು ಸ್ಥಾಪನೆ ಮಾಡುವ ಅವಶ್ಯಕತೆ ಇದೆ ಎಂದು ಅವರು ಈ ಸಂದರ್ಭದಲ್ಲಿ ಜನತೆಗೆ ಕರೆ ನೀಡಿದರು. ವೇದಿಕೆ ಮೇಲೆ ಸಂಘದ ಅಖಿಲ ಭಾರತ ಹಾಗೂ ದಕ್ಷಿಣ ಮಧ್ಯ ವಲಯ ವಿಮಾ ನೌಕರರ ಒಕ್ಕೂಟದ ಮುಖಂಡರುಗಳು, ಗ್ರಾಮ ಪಂಚಾಯತ್ ಅಧ್ಯಕ್ಷರು, ಸದಸ್ಯರುಗಳು ಉಪಸ್ಥಿತರಿದ್ದರು.

ಅತ್ಯಂತ ಆಯಕಟ್ಟಿನ ಸ್ಥಳದಲ್ಲಿ ನಿರ್ಮಾಣಗೊಂಡಿರುವ ಈ ಭವನವು ಸುತ್ತಮುತ್ತಲಿನ ಗ್ರಾಮಗಳಲ್ಲೇ ಒಂದು ಆಕರ್ಷಕ ಭವನವಾಗಿದ್ದು, ಕಾರ್ಯಕ್ರಮದ ಕೊನೆಗೆ ಕಟ್ಟಡವನ್ನು ಪಲಕನ ಮರಡಿ ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಲಾಯಿತು.

ವರದಿ: ಪಿ.ಶ್ರೀಧರ್

ಜನಶಕ್ತಿ
ಕನ್ನಡ ವಾರಪತ್ರಿಕೆ

ಜನಮನ ಸೆಳೆದ ಬಸವ ಕಲ್ಯಾಣ ಜಾಥ

ಕರ್ನಾಟಕದಲ್ಲಿ ರಾಜಕೀಯ ಗೊಂದಲ ತೀವ್ರಗೊಳ್ಳುತ್ತಿದೆ. ಆಡಳಿತ ಪಕ್ಷವಾದ ಬಿಜೆಪಿ ವಿಭಜನೆಯಾಗಿದೆ. ವಿಭಜನೆ ಪೂರ್ವದಲ್ಲಿ ಪರಸ್ಪರ ಕೆಸರೆರಚಾಟ, ಬಲ ಪ್ರದರ್ಶನ ಕುರಿತು ಪತ್ರಿಕೆಗಳಲ್ಲಿ ಸುದ್ದಿಗಳು ಬರುತ್ತಿದ್ದವು ವಿಶೇಷವಾಗಿ ದೃಶ್ಯ ಮಾಧ್ಯಮಗಳು ವೈಭವೀಕರಿಸಿ ತೋರಿಸುತ್ತಿದ್ದವು.

ಕೇಂದ್ರ ಸರ್ಕಾರದಲ್ಲಿನ ಭ್ರಷ್ಟಾಚಾರದ ಬೃಹತ್ ಹಗರಣಗಳು ಬೆಳಕಿಗೆ ಬರುತ್ತಿರುವುದು. ವಿಶೇಷವಾಗಿ ಸೋನಿಯಾಗಾಂಧಿಯ ಅಳಿಯನ ಮೇಲಿನ ಆರೋಪ ಸಿ.ಎ.ಜಿ ವರದಿಗಳು, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳದ ಕುರಿತು ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆಸಬೇಕು ಎನ್ನುವ ವಿಚಾರ ವಾರಗಟ್ಟಲೆ ಪತ್ರಿಕೆಗಳಲ್ಲಿ ಪ್ರಸಾರವಾಯಿತು. ಯಡಿಯೂರಪ್ಪ ಮೇಲಿನ ಸಿಬಿಐ ಚಾರ್ಜ್‌ಶೀಟ್ 40 ಕೋಟಿ ರೂ ಜಿಂದಾಲ್‌ನಿಂದ ಪಡೆಯುವಾಗ ನಕಲಿ ದಾಖಲೆ ಸೃಷ್ಟಿಸಿದ್ದು.

ಚುನಾವಣಾ ಸಿದ್ಧತೆಯಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಹಾಗೇ ಶ್ರೀರಾಮುಲು, ಯಡಿಯೂರಪ್ಪನವರ ಪಕ್ಷಗಳು ಸಿದ್ಧತೆ ನಡೆಸಿವೆ. ರಾಜ್ಯಾದಾದ್ಯಂತ ಪಕ್ಷಗಳ ಮುಖಂಡರ ಪ್ರವಾಸ, ಹಣವಂತರನ್ನು, ರೀಯಲ್ ಎಸ್ಟೇಟ್‌ದಾರರನ್ನು ಲಿಕ್ಕರ್ ಲಾಭಿಗಳನ್ನು ಅಭ್ಯರ್ಥಿಗಳನ್ನಾಗಿ ಚುನಾವಣೆಗೆ ನಿಲ್ಲಿಸಲು ಹುಡುಕುತ್ತಿದ್ದಾರೆ. ಅದಕ್ಕೆ ಹಣವಂತರು ಸಭೆ ಸಮಾರಂಭಗಳನ್ನು ನಡೆಸುತ್ತಿದ್ದಾರೆ. ಕಾಂಗ್ರೆಸ್ ಪಕ್ಷದಿಂದ ಚುನಾವಣಾ ಅಭ್ಯರ್ಥಿಗಳ ಹುಡುಕಾಟ, ಅಭ್ಯರ್ಥಿಗಳಾದವರ ಮಧ್ಯ ಪೈಪೋಟಿ, ಮಾರಾಮಾರಿ ಕುರಿತು ಪತ್ರಿಕೆಗಳಲ್ಲಿ ಸುದ್ದಿಗಳು ರಾರಾಜಿಸುತ್ತಿದ್ದವು. ಜನರು ಈ ಸಮಸ್ಯೆಗಳನ್ನೇ ಮಾತನಾಡುತ್ತಿದ್ದಾರೆ.

ಬಿಜೆಪಿಯ ನಾಲ್ಕುವರೆ ವರ್ಷಗಳ ಆಡಳಿತದಲ್ಲಿ ಒಂದು ಕುಟುಂಬಕ್ಕೆ ಸಿಗುತ್ತಿದ್ದ 20 ಕೆ.ಜಿ. ರೇಷನನ್ನು ಕಡಿತಗೊಳಿಸಿ ತಲಾ 4ಕೆ.ಜಿಗೆ ಇಳಿಸಿದರು. ಪಡಿತರ ಚೀಟಿ ಪಡೆಯುವುದಕ್ಕಾಗಿ ಜನರು ಅರ್ಜಿ ಹಾಕಿ ನೆಮ್ಮದಿ ಕೇಂದ್ರಗಳಿಗೆ ಹತ್ತಾರು ಬಾರಿ ತಿರುಗುವಂತಾಯಿತು. ರಾಜ್ಯಾದ್ಯಂತ ಬರಗಾಲದಲ್ಲಿ ಆಹಾರ ಉತ್ಪಾದನೆ ಕುಸಿದಿರುವುದು, ಬಡವರ ಮನೆಗಳಲ್ಲಿ ರೇಷನ್ ಸಂಗ್ರಹ ಇಲ್ಲದಿರುವುದು. ಕೆಲಸಕ್ಕಾಗಿ ದೊಡ್ಡ ಪ್ರಮಾಣದಲ್ಲಿ ವಲಸೆ ಹೊರಟಿರುವುದು. ಮಕ್ಕಳ ಅಪೌಷ್ಟಿಕತೆಯ ಬಗ್ಗೆ ರಾಜ್ಯಾದ್ಯಂತ ಓಡಾಡಿದ ನ್ಯಾಯಮೂರ್ತಿ ಎನ್.ಕೆ. ಪಾಟೀಲರ ಸಭೆಗಳು. ವಿದ್ಯುತ್ ಕ್ಷಾಮದಿಂದ ಹಳ್ಳಿಗಳಲ್ಲಿ ಕುಡಿಯುವ ನೀರು ಸಿಗದೆ ಇರುವುದು. ಕೃಷಿಗೆ ನೀರು ಸಿಗದೆ ಬೆಳೆಗಳು ಒಣಗುತ್ತಿರುವುದು, ಕಬ್ಬಿನ ಬೆಲೆ, ಬೆಂಬಲ ಬೆಲೆ ಚರ್ಚೆಗೆ ವಿಷಯವಾಗಿರುವುದು. ವಿಶ್ವ ಹೂಡಿಕೆದಾರರ ಸಮಾವೇಶದ ಹಿನ್ನೆಲೆಯಲ್ಲಿ ಭೂಸ್ವಾಧೀನ ಪ್ರಕ್ರಿಯೆಗಳು ನಡೆಯುತ್ತಿರುವುದು. ರಾಜ್ಯದ ಕಂದಾಯ ಕಾನೂನಿನ 109ರ ಅಡಿಯಲ್ಲಿ ಕಂಪನಿಗಳಿಗೆ ಭೂಮಿ ಖರೀದಿ ಮಾಡಲು ಅಧಿಕಾರ ನೀಡುತ್ತಿರುವುದು. ಗ್ಯಾಸ್ ಸಿಲಿಂಡರ ಕಡಿತ, ಬೆಲೆ ಹೆಚ್ಚಳದ ಪ್ರಕ್ರಿಯೆ. ಮಹಿಳೆಯರ ಮೇಲಿನ ದೌರ್ಜನ್ಯ ಮಕ್ಕಳ ಮೇಲೆ ಲೈಂಗಿಕ ದಾಳಿ. ಬೆಂಗಳೂರಿನಲ್ಲಿ ಹಾಡುಹಗಲೆ ನಡೆಯುವ ಕೊಲೆಗಳ ಸುದ್ದಿಗಳು, ರೈತರ ಆತ್ಮಹತ್ಯೆ ಪ್ರಕರಣಗಳು. ದಲಿತರ ಮೇಲಿನ ದೌರ್ಜನ್ಯ, 12740 ಸರಕಾರಿ ಕನ್ನಡ ಶಾಲೆಗಳನ್ನು ಮುಚ್ಚುವ ಪ್ರಕ್ರಿಯೆ, ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ, ಜನರ ಸಮಸ್ಯೆಗಳ ಬಗ್ಗೆ ಕಾಳಜಿ ಇಲ್ಲದೆ ಶಾಸಕರು, ಮಂತ್ರಿಗಳು, ವೈಭೋಗದ ಜೀವನ ನಡೆಸುತ್ತಿದ್ದಾರೆ. ಚುನಾವಣೆಯಲ್ಲಿ ಗೆಲ್ಲುವ ಪ್ರಯತ್ನದ ಭಾಗವಾಗಿ ಪಕ್ಷಾಂತರದ ಪ್ರಕ್ರಿಯೆಯಲ್ಲಿ ತೊಡಗಿರುವುದು. ಜನ ರಾಜಕಾರಣವೆಂದರೆ ಸ್ವಜನ ಪಕ್ಷಪಾತ, ಭ್ರಷ್ಟಾಚಾರ, ಹಣ ಸುಲಿಗೆ ಎಂದು ಬೇಸತ್ತು ಹೋಗಿದ್ದಾರೆ.


ಬಸವಕಲ್ಯಾಣದಲ್ಲಿ ಉದ್ಘಾಟನೆ – ಜಿ.ವಿ.ಶ್ರೀರಾಮರೆಡ್ಡಿ

ಇಂತಹ ಸಂದರ್ಭದಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ರಾಜ್ಯಾದಾದ್ಯಂತ ಜನರಲ್ಲಿ ಜಾಗೃತಿ ಮೂಡಿಸಲು ಜಾಥ ನಡೆಸಿದ್ದು ಸಮಯೋಚಿತವಾಗಿತ್ತು. ನವೆಂಬರ್ 19ರಂದು ಉದ್ಘಾಟನೆ ದಿನ ಬಸವಕಲ್ಯಾಣದಲ್ಲಿ ಹಾಗೂ ಹುಮ್ನಾಬಾದ್‌ನಲ್ಲಿ ಭಾಗವಹಿಸಿದ್ದ ಜನರಿಗೆ ಪರ್ಯಾಯ ದಾರಿಯನ್ನು ಕೇಳಿ ಅರ್ಥಮಾಡಿಕೊಳ್ಳುವ ಅವಕಾಶ ದೊರೆಯಿತು.

ಬಗರ್ ಹುಕುಂ ಸಾಗುವಳಿದಾರರಲ್ಲಿ ಹಕ್ಕು ಪತ್ರ ಪಡೆಯಲು ಹೋರಾಟ ನಡೆಸುವ ಛಲ ಎದ್ದುಕಾಣಿಸುತ್ತಿತ್ತು. 20–30 ವರ್ಷಗಳಿಂದ ಪಟ್ಟ ಸಿಗದಿರುವವರ ಭೂಮಿಯ ಹಸಿವನ್ನು ಎತ್ತಿ ತೋರಿಸುತ್ತಿತ್ತು. ಕಾರ್ಯಕರ್ತರು ಪರ್ಯಾಯ ರಾಜಕೀಯ ನೀತಿಗಳ ಪರಿಚಯ ಮಾಡಿಕೊಂಡು ಸ್ಫೂರ್ತಿ ಪಡೆದರು.

ಕಳೆದ 4–5 ವರ್ಷಗಳಿಂದ ರಾಜಕೀಯ ಚಟುವಟಿಕೆಗಳಿಲ್ಲದ ಗುಲ್ಬರ್ಗಾ ಯಾದಗಿರಿ ಜಿಲ್ಲೆಗಳಲ್ಲಿ ನಡೆದ 9 ಸಭೆಗಳು ರಾಜಕೀಯ ಚಟುವಟಿಕೆಗಳನ್ನು ಹುಟ್ಟು ಹಾಕಿವೆ. ಹಿಂದುಳಿವಿಕೆಯ ಸಮಸ್ಯೆಗಳ ಪರಿಹಾರಕ್ಕೆ ಕಲಂ 371 ಪರ್ಯಾಯವಲ್ಲ ಎಂಬುದು ಜನರಿಗೆ ಅರ್ಥವಾಗಿದೆ. ಚಿಂಚನಸೂರಿನಲ್ಲಿ ನಡೆದ ಸಭೆಯಲ್ಲಿ ನೂರಾರು ಜನ ರಾತ್ರಿಯವರಿಗೆ ಪಾಲ್ಗೊಂಡಿದ್ದರು. ಯು. ಬಸವರಾಜರವರ ಒಂದೂವರೆ ಗಂಟೆಗಳ ಭಾಷಣ ಅವರ ರಾಜಕೀಯ ಆಸಕ್ತಿಯನ್ನು ಕೆರಳಿಸಿದೆ. ಉದ್ಯೋಗ ಸೃಷ್ಟಿ, ಹಸಿವಿನ ನಿವಾರಣೆ, ತೆರಿಗೆ ರಹಿತ ತೊಗರಿಯ ಆಮದು ಪ್ರಮುಖ ಚರ್ಚೆಯ ವಿಷಯಗಳಾಗಿದ್ದವು.

ರಾಯಚೂರು ಜಿಲ್ಲೆಯ ಜಾಲಹಳ್ಳಿಯಲ್ಲಿ ಮೊಹರಂ ತಮಟೆಯ ಸದ್ದು, ಪೀರ್‌ಗಳಿಗೆ ನೈವೇದ್ಯ ಅರ್ಪಣೆ ಭರ್ಜರಿಯಾಗಿ ನಡೆದಾಗಲೂ 300ಕ್ಕಿಂತ ಹೆಚ್ಚು ಜನ ಸಭೆಯಲ್ಲಿ ಪಾಲ್ಗೊಂಡಿದ್ದರು. ದುಡಿಯುವ ಜನರ ರಾಜಕೀಯ ಪ್ರತೀಕವಾಗಲು ನೂರಾರು ಮಹಿಳೆಯರೂ ಕಾಂಗ್ರೆಸ್, ಬಿಜೆಪಿ ಸೋಲಿಸಲು ಪಣ ತೊಟ್ಟಿರುವುದು ಕಂಡುಬಂತು. ಕತ್ತಲ ರಾತ್ರಿಯ ದಿನ ಸಿರಿವಾರದಲ್ಲಿ ಗಣನೀಯ ಸಂಖ್ಯೆಯಲ್ಲಿ ಮುಸಲ್ಮಾನರು 3 ಕಿಲೋ ಮೀಟರ್‌ಗಿಂತ ಹೆಚ್ಚು ನಡೆದುಕೊಂಡು



ಜಾಥದಲ್ಲಿ ಭಾಗವಹಿಸಿದ್ದರು. ಮೊಹರಂ ಹಬ್ಬದಿಂದ ರಾಜಕೀಯ ಪ್ರಚಾರದ ಜಾಥಕ್ಕೆ ಯಾವ ಅಡ್ಡಿಯೂ ಆಗಲಿಲ್ಲ. ಸಿರಿವಾರದಲ್ಲಿ ದಲಿತ ಮಹಿಳೆಯರು ಕುಡಿಯುವ ನೀರಿನ ತೊಂದರೆಗೆ ಕಾಂಗ್ರೆಸ್‌ನವರೆ ಕಾರಣವೆಂದು ದೂರಿದರು. ಕೊನೆಗೆ ನೀರಿಗಾಗಿ ಹೋರಾಟ ರೂಪಿಸಲು ತೀರ್ಮಾನಿಸಿದರು.

ಗಂಗಾವತಿಯಲ್ಲಿ 400 ಜನ ಸೇರಿದ್ದರು. 4ದಿನಗಳ ಸ್ಥಳೀಯ ಜಾಥ ನಡೆಸಿದ ಸಿದ್ಧತೆಯಿಂದ ಈ ಸಭೆ ನಡೆಸಲಾಗಿತ್ತು. ಕನಕಗಿರಿಯಲ್ಲಿ ನಡೆದ ಸಭೆಯಲ್ಲಿ ಸುಡು ಬಿಸಿಲಿನಲ್ಲೂ ಜನರು ಉತ್ಸಾಹದಿಂದ ಪಾಲ್ಗೊಂಡಿದ್ದರು. ಕನಕಗಿರಿ ಕ್ಷೇತ್ರದ 29 ಗ್ರಾ.ಪಂಗಳಲ್ಲಿ 5000 ಮನೆ ನಿವೇಶನ ಅರ್ಜಿ ವಿಲೇವಾರಿ ಮಾಡದ ಶಾಸಕನಿಗೆ ಹಿಡಿಶಾಪ ಹಾಕಿದರು.

ಬಳ್ಳಾರಿ ಜಿಲ್ಲೆಯಲ್ಲಿ 5ಕಡೆ ಸಭೆಗಳು ನಡೆದವು. ಗಣಿ ಲೂಟಿ, ರೆಡ್ಡಿಯ ಬಂಧನ, ತಿರುಪತಿ ತಿಮ್ಮಪ್ಪನಿಗೆ ಟೋಪಿ ಹಾಕಿದ್ದು ಬಳ್ಳಾರಿ ಜನತೆಯ ಜೀವನ ಬದಲಾಗದೆ ಇರುವುದು. ಚರ್ಚೆಯ ವಿಷಯಗಳಾಗಿದ್ದವು. ಹರಪ್ಪನಹಳ್ಳಿಯಲ್ಲಿ ವೀರಭದ್ರೇಶ್ವರ ಜಾತ್ರೆ ಇದ್ದರೂ ಇಡೀ ಊರು ಜನ ಜಾತ್ರೆಯಲ್ಲಿ ತಲ್ಲೀನವಾಗಿದ್ದರೂ ಕೂಡಾ ನೂರಾರು ಜನ ಕಾರ್ಯಕರ್ತರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಚಿತ್ರದುರ್ಗದಲ್ಲಿ ಒಂದೆಡೆ ಕಾಂಗ್ರೆಸ್‌ನ ಸೇವಾದಳದ ಕಾರ್ಯಕ್ರಮ, ಪಕ್ಕದಲ್ಲಿ 400ಕ್ಕೂ ಹೆಚ್ಚು ಜನರಿಂದ ಕೂಡಿದ್ದ ಸಿಪಿಐ(ಎಂ) ಜಾಥದ ಸಭೆ, ಕನಿಷ್ಠ ಕೂಲಿಯ ಬಗ್ಗೆ ಚರ್ಚೆಯಾಯಿತು. ಕಾಂಗ್ರೆಸ್ ಕಛೇರಿಯ ಪಕ್ಕದಲ್ಲಿಯ ಸಭೆ ಆಯೋಜಿಸಲಾಗಿತ್ತು. ಭ್ರಷ್ಟಾಚಾರದ, ಹಗರಣಗಳ ಕುರಿತು ಹೇಳಿದಾಗ ಕಾಂಗ್ರೆಸ್‌ನ ನಾಯಕರು ತಲೆ ಕೆಳಗೆ ಮಾಡಿ ಕುಳಿತಿದ್ದರು.

ತುಮಕೂರು ಖಾಸಗಿ ಬಸ್ ನಿಲ್ದಾಣದಲ್ಲಿ ಸಾವಿರಾರು ಜನರು ಸೇರಿದ ಸಭೆಯಲ್ಲಿ ಬಿಜೆಪಿಯ ಕೋಮುವಾದ, ಅಡಿಕೆ, ರೇಷ್ಮೆ, ತೆಂಗಿನ ಬೆಲೆಗಳ ಕುಸಿತದ ಕುರಿತು ವಿಷಯಗಳು ಪ್ರಸ್ತಾಪವಾದವು. ಗೌರಿಬಿದನೂರಿನಲ್ಲಿ ಹೆಚ್. ನರಸಿಂಹಯ್ಯನವರ ಊರಾದ ಹೊಸೂರು ಗ್ರಾಮದಲ್ಲಿ ನಡೆದ ಸಭೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ಸರಕಾರ ನರಸಿಂಹಯ್ಯನವರ ಕನಸನ್ನು ನನಸಾಗಿಸಲಿಲ್ಲ ಎಂಬುದನ್ನು ಜನರೊಂದಿಗೆ ಚರ್ಚಿಸಲಾಯಿತು. 211 ಎಕರೆ ಅರಣ್ಯ ಭೂಮಿಯನ್ನು ಪಡೆಯಲು ಮಾಚಲಹಳ್ಳಿಯ ದಲಿತರು, ಬಡವರು ಭೂಸ್ವಾಧೀನ ಮಾಡಿಕೊಳ್ಳಲು ಪಣ ತೊಟ್ಟರು ನಂತರ ತಹಶೀಲ್ದಾರ್ ಕಛೇರಿ ಮುಂದೆ ಧರಣಿ ಆರಂಭಿಸಿಯೇ ಬಿಟ್ಟರು. ಅಂಗವಿಕಲನೊಬ್ಬ ಸರ್ಕಾರದ ಜನ ವಿರೋಧಿ ನೀತಿಗಳನ್ನು ಕೇಳಿ ಜಾಥ ತಂಡದವರನ್ನು ಕರೆದು ದೇಣಿಗೆ ನೀಡಿದ್ದು ವಿಶೇಷವಾಗಿತ್ತು.

ಬಾಗೇಪಲ್ಲಿಯಲ್ಲಿ 250ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳು ರ‍್ಯಾಲಿ ಮೂಲಕ ಜಾಥವನ್ನು ಅದ್ದೂರಿಯಾಗಿ ಸ್ವಾಗತಿಸಿಕೊಂಡವು.

ಪುಟ 12 ಕ್ಕೆ

ಎಫ್‌ಡಿಐ ವಿರೋಧಿಸಿ ಕಾರ್ಮಿಕರೊಂದಿಗೆ ವರ್ತಕರ ಪ್ರತಿಭಟನೆ

ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ನೇರ ಹೂಡಿಕೆ ವಿರೋಧಿಸಿ ಮಂಗಳೂರಿನಲ್ಲಿ ಚಿಲ್ಲರೆ ವ್ಯಾಪಾರಸ್ಥರು ಮತ್ತು ಕಾರ್ಮಿಕರು ಸಿಐಟಿಯು ಸಂಯೋಜಿತ ಬಂದರು ಶ್ರಮಿಕರ ಸಂಘ ಹಾಗೂ ಹಳೆ ಬಂದರು ಸಗಟು ಕಿರಾಣಾ ಮತ್ತು ಇತರ ವರ್ತಕರ ಸಂಘದ ಸಂಯುಕ್ತ ಭಾಗವಹಿಸುವಿಕೆಯಲ್ಲಿ ನವಂಬರ್ 22 ರಂದು ಬೃಹತ್ ಪ್ರತಿಭಟನೆಯನ್ನು ನಡೆಸಲಾಯಿತು.

ಕೆನರಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ (ಕೆಸಿಸಿಐ)ಯ ಸಭಾಂಗಣದಲ್ಲಿ ಸಭೆ ನಡೆಸುವುದಕ್ಕೆ ಮೊದಲು ಸಿಐಟಿಯು ನೇತೃತ್ವದಲ್ಲಿ ಬಂದರು ಶ್ರಮಿಕ ಸಂಘದವರು ಹಳೆ ಬಂದರಿನ ಬೀದಿಗಳಲ್ಲಿ ಎಫ್‌ಡಿಐ ವಿರುದ್ಧ ಮೆರವಣಿಗೆ ನಡೆಸಿದರು. ಮೆರವಣಿಗೆ ಮುಂದುವರಿಯುತ್ತಿದ್ದಂತೆಯೇ ಚಿಲ್ಲರೆ ವ್ಯಾಪಾರಿಗಳೂ, ಸಗಟು ವ್ಯಾಪಾರಿಗಳೂ ಜತೆಗೂಡಿ, ಮೆರವಣಿಗೆ ಬೃಹತ್ ಪ್ರತಿಭಟನೆಯಾಯಿತು. ಬೆಳಗ್ಗಿನಿಂದ ಮಧ್ಯಾಹ್ನ 12 ಗಂಟೆವರೆಗೆ ಹಳೆ ಬಂದರಿನಲ್ಲಿ ಸಗಟು ವಹಿವಾಟು ಸ್ಥಗಿತಗೊಂಡು ಬಂದ್‌ನಂತೆ ಕಂಡು ಬಂತು.



ಪ್ರತಿಭಟನೆಯನ್ನು ಉದ್ದೇಶಿಸಿ ಹಳೆ ಬಂದರು ಸಗಟು ಕಿರಾಣಾ ಮತ್ತು ವರ್ತಕರ ಸಂಘದ ಅಧ್ಯಕ್ಷ ಜಿ.ಜಿ.ಮೋಹನ್‌ದಾಸ್, ಸಿಐಟಿಯು ದ.ಕ.ಜಿಲ್ಲಾ ಸಮಿತಿ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಮಾತನಾಡಿದರು. ಬಂದರು ಶ್ರಮಿಕರ ಸಂಘದ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ವಂದಿಸಿದರು.

★

ಉಡುಪಿಯಲ್ಲಿ ಬೀಡಿ ಕಾರ್ಮಿಕರ ಪ್ರತಿಭಟನೆ:

ಬೀಡಿ ಕಾರ್ಮಿಕರಿಗೆ ವಾರದ ಆರು ದಿನವೂ ಕೆಲಸ ನೀಡಬೇಕು, ಕೆಲಸ ನೀಡದ ದಿನಗಳಿಗೆ ಕಾನೂನು ಪ್ರಕಾರ ಗ್ಯಾರಂಟೀಡ್ ವೇತನ ನೀಡಬೇಕು, ಉತ್ತಮ ಗುಣಮಟ್ಟದ ಕಚ್ಚಾ ವಸ್ತು ನೀಡಬೇಕು, ದಂಡ ವಸೂಲಿ ನಿಲ್ಲಬೇಕು ಎಂದು ಆಗ್ರಹಿಸಿ ಉಡುಪಿ ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ (ಸಿಐಟಿಯು) ನೇತೃತ್ವದಲ್ಲಿ ಉಡುಪಿ ಜಿಲ್ಲೆಯ ಬೀಡಿ ಕಾರ್ಮಿಕರು ನವಂಬರ್ 22 ರಂದು ಉಡುಪಿಯ ವಿವಿದೆಡೆಗಳಲ್ಲಿ ಪ್ರತಿಭಟನೆ ನಡೆಸಿದರು.


ಮಲ್ಪೆ ಮತ್ತು ಉಡುಪಿಯ ಬೀಡಿ ಕಾರ್ಮಿಕರು ಉಡುಪಿಯ ಭಾರತ್ ಬೀಡಿ ವರ್ಕ್ಸ್ ಕಂಪೆನಿಯ ಎದುರು ಕುಂದಾಪುರ ಮತ್ತು ಬ್ರಹ್ಮಾವರದ ಕಾರ್ಮಿಕರು ಸಂತೆಕಟ್ಟೆಯ ಸೌತ್ ಕೆನರಾ ಹೋಂ ಇಂಡಸ್ಟ್ರೀಸ್ ಎದುರು ಕಾಪು ಪ್ರದೇಶದ ಕಾರ್ಮಿಕರು ಶರ್ಫುದ್ದೀನ್ ಜಾಫರ್ ಕಂಪೆನಿಯ ಎದುರು ಮತ ಪ್ರದರ್ಶನ ನಡೆಸಿದರು.

ಉಡುಪಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಸಿಐಟಿಯು ಮುಖಂಡರಾದ ಪಿ.ವಿಶ್ವನಾಥ ರೈ, ದೋಗು ಸುವರ್ಣ, ವಿದ್ಯಾರಾಜ್, ಬೀಡಿ ಕಾರ್ಮಿಕರ ಸಂಘಟನೆಯ ರಾಜು ಪೂಜಾರಿ, ಉಮೇಶ್ ಕುಂದರ್, ಸುಜಾತ ಶೆಟ್ಟಿ, ಸುಗಂಧಿ ಕೆಳಾರ್ಕಳಬೆಟ್ಟು, ನಳಿನಿ ಲಕ್ಮೀನಗರ, ಶಾರದಾ ಮಲ್ಪೆ ಮತ್ತಿತರರು ಭಾಗವಹಿಸಿದ್ದರು.

★

ಉಡುಪಿಯಲ್ಲಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಾವೇಶ:

ಕೇಂದ್ರ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ಮತ್ತು ದುಡಿಯುವ ಜನರ 10 ಪ್ರಮುಖ ಬೇಡಿಕೆಗಳನ್ನು ಒತ್ತಾಯಿಸಿ ಉಡುಪಿ ಜಿಲ್ಲಾ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ವತಿಯಿಂದ ನವಂಬರ್ 27 ರಂದು ಉಡುಪಿ ಜಿಲ್ಲಾ ಕಾರ್ಮಿಕರ ಸಮಾವೇಶ ನಡೆಯಿತು.




ಸಮಾವೇಶವನ್ನು ಉದ್ದೇಶಿಸಿ ಸಿಐಟಿಯು ರಾಜ್ಯ ಮುಖಂಡರಾದ ಬಾಲಕೃಷ್ಣ ಶೆಟ್ಟಿ ಮಾತನಾಡಿದರು. ಸಮಿತಿಯ ಜಿಲ್ಲಾ ಸಂಚಾಲಕರಾದ ಅದಮಾರು ಶ್ರೀಪತಿ ಆಚಾರ್ಯ, ಸಿಐಟಿಯುವಿನ ಕೆ.ಶಂಕರ್, ಎಐಟಿಯುಸಿಯುನ ಕೆ.ವಿ.ಭಟ್, ಜಿಲ್ಲಾ ಬ್ಯಾಂಕ್ ನೌಕರ ಸಂಘದ ಯು.ಶಿವರಾಯ, ವಿಮಾ ನೌಕರರ ಸಂಘದ ಯು.ಗುರುದತ್, ಬಿಎಸ್ಸೆನ್ನೆಲ್ ನೌಕರರ ಸಂಘದ ಶಶಿಧರ ಗೊಲ್ಲ ಮತ್ತಿತರರು ಉಪಸ್ಥಿತರಿದ್ದರು.

★

ಅಂಬ್ಲಮೊಗರಿನಲ್ಲಿ ಡಿವೈಎಫ್‌ಐ ನಿಂದ ರಸ್ತೆ ತಡೆ:

ರಾಜ್ಯ ಸರಕಾರಿ ಬಸ್ಸುಗಳಿಗೆ ಖಾಸಗಿ ಬಸ್ಸುಗಳ ಪೈಪೋಟಿಯಿಂದಾಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದೆ. ಮಂಗಳೂರು-ಎಲ್ಯಾರುಪದವಿಗೆ ನಿಗದಿಗೊಳಿಸಲಾಗಿದ್ದ ಸರಕಾರಿ ಬಸ್ ಸಂಚಾರ ಆರಂಭಿಸಬೇಕು, ಸರಕಾರಿ ಬಸ್ಸುಗಳಲ್ಲಿ ಟಿಕೇಟು ದರ ಕಡಿಮೆಗೊಳಿಸಬೇಕು, ವಿದ್ಯಾರ್ಥಿಗಳಿಗೆ ರಿಯಾಯತಿ ದರ ನೀಡಬೇಕು ಎಂದು ಆಗ್ರಹಿಸಿ ಡಿವೈಎಫ್‌ಐ ಅಂಬ್ಲಮೊಗರು ಘಟಕದ ವತಿಯಿಂದ ಅಂಬ್ಲಮೊಗರುವಿನಲ್ಲಿ ರಸ್ತೆ ತಡೆ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯನ್ನುದ್ದೇಶಿಸಿ, ಸಿಪಿಐ(ಎಂ) ಉಳ್ಳಾಲ ವಲಯ ಸಮಿತಿ ಕಾರ್ಯದರ್ಶಿ ಕೃಷ್ಣಪ್ಪ ಸಾಲ್ಯಾನ್ ಮಾತನಾಡಿದರು. ಡಿವೈಎಫ್‌ಐ ಹಾಗೂ ಸಿಪಿಐ(ಎಂ) ಕಾರ್ಯಕರ್ತರಾದ ಜಯಂತ್ ಎಸ್.ಪೂಜಾರಿ, ಶಿವದಾಸ್, ಸಲೀಂ, ಅಶ್ರಫ್, ಕಿರಣ್ ಡಿಸೋಜ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.



★

ಎಫ್‌ಡಿಐ ವಿರೋಧಿಸಿ ಮಂಗಳೂರಿನಲ್ಲಿ ಸಮಾವೇಶ

ಕಡಲತಡಿ

ವರದಿ : ವಾ.ಉ.

ಚಿಲ್ಲರೆ ಮಾರಾಟದಲ್ಲಿ ವಿದೇಶೀ ನೇರ ಹೂಡಿಕೆಗೆ ಅವಕಾಶ ಕೊಟ್ಟಾಗ, ವಾಲ್‌ಮಾರ್ಟ್‌ನಂಥ ಸಂಘಗಳು ಭಾರತಕ್ಕೆ ಆಗಮಿಸಲಿವೆ. ಆಗ ಒಮ್ಮೆಗೆ ಗ್ರಾಹಕರಿಗೆ ಖರೀದಿಸುವ ವಸ್ತುಗಳಿಗೆ ಕೆಲವು ತಿಂಗಳ ಮಟ್ಟಿಗೆ ದರ ಕಡಿಮೆಯಾದಂತೆ ಕಂಡು ಬಂದರೂ ಕೆಲವೇ ತಿಂಗಳುಗಳೊಳಗೆ ಜನಸಾಮಾನ್ಯರು ವಸ್ತುಗಳನ್ನು ಕೊಳ್ಳಲಾಗದ ಪರಿಸ್ಥಿತಿ ಉಂಟಾಗುತ್ತದೆ. ಮತ್ತು ಈ ವೇಳೆಗಾಗಲೇ ಈಗಿನ ಚಿಲ್ಲರೆ ವ್ಯಾಪಾರಿಗಳು ತಮ್ಮ ಜೀವನೋಪಾಯದ ಮಾರ್ಗಗಳನ್ನೇ ಕಳೆದುಕೊಳ್ಳಲಿದ್ದಾರೆ ಎಂಬುದಾಗಿ ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಕಾರ್ಯದರ್ಶಿ ಬಿ.ಮಾಧವ ಅವರು ಹೇಳಿದರು.



ಅವರು ನವಂಬರ್ 28 ರಂದು ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿಯ ವತಿಯಿಂದ ಮಂಗಳೂರಿನಲ್ಲಿ ಚಿಲ್ಲರೆ ವ್ಯಾಪಾರದಲ್ಲಿ ವಿದೇಶೀ ನೇರ ಹೂಡಿಕೆಯನ್ನು ವಿರೋಧಿಸಿ ಹಮ್ಮಿಕೊಳ್ಳಲಾಗಿದ್ದ ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕೆ.ಆರ್.ಶ್ರೀಯಾನ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಮಿತಿಯ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ, ಕೆ.ಯಾದವ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಯು.ಬಿ.ಲೋಕಯ್ಯ, ಕೃಷ್ಣಪ್ಪ ಸಾಲ್ಯಾನ್ ಉಪಸ್ಥಿತರಿದ್ದರು.

ಅಂಗನವಾಡಿಗಳ ಮೇಲೆ 'ವೇದಾಂತ ಫೌಂಡೇಶನ್' ಎಂಬ ವಂಚಕ ಕಂಪನಿಯ ಸವಾರಿಗೆ ಪ್ರತಿರೋಧ –ಯಶಸ್ವಿ ಹೋರಾಟ

ಅಂತೂ ನಮ್ಮ ಆಳುವ ಸರ್ಕಾರಗಳು ದೇಶದ ಕೋಟಿ ಕೋಟಿ ಜನ ಮಕ್ಕಳು ಮತ್ತು ಬಸುರಿ ಬಾಣಂತಿಯರ ಆರೋಗ್ಯ ಕಾಪಾಡುವ ಒಂದು ಮಹತ್ವದ ಯೋಜನೆಯಾದ ಐಸಿಡಿಎಸ್ ಯೋಜನೆಯ ಹೊಣೆ ಹೊರುವುದಕ್ಕೆ ತಯಾರಿಲ್ಲ. ಅವರಿಗೆ ಅದು ಒಂದು 'ಬೇಡವಾದ ಕೂಸು' ಎಂಬುದು ಪದೇ ಪದೇ ಸಾಬೀತಾಗುತ್ತಿದೆ.

ವೇದಾಂತ ಎಂಬುದು ಒಂದು ಬ್ರಿಟನ್ ಮೂಲದ ಬಹುರಾಷ್ಟ್ರೀಯ ಕಂಪನಿ. ಇದೊಂದು ಹಗರಣಕೋರ ಕಂಪನಿ.

ಕೇಂದ್ರ ಯುಪಿಎ ಸರ್ಕಾರದ ಮಂತ್ರಿ ಹಾಗೂ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಸಂಸದರಾದ ಎಂ. ವೀರಪ್ಪ ಮೊಯ್ಲಿಯವರು ತಮ್ಮ ಕ್ಷೇತ್ರವ್ಯಾಪ್ತಿಯ 2,000 ಅಂಗನವಾಡಿ ಕೇಂದ್ರಗ್ಗಳಲ್ಲಿ ಅಂಗನವಾಡಿ ಕೇಂದ್ರಗಳ ನಿರ್ವಹಣೆಯನ್ನು ಈ ವೇದಾಂತ ಸಂಸ್ಥೆಯೊಂದಿಗೆ ನಿರ್ವಹಿಸುವ ಒಪ್ಪಂದಕ್ಕೆ ಪೌರೋಹಿತ್ಯ ವಹಿಸಿದ್ದಾರೆ. ಚಿಕ್ಕಬಳ್ಳಾಪುರ ಅಲ್ಲದೆ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ ಜಿಲ್ಲಾ ಪಂಚಾಯುತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಇಲಾಖೆಯ ಉಪ ನಿದೇಶಕರು ಈ ಸಂಸ್ಥೆಯೊಂದಿಗೆ ಇಂಥದ್ದೇ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

ಅಂಗನವಾಡಿ ಕೇಂದ್ರಗಳ ಕಾರ್ಯ ನಿರ್ವಹಣೆಗೆ ಸಮನ್ವಯಗಾರರನ್ನು (ಕೋ–ಆರ್ಡಿನೇಟರ್)ನೇಮಿಸುವ ನಿಬಂದನೆ, ಕೇಂದ್ರಗಳ ಮೇಲೆ ವೇದಾಂತ ಫೌಂಡೇಶನ್‌ನ ಬೋರ್ಡ್ ಹಾಕುವುದು ಸೇರಿದಂತೆ ಒಟ್ಟಾರೆ ಅಂಗನವಾಡಿಗಳ ಮೇಲೆ ನಾನಾ ರೂಪಗಳ ನಿಯಂತ್ರಣಗಳನ್ನು ಈ ಸಂಸ್ಥೆಗೆ ಕೊಡುವ ಈ ಒಪ್ಪಂದದಕ್ಕೆ ಏಪ್ರಿಲ್ 10,2012 ರಂದು ಸಹಿ ಹಾಕಲಾಗಿದೆ.



ಚಿಕ್ಕಬಳ್ಳಾಪುರದಲ್ಲಿ ಪ್ರತಿಭಟನೆ. ನವೆಂಬರ್ 22, 2012

ವೇದಾಂತ ಸಂಸ್ಥೆ ಗಣಿಗಾರಿಕೆ, ಉಕ್ಕು ಉದ್ದಿಮೆ ಕ್ಷೇತ್ರದ ಒಂದು ಕಂಪನಿ. ಕಾರ್ಮಿಕರ ಜೀವಕ್ಕೆ ಅಗತ್ಯ ರಕ್ಷಣೆ ವಹಿಸದ ಕಾರಣಕ್ಕೆ, ಭ್ರಷ್ಟತೆಗೆ, ನಮ್ಮ ದೇಶದ ಒರಿಸ್ಸಾದಲ್ಲಿ ಅಕ್ರಮ ಲಾಭಿಗಳ ಮೂಲಕ ಬುಡಕಟ್ಟು ಜನರ ಭಾರಿ ಪ್ರಮಾಣದ ಭೂಮಿ ಕಬಳಿಸಿದ ಹಗರಣದಲ್ಲಿ ಸಿಲುಕಿಕೊಂಡಿರುವುದಕ್ಕೆ ಕುಖ್ಯಾತ ವಾದ ಮತ್ತು ಕಪ್ಪು ಪಟ್ಟಿಗೆ ಸೇರಿಸಲ್ಪಟ್ಟಿರುವ ಸಂಸ್ಥೆ.

ಸಂಸ್ಥೆ ಮಕ್ಕಳಿಗೆ ಬಟ್ಟೆ, ಚಪ್ಪಲಿ ಅಥವಾ ಅಂಗನವಾಡಿ ಕೇಂದ್ರಕ್ಕೆ ಕಟ್ಟಡ ಇತ್ಯಾದಿ ಕೊಡುಗೆ ಕೊಡುತ್ತದೆಂಬ ಕಾರಣಕ್ಕೆ ಅಂಗನವಾಡಿ ಕೇಂದ್ರಗಳನ್ನೇ ಇಂತಹ ಖಾಸಗಿ ಕಂಪನಿಯ ಸುಪರ್ದಿಗೆ ಒಪ್ಪಿಸುವುದು ಅಪಾಯಕಾರಿ ನೀತಿಯಾಗಿದೆ. ಮತ್ತು ಅಂಗನವಾಡಿ ಕೇಂದ್ರಗಳ ಖಾಸಗೀಕರಣದ ದಾರಿಯ ಹೆಜ್ಜೆಯಾಗುತ್ತದೆ ಎಂದು ಖಂಡಿಸಿ ಚಿಕ್ಕಬಳ್ಳಾಪುರದಲ್ಲಿ ನವೆಂಬರ್ 18 ರಂದು ಕಾರ್ಯಕ್ರಮ ಉದ್ಘಾಟನೆಯಂದು ನೂರಾರು ಅಂಗನವಾಡಿ ನೌಕರರು ಪೋಲಿಸರ ಬಿಗಿ ಕಾವಲು ನಿರ್ಬಂಧ ಧಿಕ್ಕರಿಸಿ ಪ್ರತಿಭಟನೆ ನಡೆಸಿದರು. ಕಾಂ ಸುನಂದ, ಕಾಂ. ಲಕ್ಷ್ಮೀ ದೇವಮ್ಮ, ಕಾಂ. ಕಮಲಾರವರ ನೇತೃತ್ವದಲ್ಲಿ ನಡೆದ ಬೀದಿಯಲ್ಲಿ ಮಲಗಿದ ಸು. 500 ಪ್ರತಿಭಟನಾಕಾರರನ್ನು ಪೋಲಿಸರು ಬಂಧಿಸಿದರು. ನಂತರವೂ ಹೋರಾಟ ಮುಂದುವರೆಯಿತು. ನವೆಂಬರ್ 22, 2012 ರಂದು 8 ಕಿ.ಮಿ.ಗಳ ಬೃಹತ್ ಪ್ರತಿಭಟನಾ ಮೆರವಣಿಗೆ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಬೃಹತ್ ಪ್ರತಿಭಟನೆ ನಡೆಯಿತು. ಬೆಂಗಳೂರಿನಲ್ಲಿ ನವೆಂಬರ್ 23 ರಿಂದ 26 ರವರೆಗೆ ಸು. ಮುನ್ನೂರುಕ್ಕೂ ಹೆಚ್ಚು ಜನರು ಪಾಲೊಂಡ ಪ್ರತಿಭಟನೆ ನಡೆಯಿತು. ನವೆಂಬರ್ 22 ರಂದು ಚಿಕ್ಕಬಳ್ಳಾಪುರದ ಪ್ರತಿಭಟನೆ .ನಂತರ ಜಿಲ್ಲಾಧಿಕಾರಿ ಗಳೊಂದಿಗೆ ನಡೆದ ಮಾತುಕತೆ ವೇಳೆ ಸಂಘಟನೆಯ ಹಲವು ಬೇಡಿಕೆಗಳನ್ನು ಒಪ್ಪಿ ಸರ್ಕಾರ ಅಧಿಕೃತ ಸುತ್ತೋಲೆ ಹೊರಡಿಸಿರುವುದು ಹೋರಾಟಕ್ಕೆ ಸಿಕ್ಕ ಒಂದು ಹಂತದ ಜಯವಾಗಿದೆ. ಅಂಗನವಾಡಿ ಕೇಂದ್ರಗಳ ಮೇಲೆ ವೇದಾಂತ ಸಂಸ್ಥೆಯ ಬೋರ್ಡ ಹಾಕದಿರಲು, ಉಡುಪು, ಆಹಾರ ಪೂರೈಕೆ ಇತ್ಯಾದಿಗಳನ್ನು ಇಲಾಖೆಯ ಮುಖಾಂತರವೇ ವಿತರಿಸಲು, ಮತ್ತು ಮಾಹಿತಿ ಪಡೆಯಲು, ಗ್ರಾಮಮಟ್ಟದಲ್ಲಿ ಯಾವುದೇ ಹೊಸ ಸಮಿತಿ ರಚಿಸದೇ ಇರುವ ಸಮಿತಿಯನ್ನೇ ಬಲಪಡಿಸಲು ಸರ್ಕಾರ ಲಿಖಿತ ಒಪ್ಪಿಗೆ ನೀಡಿದೆ.

ಬಾಬ್ರಿ ಮಸೀದಿ ಧ್ವಂಸಕ್ಕೆ 20 ವರ್ಷ – ಖಂಡಿಸಿ ಪ್ರತಿಭಟನೆ

ಅಯೋಧ್ಯಾದಲ್ಲಿನ ಬಾಬ್ರಿ ಮಸೀದಿಯನ್ನು ಆರೆಸ್ಸೆಸ್ ಪರಿವಾರವು ಧ್ವಂಸಗೊಳಿಸಿ ಈ ಡಿಶೆಂಬರ್ 6ಕ್ಕೆ ಇಪ್ಪತ್ತು ವರುಷಗಳಾದ ಹಿನ್ನೆಲೆಯಲ್ಲಿ ಆ ಕರಾಳ ಘಟನೆಯನ್ನು ಖಂಡಿಸಿ ಬೆಂಗಳೂರು ನಗರದ ಪುರಭವನದ ಬಳಿ ಸಿಪಿಐ(ಎಂ) ಪಕ್ಷ ಪ್ರತಿಭಟನಾ ಪ್ರದರ್ಶನ ನಡೆಯಿತು. ಇದರಲ್ಲಿ ಹಲವಾರು ಪ್ರಗತಿಪರ ಸಂಘಟನೆಗಳು ಹಾಗೂ ಪ್ರಮುಖ ಚಿಂತಕರು ಭಾಗವಹಿಸಿದ್ದರು.

90ರ ಜಾಗತೀಕರಣ ದಶಕದಲ್ಲಿ ಕೋಮುವಾದ ಮತ್ತು ಜಾಗತೀಕರಣದ ಅಬ್ಬರ ಅಕಸ್ಮಿಕವಾಗಿ ಹುಟ್ಟಿದ್ದೇನಲ್ಲ. ಇದರ ಹಿಂದೆ ವ್ಯವಸ್ಥಿತ ಷಡ್ಯಂತ್ರವಿದೆ. ಜನಸಾಮಾನ್ಯರ ಪ್ರತಿರೋಧವನ್ನು ಹತ್ತಿಕ್ಕಲು ಜನರ ಮನೋಭಾವ ಕೆರಳಿಸುವ ಧಾರ್ಮಿಕ ವಿಚಾರಗಳನ್ನು ಕೋಮುವಾದಿಗಳು ಮುಂದಿಟ್ಟುಕೊಂಡು ಸಂಘರ್ಷ ಸೃಷ್ಟಿಸುತ್ತಿದ್ದಾರೆ. ಮತ್ತೊಂದು ಕಡೆ ಉದ್ದೇಶದಿಂದ ಜಾಗತೀಕರಣ ಕೂಡ ಬಡಜನತೆಯ ಬದುಕನ್ನು ಮತ್ತಷ್ಟು ಸಂಕಷ್ಟಕ್ಕೆ ಸಿಲುಕಿಸಿದೆಯೆಂದು ಸಿಪಿಐ(ಎಂ)ನ ಸೆಕ್ರೆಟೇರಿಯೆಟ್ ಸದಸ್ಯರಾದ ವಿಜೆಕೆ ನಾಯರ್ ರವರು ತಿಳಿಸಿದರು.ಈ ಕೃತ್ಯದಲ್ಲಿ ಭಾಗಿಯಾಗಿರುವ ಕ್ರಿಮಿನಲ್ ಗಳ ಮೇಲೆ ನಿಷ್ಠುರ ಕ್ರಮ ಜರುಗಿಸಬೇಕೆಂದು ಆಗ್ರಹಿಸಿದರು.

ನಂತರ ಮಾತನಾಡಿದ ಹಿರಿಯ ಸಾಹಿತಿ ಡಾ.ಕೆ.ಮರುಳಸಿದ್ದಪ್ಪನವರು ದೇಶದಲ್ಲಿನ ಕೋಮುಸೌಹಾರ್ಧತೆಯ ವಾತಾವರಣವನ್ನು ಹದಗೆಡಿಸಿ ರಾಜಕೀಯ ಅಧಿಕಾರ ಹಿಡಿಯುವ ಉದ್ದೇಶದಿಂದಲೇ ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಲಾಯಿತೆಂದರು. ಇದರ ಹಿಂದೆ ಕಾಂಗ್ರೆಸ್‌ನ ಮೃದು ಧೋರಣೆ ಅಡಗಿದೆ ಎಂದು ಖಂಡಿಸಿದರು. ಬಾಬ್ರಿ ಮಸೀದಿಯಲ್ಲಿ ಪ್ರಾರ್ಥನೆ ನಡೆಯುತ್ತಿರಲಿಲ್ಲ ಕೆಡವಿದ್ದರಲ್ಲಿ ತಪ್ಪೇನಿಲ್ಲ ಎಂದು ಅದ್ವಾನಿ ಇತ್ತೀಚೆಗೆ ಬೆಂಗಳೂರಿನಲ್ಲಿ ಹೇಳಿರುವುದು ಅತ್ಯಂತ ಅಪಾಯಕಾರಿ ಎಂದರು. ಕೋಮುಸೌಹಾರ್ದತೆ ಕಾಪಾಡುವುದು ತುಂಬಾ ಮಹತ್ತರ ಕರ್ತವ್ಯ ಎಂದು ತಿಳಿಸಿದರು.

ಮತ ಪ್ರದರ್ಶನದಲ್ಲಿ ಹಿರಿಯ ಚಿಂತಕ ಪ್ರೊ. ಜಿ.ಕೆ. ಗೋವಿಂದರಾವ್, ಪ್ರೊ. ಎಸ್.ಜಿ. ಸಿದ್ಧರಾಮಯ್ಯ, ಪ್ರೊ. ನರಸಿಂಹಯ್ಯ, ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದದ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ರುದ್ರಪ್ಪ ಹನಗವಾಡಿ, ಸಿಪಿಐ(ಎಂ) ನ ನಾಯಕರಾದ ಮೀನಾಕ್ಷಿ ಸುಂದರಂ, ಕೆ.ಎನ್. ಉಮೇಶ್, ಸಮುದಾಯದ ಸುರೇಂದ್ರ, ವಿಮಲಾ, ಜನವಾದಿ ಗೌರಮ್ಮ ಮುಂತಾದವರು ಭಾಗವಹಿಸಿದ್ದರು

ಇಂತಹ ಪ್ರತಿಭಟನೆಗಳು ರಾಜ್ಯದ ಹಲವೆಡೆ ನಡೆದಿವೆ.



ಪೂರ್ಣ 20 ವರ್ಷಗಳೇ ಕಳೆದರೂ, ನಮ್ಮ ಗಣತಂತ್ರಕ್ಕೆ ಇನ್ನೂ ನ್ಯಾಯ ದೊರೆತಿಲ್ಲ, ಅದರ ಜಾತ್ಯಾತೀತ ತಳಪಾಯದ ಮೇಲೆ ಇಂತಹ ಭೀಷಣ ಪ್ರಹಾರಕ್ಕೆ ಹೊಣೆಗಾರರಾದವರಿಗೆ ಶಿಕ್ಷೆಯಾಗಿಲ್ಲ. ಕಾನೂನು ಕಲಾಪಗಳು ಈಗಲೂ ನ್ಯಾಯಾಂಗದ ಮುಂದೆ ಮುಂದುವರೆಯುತ್ತಿವೆ. ಲಿಬರ್ಹಾನ್ ತನಿಖಾ ಆಯೋಗದ ವರದಿಯ ಮೇಲೂ ಗಮನಾರ್ಹವಾದುದೇನೂ ನಡೆದಿಲ್ಲ. ಇಂತಹ ಹಿನ್ನೆಲೆಯಲ್ಲಿ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರದ ತಳಪಾಯವನ್ನು ಗಟ್ಟಿಗೊಳಿಸುವ ಪ್ರತಿಜ್ಞೆಯನ್ನು ಬಲಪಡಿಸುವ, ಇಂತಹ ಪ್ರಹಾರ ನಡೆಸಿದವರ ದುಷ್ಟ ಅಜೆಂಡಾವನ್ನು ವಿಫಲಗೊಳಿಸುವ ನಿರ್ಧಾರಕ್ಕೆ ದ್ವಿಗುಣ ಶಕ್ತಿ ತುಂಬಿದರೆ ಮಾತ್ರವೇ ಡಿಸೆಂಬರ್ 6ರ ಯಾವುದೇ ಸ್ಮರಣೆ ಅರ್ಥಪೂರ್ಣವಾಗುತ್ತದೆ.

ಬಾಬ್ರಿ ಮಸೀದಿ ಧ್ವಂಸದ 20ನೇ ವಾರ್ಷಿಕ

ಸೀತಾರಾಂ ಯೆಚೂರಿ

ಈ ಡಿಸೆಂಬರ್ 6ರಂದು ಬಾಬ್ರಿ ಮಸೀದಿಯನ್ನು ಅರೆಸ್ಸೆಸ್/ಬಿಜೆಪಿ ನೇತೃತ್ವದ ಕೋಮುವಾದಿ ಶಕ್ತಿಗಳ ಕೂಟ ಧ್ವಂಸ ಮಾಡಿ 20 ವರ್ಷಗಳಾಗಿವೆ. 1992ರಿಂದ ಪ್ರತಿವರ್ಷ ಡಿಸೆಂಬರ್ 6ರಂದು ಇಡೀ ದೇಶ ನಾಚಿಕೆಯಿಂದ ತಲೆತಗ್ಗಿಸಿಕೊಂಡು ಬಾಬ್ರಿ ಮಸೀದಿಯ ಧ್ವಂಸಕಾರ್ಯವನ್ನು ನೆನಪಿಸಿಕೊಳ್ಳುತ್ತಿದೆ. ಒಂದು ಉನ್ಮತ್ತ ಕೋಮುವಾದಿ ಸಂಘಟನೆ ಪ್ರಭುತ್ವ ಅಧಿಕಾರವನ್ನು ವಹಿಸಿಕೊಂಡರೆ ಎಂತಹ ಭೀಕರ ಪರಿಣಾಮಗಳಾಗಬಹುದು ಎಂಬುದು ಈ ಸ್ಮರಣೆ ಎತ್ತಿ ತೋರುವ ಹಲವು ಸಂಗತಿಗಳಲ್ಲಿ ಒಂದು. ಉತ್ತರ ಪ್ರದೇಶದಲ್ಲಿ ಬಿಜೆಪಿ ಸರಕಾರ ಇರದಿರುತ್ತಿದ್ದರೆ, ಈ ರೀತಿಯಲ್ಲಿ ಬಾಬ್ರಿ ಮಸೀದಿಯ ಧ್ವಂಸ ನಡೆಯಬಹುದು ಎಂದು ಊಹಿಸಲೂ ಸಾಧ್ಯವಿಲ್ಲ. ಸರಕಾರದ ಕೃಪಾಪೋಷಣೆ ಮತ್ತು ಶಾಮೀಲು ಭಾರತದ ಜಾತ್ಯಾತೀತ ಪ್ರಜಾಪ್ರಭುತ್ವದ ಮೇಲೆ ಈ ಅತ್ಯಂತ ಹೀನ ಪ್ರಹಾರಕ್ಕೆ ಅವಕಾಶ ನೀಡಿತಷ್ಟೇ ಅಲ್ಲ, ಸಹಾಯವನ್ನೂ ನೀಡಿತು.


ಇದಕ್ಕೆ ಇದರ ವಿಚಾರಣೆ ನಡೆಸಿ ನ್ಯಾಯಾಲಯ ಬಾಬ್ರಿ ಮಸೀದಿ ಧ್ವಂಸದ ಮೊಕದ್ದಮೆಯಲ್ಲಿ ಆಪಾದಿತರ ಮೇಲೆ ಆರೋಪ ಪಟ್ಟಿಯನ್ನು ಹಾಕಿದ ನ್ಯಾಯಾಲಯದ ತೀರ್ಪಿಗಿಂತ ಉತ್ತಮ ನಿದರ್ಶನ ಬೇರೆ ಬೇಕಿಲ್ಲ. ಮಾನ್ಯ ನ್ಯಾಯಾಲಯದ ಸಪ್ಟಂಬರ್ 9,1997 ರ ಆದೇಶದ 59ನೇ ಪರಿಚ್ಛೇದ ಹೀಗೆ ಹೇಳಿತ್ತು: *"ನಮ್ಮ ವಿವರಗಳಿಂದ, ಈ ಮೊಕದ್ದಮೆಯಲ್ಲಿ ಆಪಾದಿತ ವ್ಯಕ್ತಿಗಳು 1990ರಿಂದ ಆರಂಭಿಸಿ ವಿವಾದಿತ ರಾಮಜನ್ಮಭೂಮಿ/ಬಾಬ್ರಿಮಸೀದಿ ಕಟ್ಟಡವನ್ನು ಧ್ವಂಸಗೊಳಿಸಲು ಹೂಡಿದ ಪಿತೂರಿ 6.12.1992 ರಂದು ಪೂರ್ಣಗೊಂಡಿತು ಎಂಬ ತೀರ್ಮಾನಕ್ಕೆ ಬರಲಾಗಿದೆ. ಶ್ರೀ ಲಾಲ್ ಕೃಷ್ಣ ಅಡ್ವಾಣಿ ಮತ್ತಿತರರು ವಿವಾದಿತ ಕಟ್ಟಡಗಳನ್ನು ಕೆಡವಿ ಹಾಕಲು ವಿವಿಧ ಸಮಯಗಳಲ್ಲಿ, ವಿವಿಧ ಸ್ಥಳಗಳಲ್ಲಿ. ಕ್ರಿಮಿನಲ್ ಪಿತೂರಿಗಳನ್ನು ಹೂಡಿದ್ದಾರೆ. ಆದ್ದರಿಂದ,............ಇವರುಗಳ ಮೇಲೆ ಆಪಾದನೆಯನ್ನು ಹಾಕಲು ಮೊದಲ ನೋಟಕ್ಕೇ ಕಂಡುಬರುತ್ತದೆ"*(ಇಲ್ಲಿ ಆಪಾದಿತರ ಪಟ್ಟಿ ಹಲವು ಹೆಸರುಗಳೊಂದಿಗೆ ಮುಂದುವರೆಯುತ್ತದೆ, ಇದರಲ್ಲಿ ಮುರಳಿ ಮನೋಹರ ಜೋಷಿ, ಉಮಾಭಾರತಿ, ಸಾಧ್ವಿ ಋತಂಬರಾ ಇತ್ಯಾದಿಗಳೂ ಸೇರಿವೆ) .

ಸಂಸ್ಕೃತಿಯ ಹೆಸರಲ್ಲಿ

ನಂತರವೇನೋ ಈ ಕೋಮುವಾದಿ ಶಕ್ತಿಗಳು ಕೇಂದ್ರ ಸರಕಾರದ ಅಧಿಕಾರ ಸೂತ್ರವನ್ನು ಹಿಡಿದಾಗ, ಬಿಜೆಪಿ ಎನ್‌ಡಿಎ ಸರಕಾರದ ನೇತೃತ್ವ ವಹಿಸಿದಾಗ ಈ ಆರೋಪ ಪತ್ರದಿಂದ ಆಗ ಉಪಪ್ರಧಾನ ಮಂತ್ರಿ ಹಾಗೂ ಗೃಹಮಂತ್ರಿಗಳೂ ಆಗಿದ್ದ ಶ್ರೀಯುತ ಅಡ್ವಾಣಿಯವರ ಹೆಸರನ್ನು ಕೈಬಿಡುವ ಪ್ರಯತ್ನ ನಡೆಯಿತು. ಆದರೆ ಮೇ 7, 2012ರಂದು ಸಿಬಿಐ ಈ ಆರೋಪಗಳನ್ನು ಕೈಬಿಡಲು ಸಾಧ್ಯವಿಲ್ಲ ಎಂದು ಸುಪ್ರಿಂ ಕೋರ್ಟಿಗೆ ತಿಳಿಸಿದೆ. ಈಗ ಪೂರ್ಣ 20 ವರ್ಷಗಳು ಕಳೆದಿವೆ, ನಮ್ಮ ಗಣತಂತ್ರಕ್ಕೆ ಈಗಲೂ ನ್ಯಾಯವನ್ನು ನಿರಾಕರಿಸಲಾಗಿದೆ, ನಮ್ಮ ದೇಶದ ಜಾತ್ಯಾತೀತ ತಳಪಾಯದ ಮೇಲೆ ಇಂತಹ ಪ್ರಹಾರಕ್ಕೆ ಹೊಣೆಗಾರರಾದವರಿಗೆ ಶಿಕ್ಷೆಯಾಗಿಲ್ಲ. ನ್ಯಾಯದ ವಿಳಂಬ ಎಂದರೆ ನ್ಯಾಯದ ನಿರಾಕರಣೆಯೇ ಎಂದು ಹೇಳಲಾಗುತ್ತದೆ. ಕಾನೂನು ಕಲಾಪಗಳು ಈಗಲೂ ನ್ಯಾಯಾಂಗದ ಮುಂದೆ ಮುಂದುವರೆಯುತ್ತಿವೆ. ಅದೇ ರೀತಿ ಲಿಬರ್ಹಾನ್ ತನಿಖಾ ಆಯೋಗದ ವರದಿಯ ಮೇಲೂ ಗಮನಾರ್ಹವಾದುದೇನೂ ನಡೆದಿಲ್ಲ.

ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರ ಮೂಡಿ ಬಂದದ್ದು ಭಾರತೀಯ ಸಂಸ್ಕೃತಿ ಮತ್ತು ಪರಂಪರೆಯನ್ನು ನೈಜವಾಗಿ ಪ್ರತಿನಿಧಿಸುವ ಸಮ್ಮಿಶ್ರ ಸಾಮಾಜಿಕ ಗುಣಲಕ್ಷಣಗಳ ಆಧಾರದಲ್ಲಿ. ಕೋಮುವಾದಿ ವಿಷವನ್ನು ಹರಡಿಸಿ ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸಿದರೆ, ಅದು ಕಲಹ, ರಕ್ತಪಾತದ ವಿಷಾಣುವನ್ನು ಆಳವಾಗಿ ಹರಡಿಸಿ ಈ ಭಾರತೀಯ ಸಾಂಸ್ಕೃತಿಕ ಗುಣಲಕ್ಷಣಗಳನ್ನೇ ಧ್ವಂಸ ಮಾಡುತ್ತದೆ. ವ್ಯಂಗ್ಯವೆಂದರೆ ಇಂತಹ ಧ್ವಂಸಕಾರ್ಯವನ್ನು ಭಾರತೀಯ ಸಂಸ್ಕೃತಿಯನ್ನು ರಕ್ಷಿಸುವ, ಮುಂದೊಯ್ಯುವ ಹೆಸರಿನಲ್ಲೇ ಮಾಡಲಾಗುತ್ತಿದೆ.

ಅಯೋಧ್ಯೆಯ ವಿವಾದಿತ ಸ್ಥಳದಲ್ಲಿ ರಾಮ ದೇವಸ್ಥಾನ ಕಟ್ಟುವುದಕ್ಕಾಗಿ ನಡೆಸಿದ 'ರಥಯಾತ್ರೆ' ಸಾಗಿದ ದಾರಿಯುದ್ದಕ್ಕೂ ಕಲಹ, ರಕ್ತಪಾತದ ಕುರುಹುಗಳನ್ನು ಬಿಟ್ಟು ಹೋಯಿತು. ಇದಕ್ಕೆ ನೇತೃತ್ವ ನೀಡಿದ ಶ್ರೀಯುತ ಅಡ್ವಾಣಿ ಬಾಬ್ರಿ ಮಸೀದಿ ಧ್ವಂಸ ತನ್ನನ್ನು "ವೈಯಕ್ತಿಕವಾಗಿ" ಅಲುಗಾಡಿಸಿ ಬಿಟ್ಟಿದೆ ಎಂದು 1999ರಲ್ಲಿ ಲೋಕಸಭೆಯಲ್ಲಿ ಉದ್ಗರಿಸಿದರು! "ಅದು ದುರದೃಷ್ಟಕರ. ಹಾಗಾಗಬಾರದಿತ್ತು" ಎಂದರೂ, ಅದೇ ಉಸಿರಿನಲ್ಲಿ "ನನಗೆ ಅಯೋಧ್ಯಾ ಆಂದೋಲನದ ಬಗ್ಗೆ ಹೆಮ್ಮೆಯಿದೆ" ಎಂದೂ ಸೇರಿಸಿದರು!



ಬಿಜೆಪಿಯ ಮೂರು 'ಒಡಂಬಡಿಕೆ'ಗಳು

ಬಾಬ್ರಿ ಮಸೀದಿಯನ್ನು ಕೆಡವಿದ ಕೆಲವೇ ದಿನಗಳಲ್ಲಿ ಶ್ರೀಯುತ ಅಡ್ವಾಣಿ ಜಾತ್ಯಾತೀತತೆಯ ಮೇಲೆ ಒಂದು ರಾಷ್ಟ್ರೀಯ ಚರ್ಚೆ ನಡೆಯಲಿ ಎಂದು ಕರೆ ನೀಡಿದರು. ಎರಡು ಲೇಖನಗಳಲ್ಲಿ ಅವರು ಬಿಜೆಪಿಯ ಪರಿಕಲ್ಪನೆಯ ರೂಪುರೇಷೆಗಳನ್ನು ಕೊಟ್ಟರು(ಇಂಡಿಯನ್ ಎಕ್ಸ್‌ಪ್ರೆಸ್, ಡಿಸೆಂಬರ್ 27 ಮತ್ತು 28, 1992). ಇದು ಬಿಜೆಪಿ ನಡೆಸಿದ ಕಾನೂನಿನ ನಗ್ನ ಉಲ್ಲಂಘನೆ, ಸುಪ್ರಿಂ ಕೋರ್ಟ್ ಮತ್ತು ರಾಷ್ಟ್ರೀಯ ಸಮಗ್ರತಾ ಮಂಡಳಿಗೆ ನೀಡಿದ ಭರವಸೆಗಳನ್ನು ಮುರಿದದ್ದು ಮತ್ತು ಬಾಬ್ರಿ ಮಸೀದಿಯ ಪೂರ್ವ ಯೋಜಿತ, ಪೂರ್ವಾಭ್ಯಾಸವನ್ನೂ ಕಂಡ ಧ್ವಂಸಕಾರ್ಯ ವನ್ನು ಮರೆಮಾಚುವ ಒಂದು ಬಹಳ ಪ್ರಯಾಸಪೂರ್ಣ ಪ್ರಯತ್ನವಾಗಿತ್ತು. ಆದರೂ ಅದರಲ್ಲಿ ಜಾತ್ಯಾತೀತತೆ ಕುರಿತಂತೆ ಬಿಜೆಪಿಯ ನಿರೂಪಣೆಯ ಮೂರು 'ಒಡಂಬಡಿಕೆ'ಗಳನ್ನು ಮಂಡಿಸಲಾಗಿತ್ತು. ಬಾಬ್ರಿ ಮಸೀದಿ ಧ್ವಂಸದ 20ನೇ ವಾರ್ಷಿಕದ ಸಂದರ್ಭದಲ್ಲಿ ಅದನ್ನು ಪರೀಕ್ಷಿಸೋಣ.

1. **"ಪುರೋಹಿತಶಾಹಿಯ ನಿರಾಕರಣೆ"**. ಇದರ ಅರ್ಥ ಪ್ರಜಾಪ್ರಭುತ್ವ ಮಾತ್ರವಲ್ಲ, ಜಾತ್ಯಾತೀತತೆಯನ್ನು ಎತ್ತಿ ಹಿಡಿದಂತೆಯೇ. ಆದರೆ ಇಂದು ಬಿಜೆಪಿ ಅವರ ಗುರೂಜಿ "ಹಿಂದೂಸ್ತಾನದಲ್ಲಿ ಇರುವುದು, ಇರಬೇಕಾದ್ದು ಪ್ರಾಚೀನ ಹಿಂದೂರಾಷ್ಟ್ರ, ಮತ್ತು ಹಿಂದೂ ರಾಷ್ಟ್ರ ಬಿಟ್ಟು ಬೇರಾವುದೂ ಅಲ್ಲ. ಈ ರಾಷ್ಟ್ರಕ್ಕೆ, ಅಂದರೆ ಹಿಂದೂ ಜನಾಂಗ, ಧರ್ಮ, ಸಂಸ್ಕೃತಿ ಮತ್ತು ಭಾಷೆಗೆ ಸೇರಿರದವುಗಳೆಲ್ಲ ಸಹಜವಾಗಿ ನಿಜವಾದ ರಾಷ್ಟ್ರೀಯ ಜೀವನದ ಅಳವಿನ ಹೊರಗೆ ಬೀಳುತ್ತವೆ" ಎಂದು ಹೇಳಿರುವುದನ್ನು ತಿರಸ್ಕರಿಸುತ್ತದೆಯೇ?

ಇಂದಿನ ವರೆಗೂ ಬಿಜೆಪಿ ಇದು ತನ್ನದೂ ಅಭಿಪ್ರಾಯ ಎಂದಿಲ್ಲ. ಅಂದರೆ ಅವರು ಈಗಲೂ ಜನತೆಯನ್ನು ದಾರಿ ತಪ್ಪಿಸುತ್ತಲೇ ಇದ್ದಾರೆ, ಆಧುನಿಕ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರವನ್ನು ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂರಾಷ್ಟ್ರ'ವಾಗಿ ಪರಿವರ್ತಿಸುವ ಆರೆಸ್ಸೆಸ್‌ನ ನಿಜ ಆಶಯಕ್ಕೆ ಮುಖವಾಡ ತೊಡಿಸುವ ಪ್ರಯತ್ನವನ್ನು ಮುಂದುವರೆಸುತ್ತಲೇ ಇದ್ದಾರೆ.

2. **"ಎಲ್ಲ ನಾಗರಿಕರಿಗೆ, ಅವರು ಯಾವುದೇ ನಂಬಿಕೆಗೆ, ಪಂಥಕ್ಕೆ ಸೇರಿದ್ದರೂ, ಸಮಾನತೆ."** ಈ ಪರಿಕಲ್ಪನೆಗೂ ಬಿಜೆಪಿಯ ಬದ್ಧತೆಗೆ ಕೂಡ ಗೋಲ್ವಾಲ್ಕರ್ ನಮ್ಮ ದೇಶದಲ್ಲಿ ಹಿಂದೂಗಳಂತೆಯೇ ಭಾರತದ ಶ್ರೀಮಂತ ಬಹುರೂಪೀ ಪರಂಪರೆಯನ್ನು ಬಳುವಳಿಯಾಗಿ ಪಡೆದಿರುವ ಎಲ್ಲ ಹಿಂದುವೇತರರ ಬಗ್ಗೆ ಹೇಳಿರುವುದನ್ನು ತಿರಸ್ಕರಿಸದರೆ ಮಾತ್ರವೇ ಅರ್ಥವಿರುತ್ತದೆ. ಹಿಂದುವೇತರರು "ತಮ್ಮ ಭಿನ್ನತೆಗಳನ್ನು ತ್ಯಜಿಸಿ ರಾಷ್ಟ್ರದ ಧರ್ಮ, ಸಂಸ್ಕೃತಿ ಮತ್ತು ಭಾಷೆಯನ್ನು ಅಂಗೀಕರಿಸಿ, ತಮ್ಮನ್ನು ರಾಷ್ಟ್ರೀಯ

ಪುಟ 10 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ


"ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳನ್ನು ತಿರಸ್ಕರಿಸಿ ಜನಪರ ಹೋರಾಟಗಳ ಪರ್ಯಾಯವನ್ನು ಬಲಪಡಿಸಿ"

ಜಿ.ವಿ. ಶ್ರೀರಾಮರೆಡ್ಡಿ

ಡಿಸೆಂಬರ್ 11 ಕ್ಕೆ ಬೆಂಗಳೂರಿನಲ್ಲಿ ನಡೆಯುವ ಐತಿಹಾಸಿಕ ರಾಜಕೀಯ ಸಮಾವೇಶವನ್ನು ಯಶಸ್ವಿಗೊಳಿಸಲು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ಎಲ್ಲಾ ರೀತಿಯಾದ ಸಿದ್ಧತೆಯನ್ನು ನಡೆಸುತ್ತಿದೆ. ರಾಜ್ಯ ಬಿಜೆಪಿ ಮತ್ತು ಕೇಂದ್ರ ಕಾಂಗ್ರೆಸ್ಸಿನ ಜನವಿರೋಧಿ ನೀತಿಗಳ ಮತ್ತು ಲೂಟಿಕೋರ ರಾಜಕೀಯಕ್ಕೆ ಜನಪರ ಹೋರಾಟಗಳ ಪರ್ಯಾಯವನ್ನು ನಿರ್ಮಾಣ ಮಾಡಲು ಸಿಪಿಐ(ಎಂ) ರಾಜ್ಯದಲ್ಲಿ ನವೆಂಬರ್ 18 ಮತ್ತು 19 ರಿಂದ ರಾಜ್ಯಾದ್ಯಂತ "ರಾಜಕೀಯ ಜನ ಜಾಗೃತಿ" ಮತ್ತು ಜಾಥಾಗಳ ಮೂಲಕ ಪ್ರಚಾರಾಂದೋಲನ ನಡೆಸಿದೆ. 18 ರಂದು ಸ್ವಾತಂತ್ರ್ಯ ಸಂಗ್ರಾಮದ ಕಹಳೆ ಊದಿದ ಬೆಳಗಾವಿ ಜಿಲ್ಲೆಯಲ್ಲಿ ರಾಮದುರ್ಗ ಮತ್ತು 800 ವರ್ಷಗಳ ಹಿಂದೆ ಜಾತಿ ವ್ಯವಸ್ಥೆಯ ವಿರುದ್ಧ ಸಿಡಿದೆದ್ದ ಮಹಾನ್ ಸಮಾಜಸುಧಾರಕ ಬಸವಣ್ಣನವರ ಕರ್ಮ ಭೂಮಿ ಬೀದರ್ ಜಿಲ್ಲೆಯ ಬಸವ ಕಲ್ಯಾಣದಿಂದ ಪ್ರಾರಂಭವಾಗಿ ಕಳೆದ 15 ದಿನಗಳಿಂದ ಎರಡೂ ಜಾಥಾಗಳು ರಾಜ್ಯದ ಎಲ್ಲಾ ಭಾಗಗಳಲ್ಲಿ ಸಂಚರಿಸಿ ಸರಿಸುಮಾರು ಒಂದೊಂದು ಸಾವಿರ ಕಿ.ಮೀ. ನಷ್ಟು ದಾರಿಯನ್ನು ಕ್ರಮಿಸಿ ಹಳ್ಳಿಗಳಲ್ಲಿ ಹಾಗೂ ನಗರಗಳಲ್ಲಿ ಕರಪತ್ರ ವಿತರಣೆ, ಹಾಡುಗಳು ಮತ್ತು ಭಾಷಣಗಳ ಮುಖಾಂತರ ದೇಶದ ಮತ್ತು ರಾಜ್ಯದ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ಜನ ವಿರೋಧಿ ಮತ್ತು ದೇಶ ವಿರೋಧಿ ಧೋರಣೆಗಳ ವಿರುದ್ಧ ಈ ರಾಜ್ಯವನ್ನು ಮತ್ತು ದೇಶದಲ್ಲಿ ತಾಂಡವಾಡುತ್ತಿರುವ ಬ್ರಹ್ಮಾಂಡ ಭ್ರಷ್ಟಾಚಾರದಿಂದ ದೇಶದ ಮತ್ತು ರಾಜ್ಯದ ಸಂಪತ್ತು ಹೇಗೆ ಲೂಟಿ ಹೊಡೆಯಲಾಗುತ್ತಿದೆ, ಈ ಸರ್ಕಾರಗಳ ನೀತಿಗಳಿಂದ ಸಾಮಾನ್ಯ ಜನರ ಬದುಕು ಹೇಗೆ ಬೀದಿ ಪಾಲಾಗುತ್ತಿದೆ. ರೈತರ, ಕಾರ್ಮಿಕರ ಯಾವ ರೀತಿಯಾದ ಸಂಕಷ್ಟಗಳಿಗೆ ಸಿಲುಕಿದ್ದಾರೆ, ಶಿಕ್ಷಣ ರಂಗದಲ್ಲಿನ ಖಾಸಗೀಕರಣ ಮತ್ತು ಕೋಮುವಾದೀಕರಣದಿಂದ ಹೇಗೆ ಶಿಕ್ಷಣ ಈ ದೇಶದಲ್ಲಿ ಸಮಾಜ ವಿರೋಧಿ ಆಗುತ್ತಿದೆ, ನಿರುದ್ಯೋಗ ಮತ್ತು ಬಡತನದಿಂದ ಯುವಜನತೆ ಯಾವ ರೀತಿಯಲ್ಲಿ ಕಂಗಾಲಾಗಿದೆ, ದಲಿತರ ಮತ್ತು ಮಹಿಳೆಯರ ಮೇಲೆ ದಿನೇದಿನೇ ಹೆಚ್ಚುತ್ತಿರುವ ದಬ್ಬಾಳಿಕೆ ದೌರ್ಜನ್ಯಗಳ ವಿರಾಟ ಸ್ವರೂಪ ಮತ್ತು ಬಹಳ ಮುಖ್ಯವಾಗಿ ರಾಜ್ಯದಲ್ಲಿ ಬಿಜೆಪಿ ಹುಟ್ಟು ಹಾಕುತ್ತಿರುವ ಕೋಮು ಸಂಘರ್ಷಗಳು ಮತ್ತು ಈ ಎರಡು ಪಕ್ಷಗಳು ಹೇಗೆ ದೇಶವನ್ನು ಮತ್ತು ರಾಜ್ಯವನ್ನು ಆರ್ಥಿಕವಾಗಿ ದಿವಾಳಿ ಎಬ್ಬಿಸಿವೆ. ಈ ಎಲ್ಲಾ ವಿಚಾರಗಳನ್ನು ಜನತೆಯ ಮುಂದಿಟ್ಟು ಬಿಜೆಪಿ ಹಾಗೂ ಕಾಂಗ್ರೆಸ್ಸಿಗೆ ಪರ್ಯಾಯ ಹೊಸ ರಾಜಕೀಯ ಶಕ್ತಿಯ ಅನಿವಾರ್ಯತೆಯನ್ನು ಜನತೆ ಮುಂದೆ ಇಟ್ಟಿದೆ.

ಬಿಜೆಪಿ-ಕಾಂಗ್ರೆಸ್ ಸರ್ಕಾರಗಳ ಭ್ರಷ್ಟಾಚಾರ-ಲೂಟಿಕೋರ ನೀತಿಗಳು

ಕಳೆದ ಮೂರುವರೆ ವರ್ಷಗಳಲ್ಲಿ ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಕಾಂಗ್ರೆಸ್ ಪಕ್ಷದ ಆರ್ಥಿಕ ನೀತಿಗಳು ಈ ದೇಶದ ಕೃಷಿರಂಗ ಮತ್ತು ಕೈಗಾರಿಕಾ ರಂಗಗಳನ್ನು ದಿವಾಳಿ ಎಬ್ಬಿಸಿದೆ. ಈ ಎರಡು ಪ್ರಮುಖ ರಂಗಗಳ ಉತ್ಪಾದನೆ ಆತಂಕಕಾರಿ ಮಟ್ಟಕ್ಕೆ ಕುಸಿದಿದೆ. ಬಹುರಾಷ್ಟ್ರೀಯ ಕಂಪನಿಗಳ ಪರವಾದ ಆರ್ಥಿಕ ನೀತಿಗಳಿಂದಾಗಿ ದೇಶದ ಸಂಪತ್ತು ಲೂಟಿಯಾಗುತ್ತಿದೆ. ಅದೇ ಸಂದರ್ಭದಲ್ಲಿ 100 ಕ್ಕೆ 95ರಷ್ಟು ಜನರ ಬದುಕು ಅವಸಾನದ ಅಂಚಿಗೆ ಬಂದಿದೆ, ಅಗತ್ಯ ವಸ್ತುಗಳ ಬೆಲೆಗಳು ಆಕಾಶ ಮುಟ್ಟಿವೆ. ಜನರ ಕೊಂಡುಕೊಳ್ಳುವ ಶಕ್ತಿ ಕುಸಿದಿದೆ ಆದರೂ



ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ ಜನ ಸಾಮಾನ್ಯರ ಮೇಲೆ ಎಲ್ಲಾ ರೀತಿಯಾದಂತಹ ಹೊರೆಗಳನ್ನು ಹಾಕಿ ಕಾರ್ಪೋರೇಟ್ ಕಂಪನಿಗಳಿಗೆ ರಿಯಾಯಿತಿಗಳನ್ನು ನೀಡುತ್ತಿದೆ. ತನ್ನ ಖಾಸಗೀಕರಣದ ನೀತಿಗಳಿಂದಾಗಿ ಈ ದೇಶದ ಸಂಪತ್ತನ್ನು ದೇಶಿಯ ಮತ್ತು ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು ದೋಚಿಕೊಳ್ಳಲು ಅವಕಾಶಮಾಡಿಕೊಟ್ಟಿದೆ. ಅಲ್ಲದೆ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ಮುಳುಗಿದೆ. ಸ್ವಾತಂತ್ರ್ಯ ನಂತರ ಭಾರತದಲ್ಲಿ ಇಷ್ಟೊಂದು ಭ್ರಷ್ಟಾಚಾರವನ್ನು ಈ ದೇಶ ಕಂಡಿರಲಿಲ್ಲ. ಕಾಂಗ್ರೆಸ್ ಅನುಸರಿಸುತ್ತಿರುವ ಆರ್ಥಿಕ ನೀತಿಗಳಿಂದಾಗಿ ಇಡೀ ದೇಶ ದಿವಾಳಿ ಆಗುತ್ತಿದೆ. ಜನರು ಕೂಡ ದಿವಾಳಿ ಆಗುತ್ತಿದ್ದಾರೆ.

ಇನ್ನು ಕಳೆದ ನಾಲ್ಕುವರೆ ವರ್ಷಗಳ ಹಿಂದೆ ತನಗೆ ಬಹುಮತ ಇಲ್ಲದಿದ್ದರೂ ಹಣದ ಹೊಳೆಯನ್ನೇ ಹರಿಸಿ ಶಾಸಕರನ್ನು ಖರೀದಿಸುವ ಮುಖಾಂತರ ಅಕ್ರಮವಾಗಿ ಅಧಿಕಾರವನ್ನು ಪಡೆದ ಬಿಜೆಪಿ ತಾನೊಂದು ಭಿನ್ನಪಕ್ಷ ಎಂದು ಹೇಳಿಕೊಂಡೇ ಇಡೀ ರಾಜ್ಯವನ್ನು ಸರ್ವರೀತಿಯಲ್ಲೂ ದಿವಾಳಿ ಎಬ್ಬಿಸಿ ತನ್ನ ಬ್ರಹ್ಮಾಂಡ ಭ್ರಷ್ಟಾಚಾರದಿಂದ ಇಡೀ ದೇಶದಲ್ಲೇ ಕರ್ನಾಟಕ ರಾಜ್ಯ ಭ್ರಷ್ಟಾಚಾರದಲ್ಲಿ ಒಂದನೇ ಸ್ಥಾನಕ್ಕೆ ಏರುವಂತೆ ಮಾಡಿದೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷದೊಂದಿಗೆ ಭ್ರಷ್ಟಾಚಾರದ ಸ್ಪರ್ಧೆಗೆ ಇಳಿದಿದೆ. ಕರ್ನಾಟಕ ರಾಜ್ಯದ ಬೌದ್ಧಿಕ ಸಂಪತ್ತನ್ನು ಮಾತ್ರ ದೋಚಲಿಲ್ಲ. ಪ್ರಕೃತಿ ಸಂಪತ್ತನ್ನು ಮತ್ತು ಭೂಮಿಯನ್ನು ದೋಚಿಬಿಟ್ಟಿತು. ಕರ್ನಾಟಕ ರಾಜ್ಯ ತನ್ನ ಇತಿಹಾಸದಲ್ಲಿ ಎಂದೂ ಕಂಡರಿಯದ ರೀತಿಯ ಭ್ರಷ್ಟಾಚಾರವನ್ನು ದಾಖಲು ಮಾಡಿಬಿಟ್ಟಿತು. 2008 ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಯಡಿಯೂರಪ್ಪ ನೇತೃತ್ವದಲ್ಲಿ ಚುನಾವಣೆ ಎದುರಿಸಿದ ಬಿಜೆಪಿಯು ತನಗೆ ಅನ್ಯಾಯವಾಗಿದೆ, ವಚನ ಭ್ರಷ್ಟತೆಯಿಂದಾಗಿ ನನಗೆ ಅಧಿಕಾರ ಸಿಕ್ಕದ ಹಾಗೆ ವಂಚಿಸಿದ್ದಾರೆ, ಒಂದು ಬಾರಿ ನಮಗೆ ಅವಕಾಶ ಕೊಡಿ ಎಂದು ರಾಜ್ಯದ ಜನತೆ ಮುಂದೆ ಅಂಗಲಾಚಿ ಅಧಿಕಾರಕ್ಕೆ ಬರಲು ಎಲ್ಲಾ ರೀತಿಯಾದಂತಹ ಸುಳ್ಳು ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದ ಮೇಲೆ ತಾನು ಚುನಾವಣೆಯಲ್ಲಿ ಜನತೆಗೆ ಕೊಟ್ಟ ಆಶ್ವಾಸನೆಯನ್ನು ಅದು ಈಡೇರಿಸಲಿಲ್ಲ. ಬದಲಿಗೆ ತನ್ನ ಅಧಿಕಾರದ ಅವಧಿಯ ಉದ್ದಕ್ಕೂ ಹಗರಣಗಳು ಆಂತರಿಕ ಕಿತ್ತಾಟಗಳ ನಡುವೆ, ಅನಿಶ್ಚಿತ ಸರ್ಕಾರವನ್ನು ನಡೆಸಿ ಅನಿಷ್ಟ ರೆಸಾರ್ಟ್ ರಾಜಕಾರಣದ ಕೆಟ್ಟ ಸಂಸ್ಕೃತಿಯನ್ನು ರಾಜ್ಯದಲ್ಲಿ ಹುಟ್ಟುಹಾಕಿದ ಪ್ರಜಾಪ್ರಭುತ್ವ ವಿರೋಧಿ ಕ್ರಮಗಳ ಮೂಲಕ ಅಧಿಕಾರಕ್ಕೆ ಬಂದ ಬಿಜೆಪಿ ರಾಜ್ಯದಲ್ಲಿ ಎಲ್ಲಾ ರೀತಿಯಲ್ಲೂ ಪ್ರಜಾಪ್ರಭುತ್ವದ ಮೌಲ್ಯಗಳನ್ನು ನಾಶಮಾಡಿತು. ಸಂಸದೀಯ ವ್ಯವಸ್ಥೆಯನ್ನೇ ಅವಹೇಳನ ಮಾಡಿ ಕಡೆಗೆ ಸಂಸದೀಯ ವ್ಯವಸ್ಥೆಯಲ್ಲಿ ಅತ್ಯಂತ ಗೌರವಯುತವಾದ ಸ್ಥಾನವಾದ ಸಭಾಧ್ಯಕ್ಷರ ಸ್ಥಾನದ ಘನತೆಯನ್ನು ನಾಶಮಾಡಿತು. ಶಾಸನ ಸಭೆಯನ್ನು ಒಂದು ಸಲವಾದರೂ ಗಂಭೀರವಾಗಿ ಮತ್ತು ಉಪಯುಕ್ತವಾಗಿ ನಡೆಸಲೇ ಇಲ್ಲ. ಕಡೆಗೆ ಸದನದಲ್ಲೆ ಆಡಳಿತರೂಢ ಬಿಜೆಪಿ ಶಾಸಕರು ಬ್ಲೂ ಫಿಲ್ಮ್‌ಗಳನ್ನು ನೋಡುವ ಮುಖಾಂತರ ಸದನದ ಘನತೆ ಮತ್ತು ಗೌರವವನ್ನು ನಾಶಮಾಡಿತು. ತಾನೊಂದು ಅಪ್ಪಟ ಫ್ಯಾಸಿಸ್ಟ್ ಪಕ್ಷವೆಂದು, ತನಗೆ ಪ್ರಜಾಪ್ರಭುತ್ವ ಮತ್ತು ಸಂಸದೀಯ ವ್ಯವಸ್ಥೆಯಲ್ಲಿ ಯಾವುದೇ ರೀತಿಯಾದ ನಂಬಿಕೆ ಮತ್ತು ಗೌರವವಿಲ್ಲವೆಂದು ಸಾಬೀತು ಮಾಡಿಬಿಟ್ಟಿತು.

ಜಾತೀಯತೆ-ಕೋಮುವಾದ

ರಾಜ್ಯದಲ್ಲಿ ಬಿಜೆಪಿ ಆಡಳಿತ ನಡೆಸಿದ ರೀತಿ ನೋಡಿದರೆ ಅದು ಒಂದು ಸರ್ಕಾರವಾಗಿ ಆಡಳಿತವನ್ನು ನಡೆಸಿಲ್ಲ. ಹೆಸರಿಗೆ ಸರ್ಕಾರ ಇತ್ತೇ ಹೊರತು ಎಂದೂ ಅದು ಪರಿಣಾಮಕಾರಿ ಆಡಳಿತ ನಡೆಸಲಿಲ್ಲ. ಬದಲಿಗೆ ಇಡೀ ಆಡಳಿತದಲ್ಲಿ ಜಾತಿ ಮತ್ತು ಮತೀಯ ಭಾವನೆಗಳನ್ನು ಹುಟ್ಟು ಹಾಕಿ ಆಡಳಿತ ಯಂತ್ರಾಂಗವನ್ನು ನಿಷ್ಕ್ರಿಯಗೊಳಿಸಿ ಆಡಳಿತವನ್ನು ಭ್ರಷ್ಟಗೊಳಿಸಿಬಿಟ್ಟಿತು. ಇದರ ಪರಿಣಾಮವಾಗಿ ಜನರ ಪಾಲಿಗೆ ಸರ್ಕಾರ ಇಲ್ಲದಂತಾಯ್ತು. ಬಿಜೆಪಿ ಅಧಿಕಾರವಧಿಯಲ್ಲಿ ಎರಡು ಭೀಕರವಾದ ಪ್ರಕೃತಿ ವಿಕೋಪಗಳಿಗೆ ಅಂದರೆ ಒಮ್ಮೆ ಅತಿವೃಷ್ಟಿ ಮತ್ತು ಇನ್ನೊಮ್ಮೆ ಅನಾವೃಷ್ಟಿಗೆ ಸಿಕ್ಕಿ ಜನರ ಬದುಕು ತತ್ತರಿಸಿ ಹೋದ ಸಂದರ್ಭದಲ್ಲಿ ಈ ಸರ್ಕಾರ ನಡೆದುಕೊಂಡ ರೀತಿ ನಿಜವಾಗಿ ಅಘಾತಕಾರಿ ಆಗಿತ್ತು. ಅತಿವೃಷ್ಟಿಯಿಂದ 10ಲಕ್ಷ ಜನರು ಮನೆಗಳನ್ನು ಕಳೆದುಕೊಂಡು ಬೀದಿಪಾಲಾದರೂ ಇದುವರೆವಿಗೂ ಅವರಿಗೆ ಸಂಪೂರ್ಣವಾದ ವಸತಿಯನ್ನು ಒದಗಿಸಲು ಸಾಧ್ಯವಾಗಲಿಲ್ಲ. ಹೀಗೇ ಕಳೆದೆರಡು ವರ್ಷಗಳಿಂದ ಸತತವಾಗಿ ರಾಜ್ಯ ಭೀಕರ ಬರಗಾಲವನ್ನು ಎದುರಿಸುತ್ತಿದೆ. ಕುಡಿಯುವ ನೀರಿಗೂ ಜನರು ಪರಿತಪಿಸುವಂತಾಗಿದೆ. ಆದರೂ ಇದುವರೆವಿಗೂ ಯಾವುದೇ ರೀತಿಯಾದಂತಹ ಬರಪರಿಹಾರ ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ಜಾರಿಮಾಡಲಿಲ್ಲ. ಅತಿವೃಷ್ಟಿ ಬಂದಾಗ ರೆಸಾರ್ಟ್ ರಾಜಕಾರಣ ಮತ್ತು ಆರ್‌ಎಸ್‌ಎಸ್ ಬೈಠಕ್‌ಗಳಲ್ಲಿ ಈ ಸರ್ಕಾರ ಮುಳುಗಿತ್ತು. ಭೀಕರ ಬರಗಾಲ ಬಂದಾಗ ಮುಖ್ಯಮಂತ್ರಿಗಳ

ಪುಟ 10 ಕ್ಕೆ

ಬಾಬ್ರಿ ಮಸೀದಿ ಧ್ವಂಸ 20.....

ಪುಟ 8 ರಿಂದ

ಜನಾಂಗದಲ್ಲಿ ಸಂಪೂರ್ಣವಾಗಿ ವಿಲೀನಗೊಳಿಸದಿದ್ದರೆ ರಾಷ್ಟ್ರೀಯ ಜೀವನದಲ್ಲಿ ಅವರಿಗೆ ಜಾಗ ಇಲ್ಲ. ಅವರು ತಮ್ಮ ಜನಾಂಗೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ ಭಿನ್ನತೆಗಳನ್ನು ಇಟ್ಟುಕೊಂಡಿರುವವರೆಗೆ ಅವರು ವಿದೇಶೀಯರಲ್ಲದೆ ಬೇರೇನೂ ಆಗಲು ಸಾಧ್ಯವಿಲ್ಲ" ಎಂದು ಗೋಲ್ವಾಲ್ಕರ್ ಹೇಳಿರುವುದನ್ನು ಇಂದು ಬಿಜೆಪಿ ತಿರಸ್ಕರಿಸುತ್ತದೆಯೇ?

3. **"ನಂಬಿಕೆ ಮತ್ತು ಆರಾಧನೆಯ ಪೂರ್ಣ ಸ್ವಾತಂತ್ರ್ಯ".**

ಬಾಬ್ರಿ ಮಸೀದಿಯ ಬಹಿರಂಗ ಧ್ವಂಸ ನಡೆಸಿದ ಕೂಡಲೇ ಬಿಜೆಪಿಯ ಜಾತ್ಯಾತಿತತೆಯ ಪರಿಕಲ್ಪನೆಯ ಈ ಸೂತ್ರವನ್ನು ಅವರು ಪ್ರತಿಪಾದಿಸಿರುವುದು ನಿಜಕ್ಕೂ ಒಂದು ವ್ಯಂಗ್ಯವೇ. 2002ರ ಗುಜರಾತ್ ಹತ್ಯಾಕಾಂಡದ ನಂತರ ಮತ್ತು ಆರೆಸ್ಸೆಸ್‌ನ ಮೂಲಮಂತ್ರಗಳಿಗೆ ಮರಳಲು ಅದರ ಸತತ ಪ್ರಯತ್ನಗಳ ಹಿನ್ನೆಲೆಯಲ್ಲಿ ಅದು ಇಂತಹ ವಿಶ್ವಾಸಘಾತವನ್ನು ಪುನರಾವರ್ತಿಸುವ ಸಾಧ್ಯತೆ ಕಾಣಿಸುತ್ತಿಲ್ಲ. ಇಲ್ಲಿಯೂ ಬಿಜೆಪಿ ಎಷ್ಟು ಪ್ರಾಮಾಣಿಕವಾಗಿದೆ ಎಂಬುದು ಅವರು ಗೋಲ್ವಾಲ್ಕರ್‌ರವರ "ನಾವೊಂದು ಪ್ರಾಚೀನ ದೇಶ. ಎಲ್ಲ ಪ್ರಾಚೀನ ದೇಶಗಳು ವಿದೇಶಿ ಜನಾಂಗಗಳೊಡನೆ ವರ್ತಿಸಬೇಕಾದಂತೆ, ಮತ್ತು ವರ್ತಿಸಿರುವಂತೆ, ನಮ್ಮ ದೇಶದಲ್ಲಿ ಬದುಕನ್ನು ಆರಿಸಿಕೊಂಡಿರುವ ವಿದೇಶಿ ಜನಾಂಗಗಳೊಡನೆ ವರ್ತಿಸೋಣ" ಎಂಬ ಮಾತನ್ನು ತಿರಸ್ಕರಿಸಲು ಸಿದ್ಧರಾದರೆ ಮಾತ್ರವೇ ಗೊತ್ತಾಗುತ್ತದೆ. "ಹಿಂದುಸ್ತಾನದಲ್ಲಿ ವಿದೇಶಿ ಜನಾಂಗಗಳು ಹಿಂದೂ ಸಂಸ್ಕೃತಿ ಮತ್ತು ಭಾಷೆಯನ್ನು ಅಂಗೀಕರಿಸಬೇಕು, ಹಿಂದೂ ಧರ್ಮವನ್ನು ಭಕ್ತಿಭಾವದಿಂದ ಕಾಣಬೇಕು, ಹಿಂದೂ ಧರ್ಮ ಮತ್ತು ಸಂಸ್ಕೃತಿಯನ್ನು ಅಂದರೆ ಹಿಂದೂರಾಷ್ಟ್ರವನ್ನು ವೈಭವೀಕರಿಸುವುದಲ್ಲದೆ ಬೇರಾವುದೆ ವಿಚಾರವನ್ನು ಹೊಂದಿರಬಾರದು, ಮತ್ತು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಕಳೆದುಕೊಂಡು, ಹಿಂದೂ ಜನಾಂಗದೊಳಗೆ ವಿಲೀನಗೊಳ್ಳಬೇಕು, ಇಲ್ಲವೇ ಅವರು ಹಿಂದೂರಾಷ್ಟ್ರಕ್ಕೆ ಸಂಪೂರ್ಣವಾಗಿ ಅಡಿಯಾಳಾಗಿ, ಏನನ್ನೂ ಕೇಳದೆ, ಯಾವುದೇ ವಿಶೇಷ ಹಕ್ಕಿಗೆ ಬಾಧ್ಯರಾಗದೆ, ಆದ್ಯತೆಯ ವರ್ತನೆಯೇನು, ನಾಗರಿಕ ಹಕ್ಕುಗಳನ್ನೂ ಕೇಳದೆ ದೇಶದಲ್ಲಿ ಉಳಿಯಬಹುದು. ಅವರಿಗೆ ಅನುಸರಿಸಲು ಬೇರಾವ ದಾರಿಯೂ ಇರಬಾರದು" ಎಂದು ಹೇಳಿ ಮೇಲೆ ಹೇಳಿದ ಮಾತುಗಳನ್ನು ಹೇಳಿದ್ದಾರೆ.

ರಾಷ್ಟ್ರೀಯ ಚರ್ಚೆ ಎಂಬ ಮುಖವಾಡ

ಆಗ ಶ್ರೀಯುತ ಅಡ್ವಾಣಿಯವರು ಜಾತ್ಯಾತೀತತೆ ಎಂದರೆ ಧರ್ಮವನ್ನು ರಾಜಕೀಯ ಮತ್ತು ಪ್ರಭುತ್ವದಿಂದ ಪ್ರತ್ಯೇಕಿಸುವುದು ಎಂಬ ಅದರ ನಿರೂಪಣೆಯ ವೈಜ್ಞಾನಿಕ ಆಧಾರವನ್ನು ಉದ್ದೇಶಪೂರ್ವಕವಾಗಿಯೇ ಬಿಟ್ಟಿದ್ದರು. ಇದೇನೂ ಚಾತುರ್ಯದ ಪ್ರದರ್ಶನ ಎನ್ನುವಂತಿಲ್ಲ. ಜಾತ್ಯಾತೀತತೆಯ ಈ ಅಂಶವನ್ನು ಪಾಲಿಸದೆ ವಿಭಿನ್ನ ನಂಬಿಕೆಗಳಿಗೆ ಸೇರಿದ ಎಲ್ಲರಿಗೂ ಸಮಾನ ಹಕ್ಕುಗಳು ಇರುವಂತೆ ಮಾಡಲು ಸಾಧ್ಯವಿಲ್ಲ. ಇದನ್ನು ತಪ್ಪಿಸಿ ಅಡ್ವಾಣಿಯವರು "ನಮಗೆ, ಜೀವನದ ಪ್ರತಿಯೊಂದು ಕ್ರಿಯೆಯೂ, ಅದು ವೈಯಕ್ತಿಕವಾಗಿರಲಿ, ಸಾಮಾಜಿಕವಾಗಿರಲಿ ಅಥವ ರಾಜಕೀಯವಾಗಿರಲಿ, ಅದು ಧರ್ಮದ ಒಂದು ಆದೇಶ. .....ಅಷ್ಟೇ ಏಕೆ, ಸ್ವತಃ ರಾಜಕೀಯವೇ......ಒಂದು ಸಣ್ಣ ಅಂಶವಾಗಿ, ಧರ್ಮದ ಒಂದು ಆದೇಶದ ಪರಿಪಾಲನೆಯಾಗಿ ಮಾತ್ರವೇ ಪರಿಗಣಿತವಾಗುತ್ತದೆ. ನಾವು ಹಿಂದೂಸ್ತಾನದಲ್ಲಿರುವವರು ಇಂತಹ ಒಂದು ಧರ್ಮದಲ್ಲಿ ಬದುಕಿದ್ದೇವೆ" ಎಂಬ ಗೋಲ್ವಾಲ್ಕರ್ ಮಾತನ್ನೇ ಪ್ರತಿಧ್ವನಿಸುತ್ತಾರೆ.

ಜಾತ್ಯಾತೀತತೆಯ ಮೇಲೆ ಒಂದು ರಾಷ್ಟ್ರೀಯ ಚರ್ಚೆಯಾಗಬೇಕೆಂದು ಬಿಜೆಪಿ ಪುನರುಚ್ಚರಿಸುತ್ತಲೇ ಇರುತ್ತದೆ. ಇದು ಅದಕ್ಕೆ ತಾನು ಆರೆಸ್ಸೆಸ್‌ನ ರಾಜಕೀಯ ಅಂಗವಾಗಿ ಕಾರ್ಯನಿರ್ವಹಿಸುವ, ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರವನ್ನು ಅವರ ಕಣ್ಣೋಟದ ಒಂದು ಹುಚ್ಚು ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ 'ಹಿಂದೂ ರಾಷ್ಟ್ರ'ವಾಗಿ, ಪರಿವರ್ತಿಸುವ ಆರೆಸ್ಸೆಸ್ ಅಜೆಂಡಾದ ಈಡೇರಿಕೆಗಾಗಿ ಕೆಲಸ ಮಾಡುವ ನಿಜ ಆಶಯಕ್ಕೆ ಮುಖವಾಡ ಹೊದಿಸುವ ಒಂದು ನೆಪವಷ್ಟೇ.

ಇಂಡಿಯಾ, ಅಂದರೆ ಭಾರತದ ಪರಮೋಚ್ಚ ಹಿತದೃಷ್ಟಿಯಿಂದ, ಇಂತಹ ದುಷ್ಟ ಅಜೆಂಡಾವನ್ನು ವಿಫಲಗೊಳಿಸಬೇಕಾಗಿದೆ. ಇಂತಹ ಶಕ್ತಿಗಳನ್ನು ತಡೆದು, ಸೋಲಿಸುವ ನಿರ್ಧಾರಕ್ಕೆ ಮತ್ತಷ್ಟು ಶಕ್ತಿ ತುಂಬಿದರೆ ಮಾತ್ರವೇ ಡಿಸೆಂಬರ್ 6ರ ಯಾವುದೇ ಸ್ಮರಣೆ ಅರ್ಥಪೂರ್ಣವಾಗುತ್ತದೆ. "ದುಷ್ಟರು ಗೆಲ್ಲಲು ಒಳ್ಳೆಯವರು ಬಾಯಿ ಮುಚ್ಚಿಕೊಂಡಿದ್ದರೆ ಸಾಕು" ಎಂಬುದು ತಲೆತಲಾಂತರದಿಂದ ಬಂದಿರುವ ಪ್ರಾಚೀನ ಜಾಣ್ನುಡಿ. ಇಂತಹ ಮೌನವನ್ನು ಮುರಿಯುವ ನಿರ್ಧಾರಕ್ಕೆ ದ್ವಿಗುಣ ಶಕ್ತಿ ತುಂಬಲು ಎಲ್ಲ ದೇಶಪ್ರೇಮಿ ಭಾರತೀಯರಿಗೆ ಈ ಇಪ್ಪತ್ತನೇ ವಾರ್ಷಿಕ ಅತ್ಯಂತ ಸೂಕ್ತ ಸಂದರ್ಭ.

"ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳನ್ನು ತಿರಸ್ಕರಿಸಿ...

ಪುಟ 9 ರಿಂದ

ಬದಲಾವಣೆ, ಗುಂಪುಗಾರಿಕೆ ರಾಜಕಾರಣದಲ್ಲಿ ತೊಡಗಿತ್ತು.

ಭ್ರಷ್ಟಾಚಾರ: ಕರ್ನಾಟಕ್ಕೆ ಬಿಜೆಪಿ ಒಂದು ಕಳಂಕ ಮತ್ತು ಕಪ್ಪುಚುಕ್ಕೆ

ಇನ್ನು ಭ್ರಷ್ಟಾಚಾರದ ವಿಷಯದಲ್ಲಿ ಕರ್ನಾಟಕ್ಕೆ ಬಿಜೆಪಿ ಒಂದು ಕಳಂಕ ಮತ್ತು ಕಪ್ಪುಚುಕ್ಕೆಯಾಗಿ ಇತಿಹಾಸದಲ್ಲಿ ದಾಖಲಾಗಿದೆ. ಕರ್ನಾಟಕದಲ್ಲಿ ಎಂದೂ ಮುಖ್ಯಮಂತ್ರಿಯಾಗಲಿ, ಮಂತ್ರಿಗಳಾಗಲಿ ಮತ್ತು ಶಾಸಕರಾಗಲಿ ಜೈಲಿಗೆ ಹೋದ ಉದಾಹರಣೆಗಳಿಲ್ಲ. ಆದರೆ ಬಿಜೆಪಿ ಅಧಿಕಾರದಲ್ಲಿ ಮುಖ್ಯಮಂತ್ರಿಯೂ ಸೇರಿ ಮಂತ್ರಿಗಳು ಜೈಲುಪಾಲಾದರು. ಗಣಿ ಲೂಟಿ, ಭೂಕಬಳಿಕೆ ಡಿನೋಟಿಫಿಕೇಷನ್ ಮತ್ತು ಇತರೆ ಭ್ರಷ್ಟಾಚಾರಗಳಲ್ಲಿ ತೊಡಗಿ ಸಾಲು ಸಾಲಾಗಿ ಜೈಲು ಸೇರಿದರು. ಈಗಲೂ ಒಬ್ಬ ಮಾಜಿ ಮಂತ್ರಿ ಜೈಲಿನಲ್ಲೇ ಇದ್ದಾರೆ. ಈ ರಾಜ್ಯದ ಗಣಿ ಸಂಪತ್ತನ್ನು ಮತ್ತು ಅರಣ್ಯ ಸಂಪತ್ತನ್ನು ಲೂಟಿ ಮಾಡಿ ರಾಜ್ಯವನ್ನು ಬರಿದು ಮಾಡಿ ಬಿಟ್ಟಿತು. ಇಷ್ಟೆಲ್ಲಾ ಭ್ರಷ್ಟಾಚಾರದಲ್ಲಿ ಮುಳುಗಿ ಮಂತ್ರಿಗಳು ಮತ್ತು ಶಾಸಕರು ಜೈಲು ಸೇರಿದರೂ ತಾನೊಂದು ಭಿನ್ನಪಕ್ಷ ಮತ್ತು ಶಿಸ್ತಿನ ಪಕ್ಷ ಎಂದು ಹೇಳಿಕೊಂಡ ಬಿಜೆಪಿ ಒಬ್ಬರ ಮೇಲೂ ಕನಿಷ್ಟ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳಲಿಲ್ಲ. ಬಿಜೆಪಿ ರಾಜ್ಯವನ್ನು ಎಲ್ಲಾ ರೀತಿಯಲ್ಲಿ ಲೂಟಿ ಹೊಡೆಯುತ್ತಿದ್ದರೂ. ಪ್ರಧಾನ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ಒಂದು ದಿನವೂ ಇದರ ವಿರುದ್ಧ ಬೀದಿಗಿಳಿದು ಹೋರಾಟವನ್ನು ಮಾಡಲಿಲ್ಲ. ಇನ್ನು ಜನತಾದಳವು ಈ ಸರ್ಕಾರದ ವಿರುದ್ಧ ಜನರನ್ನು ಅಣಿನೆರಿಸಿ ಹೋರಾಟಗಳನ್ನು ರೂಪಿಸಲಿಲ್ಲ. ಬದಲಿಗೆ ಪಿತೂರಿಗಳ ಮುಖಾಂತರವೇ ಈ ಸರ್ಕಾರವನ್ನು ಉರುಳಿಸಲು ಪ್ರಯತ್ನಮಾಡಿತು.

ಏನಿದೆ ಸಾಧನೆ ??

ಅಭಿವೃದ್ಧಿಯೇ ನಮ್ಮ ಗುರಿ, ಗುಜರಾತ್ ಸರ್ಕಾರ ನಮಗೆ ಮಾದರಿ ಎಂದು ಜಪಿಸುತ್ತಿದ್ದ ಬಿಜೆಪಿ ರಾಜ್ಯದ ಅಭಿವೃದ್ಧಿ ಮಾಡುವುದು ಬಿಡಿ, ರಾಜ್ಯವನ್ನು ಎಲ್ಲಾ ರೀತಿಯಲ್ಲಿ ದಿವಾಳಿ ಎಬ್ಬಿಸಿತು. ಜಾಗತಿಕ ಕೈಗಾರಿಕಾ ಬಂಡವಾಳ ಹೂಡಿಕೆಯ ಸಮಾವೇಶ ಮತ್ತು ಕೃಷಿಯಲ್ಲಿ ಜಾಗತಿಕ ಬಂಡವಾಳ ಹೂಡಿಕೆ ಹೆಸರಿನಲ್ಲಿ ದುಂದು ವೆಚ್ಚದ ಎರಡು ಸಮಾವೇಶಗಳನ್ನು ನಡೆಸಿದ್ದು ಬಿಟ್ಟರೆ ರಾಜ್ಯದಲ್ಲಿ ಕೈಗಾರಿಕೆಯ ಅಭಿವೃದ್ಧಿ ಆಗಲಿಲ್ಲ, ಕೃಷಿಯ ಅಭಿವೃದ್ಧಿ ಆಗಲಿಲ್ಲ. ಕಳೆದ ನಾಲ್ಕುವರೆ ವರ್ಷಗಳಲ್ಲಿ ಕೈಗಾರಿಕಾ ಉತ್ಪಾದನೆ ಪ್ರತಿವರ್ಷ ಕಡಿಮೆ ಆಗುತ್ತಾ ಬಂದು ವರ್ಷಕ್ಕೆ ಅದು ಕೇವಲ 4 % ಗೆ ಬಂದಿದೆ. ಇನ್ನೂ ಕೃಷಿ ಉತ್ಪಾದನೆ -3% ಗೆ ಹೋಗಿದೆ. ಕಳೆದ ನಾಲ್ಕುವರೆ ವರ್ಷಗಳಲ್ಲಿ ರೈತರ ಆತ್ಮಹತ್ಯೆಯಲ್ಲಿ ರಾಜ್ಯ ದೇಶದಲ್ಲಿ ಎರಡನೇ ಸ್ಥಾನದಲ್ಲಿದೆ. ಬಿಜೆಪಿ ಸರ್ಕಾರ ಮಂಡಿಸಿದ 4 ಆಯ-ವ್ಯಯಗಳಲ್ಲಿ ಮೀಸಲಿಟ್ಟಿದ್ದ ಪೂರ್ತಿಹಣವನ್ನು ಒಂದು ವರ್ಷವೂ ಖರ್ಚು ಮಾಡಲೇ ಇಲ್ಲ. ಕಳೆದ ವರ್ಷ ಮಂಡಿಸಿದ 1 ಲಕ್ಷ 4 ಸಾವಿರ ಕೋಟಿ ರೂ. ಅಯ-ವ್ಯಯದಲ್ಲಿ 8 ತಿಂಗಳು ಕಳೆದರೂ ಖರ್ಚು ಮಾಡಿರುವುದು 40% ಮಾತ್ರ. ಬಿಜೆಪಿ ಅಧಿಕಾರಾವಧಿಯಲ್ಲಿ ವಿದ್ಯುತ್ ರಂಗದಲ್ಲಿ ಆಗಲಿ, ನೀರಾವರಿಯಲ್ಲಾಗಲಿ ಒಂದೇ ಒಂದು ಬೃಹತ್ ಯೋಜನೆಯನ್ನು ನಿರ್ಮಿಸಲಿಲ್ಲ. ರಾಜ್ಯದ ಸಮಗ್ರ ಅಭಿವೃದ್ಧಿಗೆ ಪೂರಕವಾಗಿ ಒಂದು ಯೋಜನೆಯನ್ನು ರೂಪಿಸಲಿಲ್ಲ. ಇನ್ನು ಯಡಿಯೂರಪ್ಪ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಾಗ ರಾಜ್ಯದ ಸಾಲ ಇದ್ದದ್ದು 56 ಸ್ವಾವಿರ ಕೋಟಿ. ಈಗ ರಾಜ್ಯದ ಸಾಲ 1 ಲಕ್ಷ 20 ಸಾವಿರ ಕೋಟಿ. ಇನ್ನೊಂದು ಕಡೆ ರಾಜ್ಯದ ಆದಾಯವನ್ನು ಹೆಚ್ಚಿಸುವ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಬದಲಿಗೆ ಆಡಳಿತದ ಭ್ರಷ್ಟಾಚಾರದಿಂದಾಗಿ ಆದಾಯದ ಸೋರಿಕೆ ಹೆಚ್ಚಾಗಿದೆ.

ಗುಜರಾತ್ 'ಮಾದರಿ'

ಒಂದು ವಿಚಾರದಲ್ಲಿ ಮಾತ್ರ ಗುಜರಾತ್ ಮಾದರಿ ಕೆಲಸವನ್ನು ಬಿಜೆಪಿ ರಾಜ್ಯದಲ್ಲಿ ಬಹಳ ವ್ಯವಸ್ಥಿತವಾಗಿ ಮಾಡಿದೆ. ಅದೆಂದರೆ ತಾನು ಅಧಿಕಾರಕ್ಕೆ ಬಂದ ದಿನದಿಂದ ಇಡೀ ರಾಜ್ಯದಲ್ಲಿ ಕೋಮುಗಲಭೆಗಳನ್ನು ಹುಟ್ಟುಹಾಕಿ ಅಲ್ಪಸಂಖ್ಯಾತರ ಮೇಲೆ ದಾಳಿಯನ್ನು ವ್ಯವಸ್ಥಿತವಾಗಿ ನಡೆಸಿದೆ. ಚರ್ಚುಗಳ ಮೇಲೆ, ಮುಸಲ್ಮಾನರ ಪ್ರಾರ್ಥನಾ ಮಂದಿರಗಳ ಮೇಲೆ ದಾಳಿಗಳನ್ನು ನಡೆಸಿ ಅಲ್ಪಸಂಖ್ಯಾತರಲ್ಲಿ ಅಬದ್ರತೆಯನ್ನು ನಿರ್ಮಾಣ ಮಾಡಿದೆ. ಪ್ರತ್ಯೇಕವಾಗಿ ಕರಾವಳಿ ಜಿಲ್ಲೆಗಳನ್ನು ಸಂಘ ಪರಿವಾರ ತನ್ನ ಪ್ರಯೋಗಶಾಲೆಯನ್ನಾಗಿ ಮಾಡಿಕೊಂಡು ದಿನನಿತ್ಯ ಅಲ್ಪಸಂಖ್ಯಾತರ ಮೇಲೆ ದಾಳಿ, ಹೆಣ್ಣು ಮಕ್ಕಳ ಮೇಲೆ ದಾಳಿ ನಡೆಸಿ ಕರಾವಳಿಯ ಆಡಳಿತ ಯಂತ್ರಾಂಗವನ್ನು ಕೋಮುವಾದೀಕರಣಗೊಳಿಸಿ ಬಿಟ್ಟಿದೆ. ನಿರಂತರ ಹಲ್ಲೆಗೊಳಗಾದ ಅಲ್ಪಸಂಖ್ಯಾಂತರನ್ನು ಭಯಭೀತರನ್ನಾಗಿ ಮಾಡಿ ಮುಸ್ಲಿಂ ಅವರಲ್ಲಿ ಮತಾಂಧತೆಯನ್ನು-ಸೇಡಿನ ಮನೋಭಾವವನ್ನು ಹೆಚ್ಚಿಸಿದೆ.

ವಿರೋಧ ಪಕ್ಷಗಳ ವೈಫಲ್ಯ

ಬಿಜೆಪಿ ಈ ಜನ ವಿರೋಧಿ ಭ್ರಷ್ಟ ಸರ್ಕಾರದ ವಿರುದ್ಧ ಮತ್ತು ಅದರ ಕೋಮುವಾದಿ ಅಜೆಂಡಾದ ಮುಖಾಂತರ ಇಡೀ ರಾಜ್ಯವನ್ನು ಸರ್ವ ರೀತಿಯಲ್ಲಿ ಅಧಃಪತನಗೊಳಿಸಿರುವ ಈ ಸಂದರ್ಭದಲ್ಲಿ ಪ್ರಮುಖ ರಾಜಕೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿ(ಎಸ್) ಪಕ್ಷಗಳು ಜನರನ್ನು ಸಂಘಟಿಸಿ ಹೋರಾಟಗಳನ್ನು ರೂಪಿಸುವುದರಲ್ಲಿ ಸಂಪೂರ್ಣ ವಿಫಲವಾಗಿವೆ. ಅವು ಶಾಸನ ಸಭೆಯಲ್ಲಿ ಪರಿಣಾಮಕಾರಿಯಾಗಿ ಒಂದು ದಿವಸವೂ ಕೆಲಸ ಮಾಡಲಿಲ್ಲ. ಇವರು →

"ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ(ಎಫ್‌ಡಿಐ) ವ್ಯಾಪಾರಸ್ಥರ ಆತ್ಮಹತ್ಯೆಗೆ ಕಾರಣವಾದರೆ ಆಶ್ಚರ್ಯವಿಲ್ಲ"

—— ಬೃಂದಾ

ವರದಿ:
ಆರ್.ರಾಮಕೃಷ್ಣ

ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ನೀಡುವ ಕೇಂದ್ರ ಸರ್ಕಾರದ ದೇಶ ವಿರೋಧಿ ನೀತಿಯನ್ನು ವಿರೋಧಿಸಿ ನವೆಂಬರ್ 26, 2012 ರಂದು ಬೆಂಗಳೂರಿನಲ್ಲಿ ಸಿಪಿಐ, ಸಿಪಿಐ(ಎಂ), ಫಾರ್ವರ್ಡ್ ಬ್ಲಾಕ್ ಪಕ್ಷಗಳ ಪರವಾಗಿ ರಾಜ್ಯ ಮಟ್ಟದ ಸಮಾವೇಶ ಸಂಘಟಿಸಲಾಗಿತ್ತು. ಬೆಂಗಳೂರು ನಗರದ ಕಬ್ಬನ್ ಉದ್ಯಾನದೊಳಗಿನ ಎನ್.ಜಿ.ಓ. ಸಭಾಂಗಣದಲ್ಲಿ ನಡೆದ ಈ ಸಮಾವೇಶವನ್ನು ಸಿಪಿಐನ ಕಾಂ. ಬಾಬು, ಸಿಪಿಐ(ಎಂ)ನ ಕಾಂ. ವಿಜೆಕೆ ನಾಯರ್ ಅವರುಗಳಿದ್ದ ಅಧ್ಯಕ್ಷೀಯ ಮಂಡಳಿ ನಿರ್ವಹಿಸಿತು. ವೇದಿಕೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ.ಜಿ.ವಿ.ಶ್ರೀರಾಮರೆಡ್ಡಿ ಉಪಸ್ಥಿತರಿದ್ದರು. ಸಮಾವೇಶದ ಮುಖ್ಯ ಭಾಷಣಕಾರರಾಗಿ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯೆ ಕಾಂ.ಬೃಂದಾ ಕಾರಾಟ್ ಅವರು ಪಾಲ್ಗೊಂಡಿದ್ದರು.

ಆರಂಭದಲ್ಲಿ ಸಿಪಿಐ(ಎಂ) ಪಕ್ಷದ ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ. ಪ್ರಕಾಶ್ ಎಲ್ಲರಿಗೂ ಸ್ವಾಗತ ಕೋರಿದರು.

ಚಿಲ್ಲರೆ ವ್ಯಾಪಾರದಲ್ಲಿ ನೇರ ವಿದೇಶಿ ಬಂಡವಾಳ ತರಲು ಕೇಂದ್ರ ಸರ್ಕಾರ ಹೊರಟಿದೆ. ಅದು ಬರುವುದರಿಂದ ಕೇವಲ ಚಿಲ್ಲರೆ ವ್ಯಾಪಾರ ಮಾತ್ರವಲ್ಲ, ಕೃಷಿ ಕ್ಷೇತ್ರದ ಮೇಲೆ ಕೂಡ ಪರಿಣಾಮ ಬೀರಲಿದೆ ಎಂದು ಕೆ. ಪ್ರಕಾಶ್ ಹೇಳಿದರು.

ವಿದೇಶಿ ಬಂಡವಾಳಕ್ಕೆ ನಮ್ಮ ವಿರೋಧ ಇಲ್ಲ. ಆದರೆ ಆ ಬಂಡವಾಳದಿಂದ ದೇಶಕ್ಕೆ ತಂತ್ರಜ್ಞಾನ ಬರಬೇಕು, ಅದು ಉದ್ಯೋಗ ಸೃಷ್ಟಿ ಮಾಡಬೇಕು. ಅಮೇರಿಕದಲ್ಲಿ ಜನರು ವಸ್ತುಗಳ ಖರೀದಿಗೆ ವಾಲ್ ಮಾರ್ಟ್‌ಗೆಂದು 30–40 ಕಿ.ಮಿ. ದೂರದ ಮಳಿಗೆಗೆ ಹೋಗುತ್ತಾರೆ. ಅವರು ಕಾರುಗಳಲ್ಲಿ ಹೋಗುತ್ತಾರೆ. ನಮ್ಮ ಹಳ್ಳಿಗಳಲ್ಲಿ ಕೂಲಿಕಾರರು ಕೆ.ಜಿ.ಗಳಲ್ಲಿ ಸಾಮಾನು ಕೊಂಡುಕೊಳ್ಳುವುದಿಲ್ಲ. 100 ಗ್ರಾಂ. 200 ಗ್ರಾಂ. ಸಕ್ಕರೆ ಅಲ್ಲಿ ಕೊಡುತ್ತಾರೆಯೇ ? ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ನೀಡುವ

ನೀತಿಯಿಂದ ಎಪಿಎಂಸಿ ವ್ಯವಸ್ಥೆ ನಾಶವಾಗುತ್ತದೆ. ಎಪಿಎಂಸಿಗಳಲ್ಲಿ ದಲ್ಲಾಳಿಗಳ ನಡುವೆಯೇ ಸ್ಪರ್ಧೆ ಇದೆ. ಅದರಿಂದ ಅಷ್ಟಿಷ್ಟು ಬೆಲೆ ಸಿಗುತ್ತದೆ. ಆದರೆ ವಾಲ್‌ಮಾರ್ಟ್‌ನ ಏಕಸ್ವಾಮ್ಯ ಬಂದರೆ ಅಂತಹ ಅವಕಾಶವೇ ಇರುವುದಿಲ್ಲ ಎಂದು ಜಿವಿಶ್ರೀರಾಮರೆಡ್ಡಿಯವರು ಹೇಳಿದರು.



ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಸಾಹಿತಿ ಪ್ರೊ ಯು.ಅರ್. ಅನಂತ ಮೂರ್ತಿಯವರು ಸರ್ಕಾರದ ಈ ನೀತಿಯನ್ನು ವಿರೋಧಿಸಿ ಕಳುಹಿಸಿಕೊಟ್ಟ ಲಿಖಿತ ಸಂದೇಶವನ್ನು ಸಮಾವೇಶದಲ್ಲಿ ಓದಲಾಯಿತು.

ಕೋಟ್ಯಾಂತರ ಜನರ ಜೀವನಾಧಾರ ನಾಶ –ಬೃಂದಾ

ದೇಶವನ್ನು, ಕೋಟ್ಯಾಂತರ ಜನರ ಜೀವನಾಧಾರವನ್ನು ನಾಶ ಮಾಡುವ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳವನ್ನು ಆಹ್ವಾನಿಸುವ ನೀತಿಯ ವಿರುದ್ಧ ದೇಶದ ಕೋಟ್ಯಾಂತರ ಕುಟುಂಬಗಳನ್ನು ಕಾಪಾಡುವ ಪಣತೊಡಲು ಬಂದಿರುವ ನಿಮಗೆಲ್ಲರಿಗೂ ಅಭಿನಂದನೆಗಳು. ಯುಪಿಎ ಸರ್ಕಾರ ಹಠಮಾರಿತನ, ಪ್ರಜಾಪ್ರಭುತ್ವ ವಿರೋಧಿ ನೀತಿ ಅನುಸರಿಸುತ್ತಿದೆ. ಪಾರ್ಲಿಮೆಂಟಿನಲ್ಲಿ ನಿಯಮ 184 ರ ಅಡಿಯಲ್ಲಿ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ನೀತಿಯ ಬಗೆಗೆ ಚರ್ಚೆ ನಡೆಯಬೇಕು ಎಂಬ ಒತ್ತಾಯವನ್ನು ಅದು ನಿರಾಕರಿಸುತ್ತಿದೆ. ಸರ್ಕಾರ ಸಂವೇದನೆ ಕಳೆದುಕೊಂಡಿದೆ. ಇದು ಇನ್ನೂ ಎಷ್ಟು ದಿನ ನಡೆಯುತ್ತದೋ....!

ಪ್ರಜಾಪ್ರಭುತ್ವ ಮೌಲ್ಯಗಳ ಬಲಿ

ನಮ್ಮ ಕೇಂದ್ರ ಸರ್ಕಾರ ಬಹುರಾಷ್ಟ್ರೀಯ ಕಂಪನಿಯ ಹಿತವನ್ನು ರಕ್ಷಣೆ ಮಾಡಲು ಯಾವ ಮಟ್ಟಕ್ಕೂ ಹೋಗಲು ತಯಾರಿದೆ. ಆದಕ್ಕಾಗಿ ಪ್ರಜಾಪ್ರಭುತ್ವವನ್ನೇ..ಚುನಾಯಿತ ಸದಸ್ಯರ ಹಕ್ಕುಗಳನ್ನೇ ಮೊಟಕು ಮಾಡಲು ಯುಪಿಎ ಸರ್ಕಾರ ತಯಾರಾಗಿದೆ. ಇವತ್ತು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಬರುವುದನ್ನು ವಿರೋಧಿಸುವ ವಿಷಯದಲ್ಲಿ ಸಾಮಾನ್ಯ ಸಹಮತ ಇದೆ. ಸರ್ಕಾರಕ್ಕೆ ಇದು ಗೊತ್ತಿದೆ. ಆದ್ದರಿಂದಲೇ ಇದನ್ನು ಮುಂದೂಡಿಸಲು ಪ್ರಯತ್ನಿಸುತ್ತಿದೆ. ಆದ್ದರಿಂದ ಎಡಪಕ್ಷಗಳು ದೇಶದಾದ್ಯಂತ ಪ್ರಚಾರಾಂದೋಲನ ನಡೆಸುತ್ತಿವೆ.

ಚಿಲ್ಲರೆ ವ್ಯಾಪಾರದಲ್ಲಿ ವಾಲ್‌ಮಾರ್ಟ್ ಅಂತಹ ಸೂಪರ್ ಮಾರ್ಕೆಟ್‌ಗಳಿಗೆ ಬಿಟ್ಟುಕೊಡುವುದಿಲ್ಲ ಎಂದು ನಾವೆಲ್ಲರೂ ಎದ್ದು ನಿಲ್ಲಬೇಕಿದೆ.

ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಅನುಭವಗಳು

ನಮ್ಮ ವಿರೋಧ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಅನುಭವಗಳ ಆಧಾರದಲ್ಲಿದೆ. ಹಾಗಾಗಿ ಇದನ್ನು ಹೇಳುತ್ತಿದ್ದೇವೆ. ಜಗತ್ತಿನೆಲ್ಲೆಡೆ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ನಕಾರಾತ್ಮಕ ಪರಿಣಾಮ ಬೀರಿದೆ.

ರಾಜ್ಯ ಸರ್ಕಾರಗಳು ತಮ್ಮ ರಾಜ್ಯದಲ್ಲಿ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳ ಬೇಡದಿದ್ದರೆ ತಡೆಯಬಹುದು ಎಂದು ಕೇಂದ್ರ ಸರ್ಕಾರ ಹೇಳುತ್ತಿದೆ. ರಾಜ್ಯ ಸರ್ಕಾರಗಳ ಹಕ್ಕುಗಳನ್ನು ದಮನ ಮಾಡುವುದರಲ್ಲೇ ತನ್ನ ಆಯುಷ್ಯವನ್ನೆಲ್ಲ ಕಳೆದ ಕೇಂದ್ರ ಕಾಂಗ್ರೆಸ್ ಸರ್ಕಾರ ರಾಜ್ಯಗಳ ಹಕ್ಕುಗಳ ಬಗೆಗೆ ಈಗ ಮಾತನಾಡುತ್ತಿರುವುದು ಹಾಸ್ಯಾಸ್ಪದವಾಗಿದೆ.

ವಿಶ್ವ ವ್ಯಾಪಾರ ಸಂಘಟನೆ(WTO) ಒಪ್ಪಂದದ ಭಾಗ 3 ರಲ್ಲಿಯೇ ಈ ಷರತ್ತು ಇದೆ. ಯಾವುದೇ ಬಹುರಾಷ್ಟ್ರೀಯ ಕಂಪನಿ(ಎಂಎನ್‌ಸಿ) ಇರಲಿ ಅದಕ್ಕೆ ಈ ದೇಶದಲ್ಲಿ ಕಾರ್ಯ ನಿರ್ವಹಿಸುವ ದೇಶೀಯ ಕಂಪನಿಯ ಎಲ್ಲ ಹಕ್ಕುಗಳನ್ನು ಕೊಡಬೇಕಿದೆ.

ನಮ್ಮ ದೇಶದ ಸುಪ್ರಿಂ ಕೋರ್ಟ್ ಮತ್ತೆ ಮತ್ತೆ ಈ ವಾದವನ್ನು ಎತ್ತಿ ಹಿಡಿದಿದೆ. ರಾಜ್ಯ ಸರ್ಕಾರಗಳನ್ನು ನಡೆಸಿದ ಜನರಿಗೆ ತಿಳಿವಳಿಕೆ ಇಲ್ಲವೆ ?

ಹಿಂದೆ ಕೇರಳ ಸರ್ಕಾರ ತನ್ನ ರಾಜ್ಯದಲ್ಲಿ ರಿಲಯನ್ಸ್ ಕಂಪನಿಗೆ ಅವಕಾಶ ಕೊಡಲಿಲ್ಲ. ಈ ಬಗೆಗೆ ಸುಪ್ರಿಂ ಕೋರ್ಟ್ 'ಹಾಗೇ ನಿರಾಕರಿಸಲಾಗದು...ಬೇಕಿದ್ದರೆ ಕೆಲವು ನಿರ್ಬಂಧಗಳನ್ನು ಹಾಕಬಹುದು ಅಷ್ಟೆ' ಎಂದು ಹೇಳಿತು.

2011 ಡಿಸೆಂಬರ್‌ನಲ್ಲಿ ಆಗಿನ ಹಣಕಾಸು ಮಂತ್ರಿ ಪ್ರಣಬ್ ಮುಖರ್ಜಿ ಸರ್ವಸಮ್ಮತಿ ಇಲ್ಲದೇ ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ನೀಡುವ ನೀತಿ ಜಾರಿಗೆ ತರುವುದಿಲ್ಲ ಎಂದು ಲೋಕಸಭೆಯಲ್ಲಿ ಭರವಸೆ ನೀಡಿದ್ದರು. ಈಗ ರಾಜಕೀಯ ಪಕ್ಷಗಳಲ್ಲಿ ಕಾಂಗ್ರೆಸ್, ಎನ್‌ಸಿಪಿ ಬಿಟ್ಟು ಬಹುತೇಕ ಎಲ್ಲ

ಪುಟ 15 ಕ್ಕೆ

'ತೀರ್ಮಾನವನ್ನು ಕೈ ಬಿಡಬೇಕು'

ಡಾ. ಯು.ಅರ್. ಅನಂತಮೂರ್ತಿ

ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ಬಂಡವಾಳಕ್ಕೆ ಅವಕಾಶ ನೀಡಲು ಕೇಂದ್ರ ಸರ್ಕಾರ ಮಾಡಿರುವ ತೀರ್ಮಾನ ಬೀದಿ ಬದಿಯಲ್ಲಿ ತರಕಾರಿ, ಹಣ್ಣು ಮಾರುವ ಬಡ ಹೆಣ್ಣು ಮಕ್ಕಳು, ಗೂಡಂಗಡಿ/ಪೆಟ್ಟಿಗೆ ಅಂಗಡಿಗಳೂ ಸೇರಿದಂತೆ ಕೊಟ್ಯಾಂತರ ಜನರ ಬದುಕಿಗೆ ಮಾರಕ "ಸುಡಿ ಸುಡಿ ಪರದೇಶೀಯರ ವಸ್ತ್ರವ, ತೊಡಿ ಖಾದಿ ಸಮಸ್ತರ" ಎಂದು ಇಡೀ ದೇಶವೇ ಎದ್ದು ನಿಂತು ಹೋರಾಡಿ ಸ್ವದೇಶಿ ಭಾವನೆಯನ್ನು ಜಾಗೃತಗೊಳಿಸಿದ ದೇಶದಲ್ಲಿ ಇಂದು ಎಲ್ಲದಕ್ಕೂ ವಿದೇಶೀ ಬಂಡವಾಳವನ್ನು ಆಶ್ರಯಿಸುತ್ತಿರುವುದನ್ನು ಧೃಡವಾಗಿ ವಿರೋಧಿಸುತ್ತೇನೆ. ನಮ್ಮ ದೇಶದ ಜನರು ಕೊಳ್ಳುವ ಉಪಯೋಗಿಸುವ ವಸ್ತುಗಳ ಮೇಲೆ ವಿದೇಶೀಯರು ನಿಯಂತ್ರಣ ಸ್ಥಾಪಿಸಲು ಅವಕಾಶ ನೀಡುವುದು ನಮ್ಮ ಸಂಸ್ಕೃತಿಯ ಮೂಲ ಸೆಲೆಗಳ ಮೇಲೆಯೇ ಆಕ್ರಮಣ ಮಾಡಲು ಅವಕಾಶ ನೀಡಿದಂತೆ ಎಂಬುದನ್ನು ಕೇಂದ್ರ ಸರ್ಕಾರ ಈಗಲಾದರೂ ತಿಳಿದುಕೊಳ್ಳಬೇಕು. ಈ ತೀರ್ಮಾನವನ್ನು ಕೈ ಬಿಡಬೇಕು.

→

ಸಹ ಜಾತಿ ರಾಜಕಾರಣದ ಲೆಕ್ಕಾಚಾರದಲ್ಲಿ ಮುಳುಗಿ ರಾಜ್ಯವನ್ನು ಇನ್ನೊಂದು ರೀತಿ ಅವನತಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಜಾತಿಗಳ ಆಧಾರದಲ್ಲೆ ಬಿಎಸ್ ಯಡಿಯೂರಪ್ಪನವರ ಕೆಜೆಪಿ, ಶ್ರೀರಾಮುಲುರವರ ಬಿಎಸ್‌ಆ ಪಕ್ಷ ಇನ್ನೊಂದೆರಡು ಹೊಸ ರಾಜಕೀಯ ಪಕ್ಷಗಳು ಹುಟ್ಟಿಕೊಂಡು ಕರ್ನಾಟಕದ ಜನತೆಯನ್ನು ದಿಕ್ಕುತಪ್ಪಿಸಿ ನಿಜವಾದ ಪರ್ಯಾಯ ರಾಜಕಾರಣ ಇಲ್ಲವಾಗಿದೆ.

ಪರ್ಯಾಯ; ಅನಿವಾರ್ಯ ಅಗತ್ಯ

ಇಂತಹ ಪರಿಸ್ಥಿತಿಯಲ್ಲಿ ಕರ್ನಾಟಕದಲ್ಲಿ ನಿರಂತರವಾಗಿ ಜನಪರ ಚಳುವಳಿಗಳನ್ನು ನಡೆಸಿ ರೈತರನ್ನು ಕಾರ್ಮಿಕರನ್ನು ಮಹಿಳೆಯರನ್ನು ವಿದ್ಯಾರ್ಥಿ ಯುವಜನರನ್ನು ಸಂಘಟಿಸಿ ಹೋರಾಟಗಳನ್ನು ನಡೆಸುತ್ತಿರುವ ಸಿಪಿಐ(ಎಂ) ಪಕ್ಷ ಈ ರಾಜ್ಯದಲ್ಲಿ ಜನ ಹೋರಾಟಗಳ ಮುಖಾಂತರ ಒಂದು ಹೊಸರಾಜಕೀಯ ಶಕ್ತಿಯನ್ನು ರೂಪಿಸಬೇಕಾಗಿದೆ. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ಸನ್ನು ತಿರಸ್ಕರಿಸಬೇಕೆಂದು ಕರ್ನಾಟಕ ರಾಜ್ಯದ ಜನತೆಗೆ ಮನವಿ ಮಾಡಲು ಡಿಸೆಂಬರ್ 11 ಕ್ಕೆ ಒಂದು ಬೃಹತ್ ರಾಜಕೀಯ ಸಮಾವೇಶವನ್ನು ನಡೆಸುತ್ತಿದೆ. ಇದನ್ನು ಯಶಸ್ವಿಗೊಳಿಸಲು ಎಲ್ಲಾ ರೀತಿಯ ಪ್ರಯತ್ನಮಾಡುತ್ತಿದೆ.

ಅಭೂತಪೂರ್ವ ಮಹಾ ಧರಣ

ಯುಪಿಎ ಸರ್ಕಾರಕ್ಕೆ ಎಚ್ಚರಿಕೆಯ ಕರೆಗಂಟೆ

ಸಂಸತ್ತಿನ ಅಧಿವೇಶನ ಚಾಲಿಯಲ್ಲಿರುವಾಗಲೇ ಪ್ರತಿ ದಿನ ನವದೆಹಲಿಯಲ್ಲಿ ಬೃಹತ್ ಪ್ರತಿಭಟನೆಗಳು ನಡೆಯುತ್ತಲೇ ಇವೆ. ಜಂತರ್ ಮಂತರ್‌ನಲ್ಲಿ ಧಿಕ್ಕಾರದ ಘೋಷಣೆಗಳು ಮೊಳಗುತ್ತಲೇ ಇವೆ. ವಿವಿಧ ಜನ ಸಮುದಾಯಕ್ಕೆ ಸೇರಿದ ಪ್ರತಿಭಟನಾಕಾರರು ಕೇಂದ್ರ ಸರ್ಕಾರದ ವಿರುದ್ಧ ಬಹಿರಂಗವಾಗಿ ಆಕ್ರೋಶ ವ್ಯಕ್ತಪಡಿಸುತ್ತಲೇ ಇದ್ದಾರೆ.

ಯೋಜನಾ ಕಾರ್ಯಕರ್ತೆಯರ ಮಹಾಪದಾವ್ ಹೋರಾಟದ ಇತಿಹಾಸದಲ್ಲಿ ಹೊಸ ದಾಖಲೆಯನ್ನು ಬರೆದಿದೆ. ಕಳೆದ ಕನಿಷ್ಠ ಎರಡು ದಶಕಗಳಿಂದ ಇಂತಹ ಬೃಹತ್ ಜನಸಮೂಹ ಹೋರಾಟದ ಈ ಬೃಹತ್ ಸಾಗರದಲ್ಲಿ ಕಾಣಿಸಿಕೊಂಡಿರಲಿಲ್ಲ.

ಮಹಿಳೆಯರೇ ಅಧಿಕವಾಗಿರುವ 50 ಸಾವಿರಕ್ಕೂ ಅಧಿಕ ಪ್ರತಿಭಟನಾಕಾರರು ದೇಶದ ನಾನಾ ಮೂಲೆಗಳಿಂದ ಆಗಮಿಸಿದ್ದರು. ಸಿಐಟಿಯು ನೇತೃತ್ವದ ಸರಣಿ ಪ್ರತಿಭಟನೆಗಳ ಭಾಗವಾಗಿ ದಿನಂಪ್ರತಿ 50 ಸಾವಿರಕ್ಕೂ ಅಧಿಕ ಮಂದಿಗೆ ದೆಹಲಿಗೆ ಆಗಮಿಸಿ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು.

ಮಕ್ಕಳ ಸಮಗ್ರ ಅಭಿವೃದ್ಧಿ ಇಲಾಖೆ, ಆಶಾ ಕಾರ್ಯಕರ್ತೆಯರು, ಆರೋಗ್ಯ ಸಹಾಯಕಿಯರು, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಯೋಜನೆ ಸಿಬ್ಬಂದಿ, ಬಿಸಿಯೂಟ ನೌಕರರು, ರಾಷ್ಟ್ರೀಯ ಕೃಷಿಕ್ ಸಾಥಿ ಯೋಜನೆ ಸಿಬ್ಬಂದಿ... ಹೀಗೆ 12ಕ್ಕೂ ಅಧಿಕ ವಿವಿಧ ಯೋಜನೆಗಳ ಸಿಬ್ಬಂದಿ ಮತ್ತು ನೌಕರರು ಹೋರಾಟದ ಸಾಗರಕ್ಕೆ ಧುಮುಕಿದರು.

ಗೌರವ ಧನ, ಪ್ರೋತ್ಸಾಹ ಧನಗಳು ಬೇಡ.. ನಮಗೆ ಬೇಕಿರುವುದು ಕನಿಷ್ಠ ಕೂಲಿ, ಸಾಮಾಜಿಕ ಭದ್ರತಾ ಸೌಲಭ್ಯಗಳು ಎಂಬ ಘೋಷಣೆಗಳು ಸಂಸತ್ತಿನ ಹೊರಗೆ ಮೊಳಗಿದವು. ಜಮ್ಮು ಕಾಶ್ಮೀರದಿಂದ ಹಿಡಿದು ದಕ್ಷಿಣದ ಕೇರಳ, ತಮಿಳುನಾಡು, ಆಂಧ್ರ, ಕರ್ನಾಟಕದ ಮಹಿಳೆಯರಾದಿಯಾಗಿ ಸಾವಿರಾರು ಸಂಖ್ಯೆಯಲ್ಲಿ ದಿಲ್ಲಿಗೆ ಆಗಮಿಸಿದ್ದರು. ಹಿಂದಿ ಭಾಷಿಕ ರಾಜ್ಯಗಳಾದ ಬಿಹಾರ, ಜಾರ್ಖಂಡ್, ಛತ್ತೀಸ್‌ಗಢ, ಮಧ್ಯಪ್ರದೇಶ, ಮಹಾರಾಷ್ಟ್ರ, ಗುಜರಾತ್, ಹಿಮಾಚಲ ಪ್ರದೇಶ, ರಾಜಸ್ತಾನ, ಉತ್ತರ ಪ್ರದೇಶಗಳಿಂದಲೂ ದೊಡ್ಡ ಪ್ರಮಾಣದಲ್ಲಿ ಪ್ರತಿಭಟನಾಕಾರರು ಹರಿದುಬಂದರು.

ಸಿಐಟಿಯುವಿನ 11 ಮಂದಿ ನಾಯಕರು ಈ ಪ್ರತಿಭಟನೆಯನ್ನು ಬೆಂಬಲಿಸಿ ಎರಡು ದಿನಗಳ ಕಾಲ ಉಪವಾಸ ಸತ್ಯಾಗ್ರಹವನ್ನು ನಡೆಸಿದರು. ಈ ಸೌಹಾರ್ದ ಹೋರಾಟದಲ್ಲಿ ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿಗಳಾದ ಹೇಮಲತಾ, ವರಲಕ್ಷ್ಮಿ, ಸಿಐಟಿಯು ಉಪಾಧ್ಯಕ್ಷೆ ಮರ್ಸಿ ಅಮ್ಮ, ಹರ್‍ಯಾನ, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶಗಳ ಸಿಐಟಿಯು ರಾಜ್ಯ ಕಾರ್ಯದರ್ಶಿಗಳಾಗಿರುವ ಸುರಿಂದರ್ ಮಲಿಕ್, ಪ್ರಮೋದ್ ಪ್ರಧಾನ್, ಪ್ರೇಮ್‌ನಾಥ್ ರೈ, ವಿವಿಧ ರಾಜ್ಯಗಳ ಸಿಐಟಿಯು ಘಟಕಗಳ ಪದಾಧಿಕಾರಿಗಳಾಗಿರುವ ಉಮಾ ಮಹೇಶ್ವರ ರಾವ್, ತಮನ್ ಶರ್ಮಾ, ಗಜೇಂದ್ರ ಝಾ, ರಾಧಾ ರಮಣ್ ಸಾರಂಗಿ ಈ ಉಪಾವಾಸದಲ್ಲಿ ಪಾಲ್ಗೊಂಡಿದ್ದರು.

ಸಿಪಿಐಎಂ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್, ಪಾಲಿಟ್ ಬ್ಯೂರೋ ಸದಸ್ಯರಾದ ಸೀತಾರಾಮ ಯೆಚೂರಿ, ಬೃಂದಾ ಕಾರಟ್ ಈ ಮಹಾ ಹೋರಾಟಕ್ಕೆ ಸಂಪೂರ್ಣ ಬೆಂಬಲ ಘೋಷಿಸಿದರು.

ಕೇಂದ್ರ ಸರ್ಕಾರ ಜನರಿಗೆ ಆಹಾರ, ಆರೋಗ್ಯ ಮತ್ತು ಶಿಕ್ಷಣದ ಭದ್ರತೆಯನ್ನು ನೀಡುತ್ತಿಲ್ಲ. ಸೂಕ್ತ ಅನುದಾನಗಳಿಲ್ಲದೆ ಯೋಜನೆಗಳು ಜಾರಿಗೆ ಬರುತ್ತಿವೆ. ಈ ಯೋಜನೆಗಳಲ್ಲಿ ತೊಡಗಿಸಿಕೊಳ್ಳುವ ಕಾರ್ಮಿಕರಿಗೆ, ಕಾರ್ಯಕರ್ತರಿಗೆ ಸೂಕ್ತ ವೇತನ ನೀಡಲು ಹಣಕಾಸಿನ ಬೆಂಬಲವನ್ನೂ ನೀಡಿರುವುದಿಲ್ಲ ಎಂದು ಪ್ರಕಾಶ್ ಕಾರಟ್ ಕಟುವಾಗಿ ವಾಗ್ದಾಳಿ ನಡೆಸಿದರು. ಕಾಂಗ್ರೆಸ್ ಮತ್ತು ಬಿಜೆಪಿ ಮಧ್ಯೆ ಯಾವುದೇ ವ್ಯತ್ಯಾಸಗಳಿಲ್ಲ. ಎರಡೂ ರಾಷ್ಟ್ರೀಯ ಪಕ್ಷಗಳು ಆಳುವ ವರ್ಗದ ಹಿತಾಸಕ್ತಿಯನ್ನು ರಕ್ಷಿಸಲು ಪರಸ್ಪರ ಸಹಕಾರ ನೀಡುತ್ತಲೇ ಇವೆ ಎಂದು ಆರೋಪಿಸಿ ಸದೃಢ ಹಾಗೂ ಬಲಶಾಲಿ ಚಳವಳಿಯನ್ನು ಕಟ್ಟಿಬೆಳೆಸುವತ್ತ ಗಮನ ಹರಿಸಿ ಎಂದು ಪ್ರತಿಭಟನಾಕಾರರಿಗೆ ಇದು ವೇದಿಕೆಯಾಗಲಿದೆ ಎಂದು ಘೋಷಿಸಿದರು.



ರೈತ ಸಂಘ, ಕೃಷಿ ಕೂಲಿಕಾರ ಸಂಘ, ಜನವಾದಿ ಮಹಿಳಾ ಸಂಘ ಸೇರಿದಂತೆ ವಿವಿಧ ಸಾಮೂಹಿಕ ಸಂಘಟನೆಗಳ ನಾಯಕರು, ಸಂಸದರು ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ ಮಾತನಾಡಿದರು. ಐತಿಹಾಸಿ ಮಹಾಪದಾವ್‌ನ ಕೊನೇ ಭಾಷಣ ಮಾಡಿದ ಸಿಐಟಿಯು ನಾಯಕ



ಕಿವಿಮಾತು ಹೇಳಿದರು.

ಸಂಸತ್ತಿನೊಳಗೂ ಹೋರಾಟದ ಧ್ವನಿಯನ್ನು ಮೊಳಗಿಸುವುದಾಗಿ ಭರವಸೆ ನೀಡಿದ ಸೀತಾರಾಂ ಯೆಚೂರಿ, ವರ್ಷಗಳ ಹಿಂದೆ ನೀಡಿದ ಭರವಸೆಯನ್ನು ಈಡೇರಿಸಲು ಪ್ರಧಾನಿ ಮನಮೋಹನ್ ಸಿಂಗ್ ಹಿಂದೇಟು ಹಾಕುತ್ತಿದ್ದಾರೆ ಎಂದು ಜಾಡಿಸಿದರು.

ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ಹೋರಾಟದ ಸಾಗರಕ್ಕೆ ಧುಮುಕುತ್ತಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದ ಬೃಂದಾ ಕಾರಟ್, ಐತಿಹಾಸಿಕ ಚಳವಳಿಯನ್ನು ಮುಂದೊಯ್ಯಲು ತಪನ್ ಸೇನ್, ಯೋಜನಾ ಕಾರ್ಯಕರ್ತರಿಗೆ ಮೂಲಸೌಕರ್ಯ, ಸೇವಾ ಭದ್ರತೆ ನೀಡಿ ಕನಿಷ್ಠ 10 ಸಾವಿರ ವೇತನ ನಿಗದಿಪಡಿಸುವಂತೆ ಒತ್ತಾಯಿಸಿದರು. ಈ ಬೇಡಿಕೆಯನ್ನು ಇಟ್ಟುಕೊಂಡು ಡಿಸೆಂಬರ್ 18–19ರಂದು ಜೈಲ್ ಭರೋ ನಡೆಸಿ ಮರುದಿನ ನಡೆಯಲಿರುವ ಸಂಸತ್ತು ಚಲೋ ಯಶಸ್ವಿಗೊಳಿಸುವಂತೆ ಕರೆ ನೀಡಿದರು.

ಬಳಿಕ ಪರ್ಚಮ್ ಮತ್ತು ಜನನಾಟ್ಯ ಮಂಚ್ ಕಲಾವಿದರು ಹೋರಾಟಕ್ಕೆ ಸ್ಫೂರ್ತಿ ತುಂಬು ನಾಟಕವನ್ನು ಪ್ರದರ್ಶಿಸಿದರು.

ಬಸವ ಕಲ್ಯಾಣ ಜಾಥ...

ಪುಟ 5 ರಿಂದ

ಕೊರೆಯುವ ಚಳಿಯಲ್ಲಿಯೂ ರಾತ್ರಿ 09 ಗಂಟೆಯವರೆಗೆ ಮಾತುಗಳನ್ನು ಆಲಿಸಿದರು. ಆ ಸಭೆಯಲ್ಲಿ 2742ರೂ. ದೇಣಿಗೆ ಸಂಗ್ರಹವಾಯಿತು. ಇಡೀ ಜಾಥದಲ್ಲಿ ಸಂಗ್ರಹವಾದ ಅತಿ ಹೆಚ್ಚು ನಿಧಿ ಆದಾಗಿತ್ತು.

ಚಿನ್ನದ ನಾಡು ಕೆ.ಜಿ.ಎಫ್.ನಲ್ಲಿ ಎನ್.ಡಿ.ಎ ಸರಕಾರವಿದ್ದಾಗ ಗಣಿ ಮುಚ್ಚಿರುವುದು. ಗಣಿ ಮುಚ್ಚಲು ಕಾಂಗ್ರೆಸ್ ಎಂ.ಪಿ ಕುತಂತ್ರ, ಗಣಿ ಪುನಶ್ಚೇತನದ ವಿಷಯಗಳು ಕುರಿತ ಚರ್ಚೆಯಾಯಿತು, 3ಕಡೆಗಳಲ್ಲಿ ಸಭೆ ನಡೆಯಿತು. ರೇಷ್ಮೆ ಸಚಿವರ ಊರು ಹೊಸಕೋಟೆಯಲ್ಲಿ ರೇಷ್ಮೆ ಬೆಳೆಗಾರರ ಸಮಸ್ಯೆ, ಕಾಂಗ್ರೆಸ್/ಬಿಜೆಪಿ ಸರಕಾರಗಳ ನೀತಿಗಳು ಬೆಲೆ ಕುಸಿತಕ್ಕೆ, ಆದಾಯ ಕಡಿಮೆ ಮಾಡುವುದಕ್ಕೆ ಕಾರಣವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮಾಜ ಕಲ್ಯಾಣ ಸಚಿವರ ಊರಾದ ಆನೇಕಲ್‌ನಲ್ಲಿ ಕಡೆಯ ಸಭೆ ನಡೆಯಿತು. ಬ್ರಾಹ್ಮಣರ ಎಂಜಲು ಎಲೆಯ ಮೇಲೆ ಉರುಳಾಡುವ ಮಡೆಸ್ನಾನ, ಮಡೆಸ್ನಾನ ಬೇಡ ಈಗ ಎಡೆಸ್ನಾನ ಎನ್ನುವ ಜಾತೀಯ ಬೀಜವನ್ನು ಒಳಗಡೆಯೇ ಬಿಜೆಪಿ ಬಿತ್ತುತ್ತಿದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದಾಗ ಜನರು ಉತ್ತಮ ಪ್ರತಿಕ್ರಿಯೆ ತೋರಿಸಿದರು. ಜಾಥವು 13 ಜಿಲ್ಲೆಗಳಲ್ಲಿ ಸಂಚಾರ ಮಾಡಿ 51 ಸಭೆಗಳನ್ನು ನಡೆಸಿತು. ಪರ್ಯಾಯ ರಾಜಕೀಯ ನೀತಿಗಳಿಗೆ ಜನರು ಉತ್ತಮ ಪ್ರತಿಕ್ರಿಯೆ ವ್ಯಕ್ತಪಡಿಸಿರುವುದು ಸಂತೋಷದಾಯಕ.

ಜಾಥ - I ಬಸವಕಲ್ಯಾಣ –ಬೆಂಗಳೂರು ತಂಡದ ಸದಸ್ಯರು

ಮಾರುತಿ ಮಾನ್ಪಡೆ, ಬಸವರಾಜ್ ಹಗರಿಬೊಮ್ಮನಹಳ್ಳಿ, ಆನಂತ ನಾಯ್ಕ್.ಎನ್, ರಮಣ ಚಿಕ್ಕಬಳ್ಳಾಪುರ, ಪ್ರಕಾಶ್ ಅಲಾಂಜ್, ಅಮೀತ್ (ಮಾಲೂರು), ರಮೇಶ್ ವಿರಾಪುರ, ಯು. ಬಸವರಾಜ್ (ಗುಲ್ಬರ್ಗಾ ಜಿಲ್ಲೆ), ಸುನಿಲ್ ಮಾನ್ಪಡೆ, ಗಂಗಾಧರಸ್ವಾಮಿ ಗಂಗಾವತಿ

ಜನಶಕ್ತಿ
ಕನ್ನಡ ವಾರಪತ್ರಿಕೆ


'ನಗದು ವರ್ಗಾವಣೆ' ಎಂಬ ಬಡಜನರ ಸಬ್ಸಿಡಿ ಕಡಿತದ ಹೊಸ ಯೋಜನೆ

ದುಡಿಯುವ ಜನಗಳಿಗೆ ಕೊಡುವ ಸಬ್ಸಿಡಿಗಳ ಕಡಿತದ ಯುಪಿಎ ಸರಕಾರದ ಗೀಳು ಈಗ ಹೊಸ ಸ್ವರೂಪ ತಳೆದಿದೆ–'ನಗದು ವರ್ಗಾವಣೆ' ಎಂಬ ಹೆಸರಿನಲ್ಲಿ. ಮುಂದಿನ ಜನವರಿಯಿಂದ ದೇಶದ 16 ರಾಜ್ಯಗಳ ಆರಿಸಿದ 51 ಜಿಲ್ಲೆಗಳಲ್ಲಿ ವಿವಿಧ ಕೇಂದ್ರ ಸರಕಾರದ ಸಾಮಾಜಿಕ ನ್ಯಾಯ, ಮಾನವ ಸಂಪನ್ಮೂಲ, ಅಲ್ಪಸಂಖ್ಯಾತರ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಕಾರ್ಮಿಕ ಮತ್ತು ಉದ್ಯೋಗ ಇಲಾಖೆಗಳ 29 ಕಲ್ಯಾಣ ಕಾರ್ಯಕ್ರಮಗಳನ್ನು ಈ ಯೋಜನೆಯ ಅಡಿಯಲ್ಲಿ ತರಲಾಗುವುದಂತೆ. ಇವುಗಳಲ್ಲಿ ಹೆಚ್ಚಿನವು ಸ್ಕಾಲರ್‌ಶಿಫ್‌ಗಳು, ಪಿಂಚಣಿಗಳು ಇತ್ಯಾದಿಗಳಿಗೆ ಸಂಬಂಧಪಟ್ಟವುಗಳು. ಇವನ್ನು ಆಧಾರ್ ಮೂಲದ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗುವುದಂತೆ. ಮುಂದೆ ಇವನ್ನು ಪಡಿತರದ ಮೂಲಕ ಹಂಚುವ ಆಹಾರ ಸಾಮಗ್ರಿಗಳು, ರಸಗೊಬ್ಬರ ಮುಂತಾದವುಗಳಿಗೆ ವಿಸ್ತರಿಸಲಾಗುವುದಂತೆ.

ಪ್ರಧಾನ ಮಂತ್ರಿಗಳ ಅಚ್ಚುಮೆಚ್ಚಿನ ಈ ಯೋಜನೆಯನ್ನು ಕಾಂಗ್ರೆಸ್ ಪಕ್ಷ ಒಂದು ಪಥಪ್ರದರ್ಶಕ ಮತ್ತು ಹೊಸದಾರಿಯನ್ನು ತೆರೆದಿರುವ ಕಾರ್ಯಕ್ರಮ ಎಂದು 'ಸ್ವಾಗತಿಸಿದೆ'. ಬೇರೆ ಹೀಗೆ ಪಕ್ಷದ ಪರವಾಗಿ ಸ್ವಾಗತಿಸಿದವರು ಯುಪಿಎ–2 ಮಂತ್ರಿಗಳೇ. ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಈ 'ಕ್ರಾಂತಿಕಾರಿ, ಐತಿಹಾಸಿಕ ಕಾರ್ಯಕ್ರಮ'ದ ಗುರಿ 'ನಿಮ್ಮ ಹಣ ನಿಮ್ಮ ಕೈಗಳಲ್ಲಿ' ಎಂಬುದು ಎಂದಿದ್ದಾರೆ. ಯುಪಿಎ–2 ಹಣಕಾಸು ಮಂತ್ರಿಗಳು ಇದು ಬಡವರಿಗೆ ಪ್ರಯೋಜನಗಳನ್ನು ದಕ್ಷತೆಯಿಂದ ತಲುಪಿಸುವ 'ಆಟ ಬದಲಾಯಿಸುವ' ಕಾರ್ಯಕ್ರಮ ಎಂದಿದ್ದಾರೆ.

'ಆಟ ಬದಲಾಯಿಸುವ' ಯೋಜನೆಯೇ ಸರಿ, ಏಕೆಂದರೆ ಈ 'ಆಟ'ದ ನಿಯಮಗಳು ಯುಪಿಎ–2 ಸರಕಾರದ ಸಬ್ಸಿಡಿ ಕಡಿತದ ಗೀಳಿನ ಪರವಾಗಿ ಬಡವರ ವಿರುದ್ಧವಾಗಿರುವ ನಿಯಮಗಳು ಎಂದು ಸಿಪಿಐ(ಎಂ) ಇದನ್ನು ಖಂಡಿಸಿದೆ. ಮುಂದೆ ಆಹಾರ ಸಾಮಗ್ರಿಗಳನ್ನೂ ಇದರ ಅಡಿಗೆ ತರಲಾಗುವುದು ಎಂದರೆ ವಿಪರೀತ ಹಣದುಬ್ಬರದ ಸಮಯದಲ್ಲಿ ಸಾರ್ವಜನಿಕ ಸಾಮಗ್ರಿಗಳ ಜಾಗದಲ್ಲಿ ನಗದು ವರ್ಗಾವಣೆಯನ್ನು ತರುವುದು, ಈ ಮೂಲಕ ವಾಸ್ತವವಾಗಿ ಸಬ್ಸಿಡಿಗಳನ್ನು ಕಡಿತ ಮಾಡುವುದು. ಏಕೆಂದರೆ ಹೀಗೆ ವರ್ಗಾಯಿಸುವ ನಗದು ಆಹಾರ ಸಾಮಗ್ರಿಗಳ ಹೆಚ್ಚಿದ ಬೆಲೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ.

ರೇಗಾ ಕೂಲಿಗಳನ್ನು ಮತ್ತು ಹಿರಿಯ ನಾಗರಿಕರ ಪಿಂಚಣಿಗಳನ್ನು 'ಆಧಾರ್'ಗೆ ಥಳಕು ಹಾಕುವುದರಿಂದ ಹಲವಾರು ಮಂದಿಯನ್ನು ಇವುಗಳಿಂದ ವಂಚಿಸಲಾಗುವುದು, ಏಕೆಂದರೆ ದೈಹಿಕ ಕೆಲಸಗಾರರು ಮತ್ತು ಹಿರಿಯ ನಾಗರಿಕರ ಜೀವಶಾಸ್ತ್ರೀಯ(ಬಯೊಮೆಟ್ರಿಕ್) ಅಳತೆಗಳಲ್ಲಿ 20ಶೇ.ದಷ್ಟು ತಪ್ಪುಗಳು ಇರುವ ಸಾಧ್ಯತೆ ಇದೆ ಎಂದು ಪರಿಣಿತರು ಮತ್ತೆ-ಮತ್ತೆ ಎಚ್ಚರಿಸಿದ್ದಾರೆ. ಆದರೆ ಈ ಯಾವುದರ ಬಗ್ಗೆ ಚರ್ಚೆ



ನಡೆಸದೆಯೇ 'ಆಧಾರ್'ನಂತವುಗಳನ್ನು ಮುಂದೊತ್ತಲಾಗುತ್ತದೆ. ಸಾಮಾಜಿಕ ಪ್ರಯೋಜನಗಳನ್ನು ಇದರೊಂದಿಗೆ ಜೋಡಿಸುವುದು ದೈಹಿಕ ಕೆಲಸಗಾರರ ವಿಷಯದಲ್ಲಿ ಹಲವು ದುಷ್ಪರಿಣಾಮಗಳಿಗೆ ಎಡೆಕೊಡಬಹುದಾದ್ದರಿಂದ ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದು



ವೇದರಾಜ ಎನ್.ಕೆ.

ಸಿಪಿಐ(ಎಂ) ಹೇಳಿದೆ.

ಸ್ಕಾಲರ್‌ಶಿಪ್‌ಗಳು, ಪಿಂಚಣಿಗಳು ಈಗಾಗಲೇ ಬ್ಯಾಂಕ್ ಖಾತೆಗಳಿಗೇ ಹೋಗುತ್ತಿವೆ. ಆದ್ದರಿಂದ ಈ ಹೊಸ ಯೋಜನೆಯಲ್ಲಿ ಸದ್ಯಕ್ಕಂತೂ 'ಕ್ರಾಂತಿಕಾರಕ'ವಾದ್ದು ಏನೂ ಇಲ್ಲ. ಏಕೆಂದರೆ ಈ ವಿಪರೀತ ಹಣದುಬ್ಬರದ ದಿನಗಳಲ್ಲಿ ಇವುಗಳನ್ನು ಬೆಲೆ ಸೂಚ್ಯಂಕದೊಡನೆ ಜೋಡಿಸುವ ಸೂಚನೆಯೇನೂ ಇಲ್ಲವೇ ಇಲ್ಲ.

ಅಖಿಲ ಭಾರತ ಕೃಷಿ ಕೂಲಿಗಾರರ ಸಂಘ ಇದೊಂದು ಮನಮೋಹನ ಸಿಂಗ್ ಸರಕಾರದ ಕರಾಳ ಪ್ರಯತ್ನ ಎಂದು ಖಂಡಿಸಿದೆ. ಇದು ಒಂದೆಡೆ ಕೋಟಿಗಟ್ಟಲೆ ಗ್ರಾಮೀಣ ಬಡವರ ಬದುಕಿನ ಮೇಲೆ, ಸಾಮಾಜಿಕ ಭದ್ರತೆಯ ಸೌಲಭ್ಯಗಳ ಮೇಲೆ ತೀವ್ರ ಪರಿಣಾಮ ಬೀರಿದರೆ, ಇನ್ನೊಂದೆಡೆ ಮಾರುಕಟ್ಟೆ ಶಕ್ತಿಗಳು ಬೆಲೆಯೇರಿಕೆಗಳಿಂದ ಪ್ರಯೋಜನ ಗಿಟ್ಟಿಸುವುದನ್ನು ಮರೆಮಾಚುತ್ತದೆ. ಭ್ರಷ್ಟಾಚಾರ ಮತ್ತು ಸೋರುವಿಕೆಯನ್ನು ತಡೆಯುವ ಹೆಸರಿನಲ್ಲಿ ಇದು ಫಲಾನುಭವಿಗಳ ಸಂಖ್ಯೆಯನ್ನು ತೀವ್ರವಾಗಿ ಕಡಿತಗೊಳಿಸಿ, ಅಂತಿಮವಾಗಿ ಬಡವರಿಗೆ ಕೊಡುವ ಎಲ್ಲ ಸಬ್ಸಿಡಿಗಳನ್ನು ತೆಗೆದು ಹಾಕುತ್ತದೆ ಎಂದು ಎಚ್ಚರಿಸಿರುವ ಕೃಷಿ ಕಾರ್ಮಿಕರ ಸಂಘ ಈ ವಿಷಯದಲ್ಲಿ ರಾಷ್ಟ್ರೀಯ ಮಟ್ಟದ ಪ್ರಚಾರಾಂದೋಲನ ನಡೆಸಲು ನಿರ್ಧರಿಸಿದೆ. ಫೆಬ್ರುವರಿ 20-21ರ ಅದರ ದೇಶವ್ಯಾಪಿ ಮುಷ್ಕರದಲ್ಲಿ ಇದು ಒಂದು ಮುಖ್ಯ ಬೇಡಿಕೆಯಾಗಿರುತ್ತದೆ ಎಂದು ಅದು ಹೇಳಿದೆ.

2ಜಿ ಹರಾಜು 'ಅಧ್ವಾನ': ಯುಪಿಎ–2 ಕುತಂತ್ರ?

ಹಿಂದಿನ ದೂರಸಂಪರ್ಕ ಮಂತ್ರಿಗಳ ಹರಾಜನ್ನು ರದ್ದುಗೊಳಿಸಿದ ಸುಪ್ರಿಂ ಕೋರ್ಟ್ 2ಜಿ ತರಂಗಾಂತರದ ಮರು ಹರಾಜು ನಡೆಸಲು ಹೇಳಿತ್ತು. ಅದನ್ನು ಪಾಲಿಸುವ ಹೆಸರಿನಲ್ಲಿ ಹರಾಜು ನಡೆಸಿದ್ದೂ ಆಯಿತು. ಇದರಲ್ಲಿ ನಿರೀಕ್ಷಿಸಿದ 40,000 ಕೋಟಿರೂ.ಗಳ ಬದಲು ಕೇವಲ 9,407 ಕೋಟಿ ರೂ.ಗಳಷ್ಟೆ ವಸೂಲಾಗಿರುವುದರಿಂದ ಇದೊಂದು 'ಫ್ಲಾಪ್' ಎಂದು ಮಾಧ್ಯಮಗಳು ಪ್ರಚಾರ ಮಾಡುತ್ತಿವೆ. ಯುಪಿಎ–2 ಸರಕಾರಕ್ಕೆ ಇದರಿಂದ ಬೇಸರವಾಗುವ ಬದಲು ಸಂತೋಷವೇ ಆದಂತಿದೆ. ಹೊಸ ದೂರಸಂಪರ್ಕ ಮಂತ್ರಿಯಾದಿಯಾಗಿ ಯುಪಿಎ ಮಂತ್ರಿಗಣ ಇದು ಹಿಂದಿನ ತರಂಗಾಂತರ ಹಂಚಿಕೆ ಕುರಿತ ಸಿಎಜಿ ಲೆಕ್ಕಾಚಾರವೇ ತಪ್ಪು ಎಂಬುದನ್ನು ತೋರಿಸಿದೆ, ಇದೇ ರೀತಿ ಕೆಜಿ (ಅನಿಲ ನಿಕ್ಷೇಪಗಳ ಕಾಂಟ್ರಾಕ್ಟ್) ಹಗರಣದಲ್ಲೂ ಸಿಎಜಿ ಲೆಕ್ಕಾಚಾರ ತಪ್ಪಾಗಿರುವ ಸಾಧ್ಯತೆಯೇ ಹೆಚ್ಚು ಎಂದು ಹೇಳುತ್ತಾ ತಿರುಗುತ್ತಿದೆ.

ಇದರಿಂದಾಗಿ ಯುಪಿಎ–2 ಸರಕಾರ ಇಂತಹ 'ಅಧ್ವಾನ'ವನ್ನು ನಡೆಸಲೆಂದೇ ಈ ಹರಾಜು ನಡೆಸಿರಬಹುದೇ, ಸರಕಾರ ಮತ್ತು ಖಾಸಗಿ ದೂರಸಂಪರ್ಕ ಉದ್ದಿಮೆ ಇದರಲ್ಲಿ ಶಾಮೀಲಾಗಿದೆಯೇ ಎಂಬ ಶಂಕೆ ಬಲಗೊಂಡಿದೆ. ಮೊದಲನೆಯದಾಗಿ, ಈ ಹರಾಜು ಸುಪ್ರಿಂ ಕೋರ್ಟ್ ಆದೇಶವನ್ನು ಪೂರ್ಣವಾಗಿ ಪಾಲಿಸಿಲ್ಲ. ರದ್ದಾದ ಎಲ್ಲ ವಲಯಗಳಿಗೂ ಹರಾಜು ನಡೆಸಿಲ್ಲ, ಈ ಬಗ್ಗೆ ಸ್ವತಃ ಸುಪ್ರಿಂ ಕೋರ್ಟ್ ತನ್ನ ನಿರ್ದೇಶನಗಳ ಉಲ್ಲಂಘನೆ ಎಂದು ಟಿಪ್ಪಣಿ ಮಾಡಿದೆ. ಹರಾಜು ಮಾಡಿಲ್ಲದ ವಲಯಗಳಲ್ಲಿ ದಿಲ್ಲಿ, ಮುಂಬೈ ಮತ್ತು ಕರ್ನಾಟಕ ವಲಯಗಳು ಸೇರಿವೆ. ಇವುಗಳ ಮೌಲ್ಯ ಒಟ್ಟು 2ಜಿ ತರಂಗಾಂತರದ 50ಶೇ.ಕ್ಕಿಂತಲೂ ಹೆಚ್ಚು.

ಸುಪ್ರಿಂ ಕೋರ್ಟ್ ರದ್ದು ಪಡಿಸಿದ 122 ಲೈಸೆನ್ಸ್‌ಗಳ ನೀಡಿಕೆಯಲ್ಲೂ ಸರಕಾರಕ್ಕೆ 9,014 ಕೋಟಿ ರೂ.ಗಳು ಬಂದಿತ್ತು. ಆದ್ದರಿಂದ 1.76 ಲಕ್ಷ ಕೋಟಿ ರೂ.ಗಳ ನಷ್ಟ ಎಂಬ ಸಿಎಜಿ ಲೆಕ್ಕಾಚಾರ ತಪ್ಪು ಎನ್ನಲಾಗುತ್ತಿದೆ. ಆದರೆ ಈಗ ಹರಾಜು ಮಾಡಿರುವುದು 122 ಲೈಸೆನ್ಸ್‌ಗಳಲ್ಲಿ ಕೊಟ್ಟ ತರಂಗಾಂತರದ 1/5 ರಷ್ಟು ಮಾತ್ರ ಎಂಬ ಸಂಗತಿಯನ್ನು ಮರೆಮಾಚಲಾಗುತ್ತಿದೆ. 2008ರಲ್ಲಿ ಒಟ್ಟು 756.84 ಮೆಗಾಹರ್ಟ್ಸ್ ತರಂಗಾಂತರ ನೀಡಲಾಗಿತ್ತು. ಈ ಬಾರಿ ಹರಾಜಿಗೆ ಇಟ್ಟದ್ದು 366.25 ಮೆ.ಹ. ಮಾತ್ರ, ಅಂದರೆ 48.4ಶೇ. ಅದರಲ್ಲೂ ಮಾರಾಟವಾದದ್ದು ಕೇವಲ 128.75 ಮೆ.ಹ. ಅಂದರೆ ಒಟ್ಟು ತರಂಗಾಂತರದ 17ಶೇ. ಮಾತ್ರ. ಈ ತರಂಗಾಂತರದಿಂದ 2008 ರಲ್ಲಿ ಸರಕಾರದ ಖಜಾನೆಗೆ ಬಂದದ್ದು ಕೇವಲ 1205 ಕೋಟಿ ರೂ. ಇದಕ್ಕೆ ಹೋಲಿಸಿದರೆ ಈ 'ಅಧ್ವಾನ'ದ ಹರಾಜು ಕೂಡ 2008ಕ್ಕಿಂತ ಸುಮಾರು ಎಂಟು ಪಟ್ಟು ಆದಾಯವನ್ನು ತಂದಿದೆ. ಅದೂ ಮೊಬೈಲ್ ಮಾರುಕಟ್ಟೆ 2008 ರಲ್ಲಿ ಇದ್ದಷ್ಟು ಬೃಹತ್ ಪ್ರಮಾಣದಲ್ಲಿರದೆ, ಸುಮಾರಾಗಿ

ಪುಟ 15 ಕ್ಕೆ

ಕೃಷಿ ಕಾರ್ಮಿಕರಿಗೆ ಆರೋಗ್ಯ, ಸುರಕ್ಷತೆ ಬೇಕಿಲ್ಲವೇ?

ಯುಪಿಎ–2 ಸರಕಾರ ಆರೋಗ್ಯ, ಸುರಕ್ಷತೆ ಮತ್ತು ಪರಿಸರದ ಸಮಸ್ಯೆಗಳು ಕೃಷಿ ಕಾಮಿಕರನ್ನು ಮತ್ತು ಸೇವಾ ವಲಯದ ಕೆಲಸಗಾರರನ್ನು ತಟ್ಟುವುದಿಲ್ಲವೆಂದು ಭಾವಿಸಿದಂತೆ ಕಾಣುತ್ತದೆ. ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ, ಐಎಲ್‌ಒ ಇತ್ತೀಚೆಗೆ ದುಡಿಮೆಯ ಸ್ಥಳದಲ್ಲಿ ಆರೋಗ್ಯ, ಸುರಕ್ಷತೆ ಮತ್ತು ಪರಿಸರ ಕುರಿತಂತೆ ಅಂಗೀಕರಿಸಿರುವ ನಿರ್ಣಯ ಸಂಖ್ಯೆ 155ಕ್ಕೆ ಭಾರತ ಸರಕಾರ ಮಾನ್ಯತೆ ನೀಡಿದೆ. ಆದರೆ ಕೃಷಿ ಕಾರ್ಮಿಕರು ಮತ್ತು ಸೇವಾವಲಯದ ಕಾರ್ಮಿಕರನ್ನು ಇದರಿಂದ ಹೊರಗಿಡುವ ಪ್ರಯತ್ನ ಮಾಡಿದೆ.

ಆಧುನಿಕ ಜಗತ್ತಿನಲ್ಲಿ ಕೃಷಿಯಲ್ಲಿಯೂ ಬಹಳಷ್ಟು ಅಪಾಯಕಾರಿ ಅಂಶಗಳು ಇವೆ. ಕೇರಳ ಮತ್ತು ಪಂಜಾಬಿನಲ್ಲಿ ಎಂಡೋಸಲ್ಫಾನ್ ಬಳಕೆ ಇದಕ್ಕೆ ಒಂದು ನಿದರ್ಶನ. ಆಧುನಿಕ ಕೃಷಿಯಲ್ಲಿ ರಾಸಾಯನಿಕಗಳು ಮತ್ತು ವಿಕಿರಣದ ಬಳಕೆಯ ಸನ್ನಿವೇಶದಲ್ಲಿ ಕೃಷಿ ಕಾರ್ಮಿಕರನ್ನು ಈ ರೀತಿ ಆರೋಗ್ಯ ಮತ್ತು ಸುರಕ್ಷತೆಯ ನಿರಾಕರಣೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಅಖಿಲ ಭಾರತ ಕೃಷಿ ಕಾರ್ಮಿಕರ ಸಂಘ ಹೇಳಿದೆ. ಭಾರತ ಸರಕಾರ ಐಎಲ್‌ಒ ಗೆ ಕಳಿಸುವ ತನ್ನ ಪ್ರತಿಕ್ರಿಯೆಯಲ್ಲಿ ಇದನ್ನು ಕೈಬಿಡುವ ವರೆಗೆ ಹೋರಾಟ ನಡೆಸುವುದಾಗಿ ಅದು ಎಚ್ಚರಿಸಿದೆ.


ಜಗದಗಲ

❑ ಶರತ್‌ಚಂದ್ರ

ಈಜಿಪ್ಟಿನ 'ಹೊಸ ಸರ್ವಾಧಿಕಾರಿ' ವಿರುದ್ಧ ಭಾರೀ ಪ್ರದರ್ಶನಗಳು

ಈಜಿಪ್ಟಿನಲ್ಲಿ ಕಳೆದ ಎರಡು ವಾರಗಳಿಂದ ಅಧ್ಯಕ್ಷ ಮೊರ್ಸಿ ವಿರುದ್ಧ ಭಾರೀ ಪ್ರದರ್ಶನಗಳು ನಡೆದಿವೆ. ಇವು ಹಿಂದಿನ ಅಧ್ಯಕ್ಷ ಮುಬಾರಕ್ ವಿರುದ್ಧದ ಪ್ರದರ್ಶನಗಳನ್ನು ನೆನಪಿಸುವಂತಹವು ಆಗಿದ್ದವು. ನವಂಬರ್ 22ರಂದು ಸುಗ್ರೀವಾಜ್ಞೆ ಮೂಲಕ ವಿಶೇಷ ಅಧಿಕಾರ ವಹಿಸಿಕೊಂಡು 'ಕಾನೂನುಬದ್ಧ ಸರ್ವಾಧಿಕಾರಿ' ಆಗುವ ಅಧ್ಯಕ್ಷ ಮೊರ್ಸಿ ಅವರ ಪ್ರಯತ್ನದ ವಿರುದ್ಧ ಈ ಪ್ರದರ್ಶನಗಳು ನಡೆದವು. ನವಂಬರ್ 27 ಮತ್ತು 30 ರಂದು ವಿರೋಧ ಪಕ್ಷಗಳು ಕರೆ ಕೊಟ್ಟ ರ‍್ಯಾಲಿಗೆ ತೆಹ್ರಿ ಚೌಕದಲ್ಲಿ 2 ಲಕ್ಷಕ್ಕೂ ಹೆಚ್ಚು ಜನ ಸೇರಿದ್ದರು. ಕಳೆದ ಎರಡು ವಾರಗಳಿಂದ ವಿರೋಧಿ ಪ್ರದರ್ಶನಕಾರರ ಒಂದು ಗುಂಪು ತೆಹ್ರಿ ಚೌಕದಲ್ಲಿ ಕ್ಯಾಂಪು ಮಾಡಿದೆ.

ವಿರೋಧ ಪಕ್ಷಗಳ ಜತೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಮಾತುಕತೆ ಮೂಲಕ ವ್ಯವಹರಿಸುವ ಬದಲು ಅಧ್ಯಕ್ಷ ಮೊರ್ಸಿ ಮತ್ತು ಅವರ ಮುಸ್ಲಿಮ್ ಬ್ರದರ್ ಹುಡ್ ಮತ್ತು ಇತರ ಇಸ್ಲಾಮಿಕ್ ಪಕ್ಷದ ಕಾರ್ಯಕರ್ತರು, ವಿರೋಧ ಪಕ್ಷಗಳ ರ‍್ಯಾಲಿ–ಪ್ರದರ್ಶನಗಳ ಮೇಲೆ ದಾಳಿ ಮಾಡಿ ಆದ ಬೀದಿ ಕಾಳಗದಲ್ಲಿ ಹಲವರು ಸತ್ತಿದ್ದಾರೆ. ನೂರಾರು ಜನ ಗಾಯಗೊಂಡಿದ್ದಾರೆ. ಪೋಲೀಸರೂ ಹಲವು ಕಡೆ ಗೋಳಿಬಾರು ಮತ್ತು ಇತರ ದಾಳಿಗಳನ್ನು ಮಾಡಿದ್ದಾರೆ. ಅಧ್ಯಕ್ಷರು ಹಲವಾರು ಟ್ಯಾಂಕು ಮತ್ತು ಸಶಸ್ತ್ರ ಸೇನಾ ವಾಹನಗಳನ್ನು ಅಧ್ಯಕ್ಷೀಯ ಅರಮನೆ ಕಾಯಲು ಸಜ್ಜುಗೊಳಿಸಿದ್ದಾರೆ. ಮಾತ್ರವಲ್ಲ ಆಳುವ ಪಕ್ಷದ ಸಶಸ್ತ್ರ ಕಾರ್ಯಕರ್ತರು



ಅಧ್ಯಕ್ಷ ಮೊರ್ಸಿ ಸುಗ್ರೀವಾಜ್ಞೆಯ ಸಿಂಧುತ್ವದ ಬಗ್ಗೆ ವಿಚಾರಣೆಗೆ ಬರುವ ದಿನ (ಅದನ್ನು ವಜಾ ಮಾಡುವ ಅಧಿಕಾರ ಇರುವ) ಸಂವೈಧಾನಿಕ ಸುಪ್ರೀಂ ಕೋರ್ಟನ್ನು ಸುತ್ತುವರೆದು, ನ್ಯಾಯಾಧೀಶರುಗಳು ಮುಷ್ಕರ ಹೋಗುವಂತೆ ಮಾಡಿದರು.

ಅಧ್ಯಕ್ಷೀಯ ಸುಗ್ರೀವಾಜ್ಞೆ ಪ್ರಕಾರ ಎಲ್ಲಾ ಅಧಿಕಾರಗಳು ಅಧ್ಯಕ್ಷರಲ್ಲಿ ಕೇಂದ್ರೀಕೃತವಾಗಿವೆ. ಅಧ್ಯಕ್ಷರ ಅಧಿಕಾರಗಳನ್ನು ನಿರ್ಧಾರಗಳನ್ನು ಸುಪ್ರೀಂ ಕೋರ್ಟು ಸಹ ಪ್ರಶ್ನಿಸುವಂತಿಲ್ಲ. ಅದು ಸಾಲದೆಂಬಂತೆ ಈ ಸುಗ್ರೀವಾಜ್ಞೆಯನ್ನು ಶಾಶ್ವತಗೊಳಿಸುವ ಕರಡು ಸಂವಿಧಾನವನ್ನು ರಾತ್ರೋ ರಾತ್ರಿ ಯಾವುದೇ ವಿರೋಧ ಪಕ್ಷಗಳ ಪಾಲ್ಗೊಳ್ಳುವಿಕೆ ಇಲ್ಲದೆ ಆಳುವ ಇಸ್ಲಾಮಿಕ್ ಪಕ್ಷಗಳ ಸದಸ್ಯರ ಸಂವಿಧಾನ ಕಮಿಶನ್ ತಯಾರಿಸಿತ್ತು. ಈ ಸಂವಿಧಾನವನ್ನು ಯಾವುದೇ ರಾಷ್ಟ್ರೀಯ ಚರ್ಚೆ ಇಲ್ಲದೆ, ಅದರ ಅಧ್ಯಯನ ಮಾಡಲೂ ಕಾಲಾವಕಾಶ ಕೊಡದೆ ಡಿಸೆಂಬರ್ 15ರಂದು ಜನಮತ ಸಂಗ್ರಹ ಸಹ ಏರ್ಪಡಿಸಲಾಗಿದೆ. ಇದರಿಂದ ಈಜಿಪ್ಟ್ ಇಬ್ಭಾಗ ಮಾಡಿದಂತಾಗಿದೆ. ಆಳುವ ಮುಸ್ಲಿಂ ಬ್ರದರ್ ಹುಡ್ ಮತ್ತು ಇತರ ಇಸ್ಲಾಮಿಕ್ ಪಕ್ಷಗಳು ಒಂದು ಕಡೆ. ಮುಬಾರಕ್ ಸರ್ವಾಧಿಕಾರದ ವಿರುದ್ಧ ನಿಜವಾಗಿಯೂ ದಂಗೆ ಎದ್ದ ಯುವ ಗುಂಪುಗಳು, ಕಾರ್ಮಿಕ ಸಂಘಟನೆಗಳು, ಉದಾರವಾದಿಗಳು, ಕ್ರಿಶ್ಚಿಯನ್ನರು ಮತ್ತು ಎಲ್ಲಾ ಸಾಮಾನ್ಯ ಜನತೆ ಇನ್ನೊಂದು ಕಡೆ. ಮೊರ್ಸಿ ಮತ್ತು ಮುಸ್ಲಿಂ ಬ್ರದರ್‌ಹುಡ್‌ನ ಸರ್ವಾಧಿಕಾರಿ ಮುಖ ಮುಬಾರಕ್‌ಗಿಂತ ಹೆಚ್ಚು ಮತ್ತು ಬೇಗ ಪ್ರಕಟವಾದಂತಾಗಿದೆ.

ಸಮಾಜದ ಇತರ ವಿಭಾಗಗಳಿಂದಲೂ ಪ್ರತಿಭಟನೆ ವ್ಯಕ್ತವಾಗಿದೆ. ನ್ಯಾಯಾಧೀಶರುಗಳು ಮುಷ್ಕರ ಹೂಡಿದ್ದು ಮಾತ್ರವಲ್ಲದೆ, ಮಾಧ್ಯಮಗಳೂ ಪ್ರತಿಭಟನಾ ಕ್ರಮಗಳನ್ನು ಕೈಗೊಂಡಿವೆ. ಹೆಚ್ಚಿನ ಸರ್ಕಾರೇತರ ಪತ್ರಿಕೆಗಳು ಮತ್ತು ಟಿವಿ ಸ್ಟೇಶನುಗಳೂ ತಮ್ಮ ಪ್ರಕಟಣೆಯನ್ನು ಒಂದು ದಿನ ಸ್ಥಗಿತಗೊಳಿಸಿ ಪ್ರತಿಭಟಿಸಿವೆ. ಕೈರೋ ಮತ್ತು ಹಲವು ಪ್ರಮುಖ ನಗರಗಳಲ್ಲಿ (ಕೈಗಾರಿಕಾ ಪ್ರದೇಶಗಳೂ ಸೇರಿದಂತೆ) ಮುಸ್ಲಿಂ ಬ್ರದರ್ ಹುಡ್ ಕಚೇರಿಗಳ ಎದುರು ಭಾರೀ ಪ್ರದರ್ಶನಗಳೂ ಘರ್ಷಣೆಗಳು ನಡೆದಿವೆ. ಹಲವು ಕಡೆ ಮುಸ್ಲಿಂ ಬ್ರದರ್ ಹುಡ್ ಕಚೇರಿಗಳನ್ನು ಸುಟ್ಟು ಹಾಕಲಾಗಿದೆ. ಅಧ್ಯಕ್ಷ ಮೋರ್ಸಿ ಸರ್ಕಾರ ಅಮೆರಿಕನ್ ಸಾಮ್ರಾಜ್ಯಶಾಹಿ ಜತೆ ರಾಜಿ ಮಾಡಿಕೊಂಡಿರುವುದರಿಂದ, ಅವರ ಬೆಂಬಲದಿಂದ ಮುಬಾರಕ್‌ರಂತೆ ಸರ್ವಾಧಿಕಾರ ನಡೆಸಬಹುದು ಎಂದುಕೊಂಡಂತಿದೆ. ಆದರೆ ಈಜಿಪ್ಟಿನ ಪ್ರಜಾಸ್ತಾತ್ಮಕ ಚಳುವಳಿಯ ಬಲ... ಸ್ವರೂಪ ಅವರಿಗೆ ತಿಳಿದಂತಿಲ್ಲ. ಹಲವು ದಶಕಗಳ ಕಾಲ ಆಡಳಿತ ನಡೆಸಿ ಬೇರೂರಿದ್ದ ಮುಬಾರಕನನ್ನು ಕೆಲವೇ ದಿನಗಳಲ್ಲಿ ಓಡಿಸಿದ ಪ್ರಜಾಸ್ತಾತ್ಮಕ ಚಳುವಳಿ ಈ ಹೊಸ ಸರ್ವಾಧಿಕಾರಿಗೆ ಅದೇ ಗತಿ ಕಾಣಿಸಲು ಟೊಂಕ ಕಟ್ಟಿ ನಿಂತಿದೆ.

ಸಾಮ್ರಾಜ್ಯಶಾಹಿ ತನ್ನ 'ಹೊಸ ಮಧ್ಯಪ್ರಾಚ್ಯ' ನೀತಿಯ ಭಾಗವಾಗಿ ಸಿರಿಯಾದ ಅತಿಕ್ರಮಣ ಮತ್ತು ಅಲ್ಲಿ 'ಸರ್ಕಾರ ಬದಲಾವಣೆ'ಗೆ ಹುನ್ನಾರ ನಡೆಸುತ್ತಿರುವಾಗ ಶಾಂತಿಪ್ರಿಯ ಶಕ್ತಿಗಳು ಕೈಕಟ್ಟಿಕೊಂಡು ಕುಳಿತಿಲ್ಲ. ವಿಶ್ವ ಶಾಂತಿ ಮಂಡಳಿಯ ಭಾಗವಾಗಿರುವ ಟರ್ಕಿ ಶಾಂತಿ ಸಂಘಟನೆ ನವಂಬರ್ 24–25 ರಂದು ಟರ್ಕಿಯ ಅಂಟಾಕಿಯದಲ್ಲಿ ಸಿರಿಯಾದ ಅತಿಕ್ರಮಣದ ವಿರುದ್ಧ ಒಂದು ಅಂತರ‍್ರಾಷ್ಟ್ರೀಯ ಶಾಂತಿ ಸಮ್ಮೇಳನ ಸಂಘಟಿಸಿತು. ಅಂಟಾಕಿಯ ಸಿರಿಯಾದ ಗಡಿಯಲ್ಲಿ ಇರುವ ಹಟಾಯ್ ಪ್ರಾಂತ್ಯದಲ್ಲಿ ಇದ್ದು, ಸಿರಿಯಾ ಗಡಿ ಪ್ರದೇಶದಲ್ಲಿ ವಿದೇಶೀ ಸಶಸ್ತ್ರ ಬಾಡಿಗೆ ಬಂಟರ ಅಟಾಟೋಪಗಳ ದುಷ್ಪರಿಣಾಮಗಳ ಬಗ್ಗೆ ಅಲ್ಲಿನ ನಾಗರಿಕರಿಂದ ನೇರವಾಗಿ ಪ್ರತಿನಿಧಿಗಳು ಕೇಳಿ ತಿಳಿದುಕೊಂಡರು. ಸಮ್ಮೇಳನದಲ್ಲಿ ಅಲ್ಲಿನ ಪಾರ್ಲಿಮೆಂಟು ಸದಸ್ಯರು, ಮೇಯರುಗಳು, ಪತ್ರಕರ್ತರು, ಬುದ್ಧಿಜೀವಿಗಳು, ಇಂಜಿನೀಯರುಗಳು ಈ ಪ್ರದೇಶವನ್ನು ರಣರಂಗವಾಗಿಸಿ ಶಾಂತಿ ಕದಡಿರುವ ಬಗ್ಗೆ ದೂರಿದರು. ಎಲ್ಲಾ ದೇಶಗಳ ಅಲ್–ಖೈದಾ

ನಗದು ವರ್ಗಾವಣೆ ವಿರೋಧಿಸಲು ಸಿಪಿಐ(ಎಂ) ಕರೆ

ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಸಹಾಯಧನ ಹಣವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡುವ ಕೇಂದ್ರ ಸರ್ಕಾರದ ಕ್ರಮವನ್ನು ವ್ಯಾಪಕವಾಗಿ ವಿರೋಧಿಸಬೇಕೆಂದು ಸಿಪಿಐ(ಎಂ) ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿಯು ತನ್ನ ಎಲ್ಲಾ ಜಿಲ್ಲಾ ಸಮಿತಿಗಳಿಗೆ ಹಾಗೂ ಸ್ಥಳೀಯ ಘಟಕಗಳಿಗೆ ಕರೆ ನೀಡಿದೆ. ಪ್ರಾರಂಭದ ಹಂತದಲ್ಲಿ ಕೇಂದ್ರದ ಈ ಯೋಜನೆ ಹದಿನಾರು ರಾಜ್ಯಗಳ 51 ಜಿಲ್ಲೆಗಳಲ್ಲಿ ಮುಂದಿನ ಜನವರಿ ಒಂದರಿಂದಲೇ ಜಾರಿಗೆ ತರಲು ಉದ್ದೇಶಿಸಲಾಗಿದ್ದು ಕರ್ನಾಟಕದ ಮೈಸೂರು, ತುಮಕೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ಜನವರಿ ಒಂದರಿಂದಲೇ ಆರಂಭವಾಗಲಿದೆ. ಸಧ್ಯಕ್ಕೆ ಅಡುಗೆ ಅನಿಲ, ವಿದ್ಯಾರ್ಥಿ ವೇತನ, ನಿವೃತ್ತಿ ವೇತನ, ಮುಂತಾದ 29 ಯೋಜನೆಗಳಿಗೆ ಮಾತ್ರ ಸೀಮಿತಗೊಳಿಸಲಾಗಿದ್ದರೂ ಬರುವ ಅಗಸ್ಟ್ ನಂತರ ಇಡೀ ದೇಶಕ್ಕೆ ಆಹಾರ, ರಸಗೊಬ್ಬರ ಮುಂತಾದವುಗಳಿಗೆ ನೀಡುವ ಸಹಾಯಧನವೂ ಸೇರಿದಂತೆ ಎಲ್ಲಾ ಸಬ್ಸಿಡಿ ಯೋಜನೆಗಳನ್ನು ನಗದು ವರ್ಗಾವಣೆಯ ವ್ಯಾಪ್ತಿಗೆ ತರಲು ಉದ್ದೇಶಿಸಲಾಗಿದೆ,

ಕೇಂದ್ರ ಸರ್ಕಾರದ ಯೋಜನೆ ಮೇಲ್ನೋಟಕ್ಕೆ ದೇಶದ ಬಡವರ ಪರವಾಗಿದೆ ಎಂದು ಕಾಣುತ್ತಿದ್ದರೂ ಅದು ಸಬ್ಸಿಡಿಗಳನ್ನು ಕಡಿತ ಮಾಡುವ ಅದರ ಉದಾರೀಕರಣ ನೀತಿಯ ಭಾಗವೇ ಆಗಿದೆ. ತೀವ್ರ ಹಣದುಬ್ಬರದ ಈ ದಿನಗಳಲ್ಲಿ ಜೀವನಾವಶ್ಯಕ ವಸ್ತುಗಳ ಬದಲು ನಗದು ವರ್ಗಾವಣೆ ಮಾಡುವುದರಿಂದ ಸಬ್ಸಿಡಿಗಳು ಕಡಿತಗೊಳ್ಳಲಿವೆ. ಉದಾಹರಣೆಗೆ ಆಹಾರ ಧಾನ್ಯಗಳ ಬೆಲೆಗಳು ಏರಿದಂತೆಲ್ಲಾ ನಗದು ವರ್ಗಾವಣೆಯಿಂದ ದೊರೆಯುವ ಸಹಾಯ ಧನವು ಆಹಾರ ಧಾನ್ಯಗಳ ಬೆಲೆ ಏರಿಕೆಯನ್ನು ಸರಿದೂಗಲಾರದು. ಇದರಿಂದಾಗಿ ಬಡವರ ಕೊಳ್ಳುವ ಸಾಮರ್ಥ್ಯ ಕುಗ್ಗುವುದು ಮತ್ತು ಹಸಿವು ಹಾಗೂ ಅಪೌಷ್ಟಿಕತೆಯನ್ನು ಹೆಚ್ಚಿಸುವುದು. ಆದ್ದರಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಾರ್ವತ್ರಿಕಗೊಳಿಸುವ ಬದಲು ಕೇಂದ್ರ ಸರ್ಕಾರ ನಗದು ವರ್ಗಾವಣೆ ಯೋಜನೆಯನ್ನು ಜಾರಿಗೆ ತರಲು ಹೊರಟಿರುವುದನ್ನು ಸಿಪಿಐ(ಎಂ) ತೀವ್ರವಾಗಿ ವಿರೋಧಿಸಲು ನಿರ್ಧರಿಸಿದೆ.

ನ್ಯಾಯ ಬೆಲೆ ಅಂಗಡಿಕಾರರ ಹೋರಾಟಕ್ಕೆ ಬೆಂಬಲ ;

ಕೇಂದ್ರ ಸರ್ಕಾರ ಜಾರಿಗೆ ತರಲು ಹೊರಟಿರುವ ನಗದು ವರ್ಗಾವಣೆಯ ಕ್ರಮದಿಂದಾಗಿ ನ್ಯಾಯಬೆಲೆ ನಡೆಸುತ್ತಿರುವ ಅಂಗಡಿಕಾರರು ಉದ್ಯೋಗ ಕಳೆದುಕೊಂಡು ನಿರುದ್ಯೋಗಿಗಳಾಗುತ್ತಿರುವುದರಿಂದ ಅವರು ಕೇಂದ್ರ ಸರ್ಕಾರದ ದೋರಣೆಯನ್ನು ವಿರೋಧಿಸಿ ನಡೆಸಲು ಉದ್ದೇಶಿಸಿರುವ ಹೋರಾಟವನ್ನು ಸಿಪಿಐ(ಎಂ) ಬೆಂಬಲಿಸುತ್ತದೆ.

ಸ್ಮಾರ್ಟ್ ಕಾರ್ಡ್ ವಿರೋಧಕ್ಕೆ ಬೆಂಬಲ ಇಲ್ಲ ;

ಪಡಿತರ ವಿತರಣೆಯಲ್ಲಿ ಭ್ರಷ್ಟಾಚಾರವನ್ನು ತಡೆಗಟ್ಟಲು ರಾಜ್ಯದಲ್ಲಿ ಜಾರಿಗೆ ತರಲು ಉದ್ದೇಶಿಸಿರುವ "ಸ್ಮಾರ್ಟ್ ಕಾರ್ಡ್" ಯೋಜನೆಯನ್ನು ಸಿಪಿಐ(ಎಂ) ವಿರೋಧಿಸುವುದಿಲ್ಲ. ರೇಷನ್ ವ್ಯವಸ್ಥೆ ಸಾರ್ವತ್ರಿಕಗೊಳಿಸಬೇಕು ಮತ್ತು ಭ್ರಷ್ಟಾಚಾರ ಮುಕ್ತಗೊಳಿಸಬೇಕೆಂದು ಸಿಪಿಐ(ಎಂ) ಆಗ್ರಹಿಸುತ್ತದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

“ಚಿಲ್ಲರೆ ವ್ಯಾಪಾರದಲ್ಲಿ .....

ಪುಟ 11 ರಿಂದ

ಪಕ್ಷಗಳು ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ನೀಡುವ ನೀತಿಗೆ ವಿರುದ್ಧ ಇವೆ. ಆದರೂ ಸರ್ಕಾರ ಪ್ರಜಾಪ್ರಭುತ್ವ ಮೌಲ್ಯಗಳನ್ನು ಗಾಳಿಗೆ ತೂರಲು ಮುಂದಾಗಿದೆ.

ವಿದೇಶಿ ಬಂಡವಾಳ ಉದ್ಯೋಗ ಸೃಷ್ಟಿಸುತ್ತದೆ ಎಂದು ಆನಂದ್ ಶರ್ಮ ಅವರು ಎಂಎನ್‌ಸಿಗಳ ಪರವಾಗಿ ಗ್ಯಾರಂಟಿ ಕೊಟ್ಟಿದ್ದಾರೆ. ಅವರೇನು ಈ ಕಂಪನಿಗಳ ವಕ್ತಾರರಾ ? 3 ವರ್ಷಗಳಲ್ಲಿ 4 ದಶಲಕ್ಷ ಉದ್ಯೋಗ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ.

ಹಾಗಿದ್ದರೆ ನಾವು 4 ಜಾಗತಿಕ ಕಂಪನಿಗಳನ್ನು ನೋಡೋಣ. ವಾಲ್ ಮಾರ್ಟ್, ಕ್ಯಾರೆಫೋರ್, ಟೆಸ್ಕೋ, ಮೆಟ್ರೋ. ಇವು ಸರಾಸರಿ ಒಂದು ಮಳಿಗೆಯಲ್ಲಿ ನೇಮಕ ಮಾಡಿಕೊಳ್ಳುವ ನೌಕರರ ಸಂಖ್ಯೆ ಹೀಗಿವೆ. ವಾಲ್ ಮಾರ್ಟ್–214, ಕ್ಯಾರೆಫೋರ್ 30, ಮೆಟ್ರೋ 133, ಟೆಸ್ಕೋ 92, ಸರಾಸರಿ 117 ಆಗುತ್ತದೆ. ಈ ಲೆಕ್ಕದಲ್ಲಿ 3 ವರ್ಷಗಳಲ್ಲಿ 34,180 ಸೂಪರ್ ಮಾರ್ಕೆಟ್ ಅಂಗಡಿಗಳನ್ನು ತೆಗೆದರೆ ಮಾತ್ರ 40 ಲಕ್ಷ ಉದ್ಯೋಗ ಕೊಡಲು ಸಾಧ್ಯ. ಇದು ಸಾಧ್ಯವಾ?

ಭಾರತದ ಚಿಲ್ಲರೆ ವ್ಯಾಪಾರವು ಕೃಷಿಯ ನಂತರ ಉದ್ಯೋಗಕ್ಕಾಗಿ ಅತಿ ಹೆಚ್ಚು ಜನ ಅವಲಂಬಿಸಿರುವ ವಲಯ. ಇಲ್ಲಿ 4 ಕೋಟಿ ಜನ ಅಂಗಡಿಗಳ ಮಾಲಿಕರಾಗಿ, ನೌಕರರರಾಗಿ, ಅದಕ್ಕೆ ಹೊಂದಿಕೊಂಡು ಬದುಕು ರೂಪಿಸಿಕೊಂಡಿದ್ದಾರೆ. ಬಹುರಾಷ್ಟ್ರೀಯ ಕಂಪನಿಗಳು ಒಂದು ನೌಕರಿ ಕೊಡಲು ಇರುವ 17 ಉದ್ಯೋಗಗಳನ್ನು ನಾಶ ಮಾಡುತ್ತವೆ. ಒಂದು ವಾಲ್ ಮಾರ್ಟ್ ಸೂಪರ್ ಮಾರ್ಕೆಟ್ ಅಂಗಡಿ 1,300 ಕ್ಕೂ ಹೆಚ್ಚು ಭಾರತದ ಸಣ್ಣ ಚಿಲ್ಲರೆ ಅಂಗಡಿಗಳನ್ನು ನಾಶ ಮಾಡುತ್ತದೆ. ಇದರಿಂದಾಗಿ ಕನಿಷ್ಟ 3,900 ಮಂದಿ ನಿರುದ್ಯೋಗಿಗಳಾಗುತ್ತಾರೆ. ಇದಕ್ಕೆ ಪ್ರತಿಯಾಗಿ ಒಂದು ವಾಲ್‌ಮಾರ್ಟ್ ಸ್ಟೋರಿನಲ್ಲಿ 214 ರಿಂದ 225 ಮಂದಿಗೆ ಕೆಲಸ ಸಿಗುತ್ತದೆ.

ಸರ್ಕಾರ ಬೆಳೆಯುತ್ತಿರುವ ನಿರುದ್ಯೋಗವನ್ನು ನಿರ್ವಹಿಸುವಲ್ಲಿ ವಿಫಲವಾಗಿದೆ. ನಿರುದ್ಯೋಗ ಏರುತ್ತಿದೆ. ಉದ್ಯೋಗಗಳ ಸೃಷ್ಟಿಯಲ್ಲಿ ಕಡಿತವಾಗುತ್ತಿದೆ. ಉದ್ಯೋಗ ಸಿಗದವರು ಏನು ಮಾಡುತ್ತಾರೆ ?

ದೇಶ ಭಕ್ತಿ ಎಂದರೆ ಬಾಂಬು ಬಂದೂಕುಗಳಲ್ಲ. ದೇಶಭಕ್ತಿ ಎಂದರೆ ದೇಶಬಾಂಧವರ ಹಿತ ಕಾಯುವುದು. ನಮ್ಮಲ್ಲಿ ಬಜೆಟ್ ಕೊರತೆ ಇದೆ. ಆದ್ದರಿಂದ ಅಭಿವೃದ್ಧಿ ಆಗುತ್ತಿಲ್ಲ. ನಮ್ಮ ಆಳುವವರಲ್ಲಿ ಪ್ರಮಾಣಿಕತೆಯ ಕೊರತೆ ಇದೆ. ಆದ್ದರಿಂದ ಭ್ರಷ್ಟಾಚಾರ ಬೆಳೆಯುತ್ತಿದೆ. ದೇಶಭಕ್ತಿ ಕೊರತೆ ಇದೆ. ಆದ್ದರಿಂದ ಲೂಟಿಕೋರ ಕಂಪನಿಗಳನ್ನು ಸ್ವಾಗತಿಸಲಾಗುತ್ತಿದೆ. ಆದರೆ ಬುದ್ಧಿಯಲ್ಲಿ ಕೊರತೆ ಇಲ್ಲ, ಅದನ್ನು ಅವರು (ಬಹುರಾಷ್ಟ್ರೀಯ ಕಂಪನಿಗಳವರು) ತುಂಬುತ್ತಾರೆ. ದೇಶದ ಕೃಷಿ ಮಂತ್ರಿ ಶರದ್ ಪವಾರ್ ಅವರ ರಾಜ್ಯದಲ್ಲಿ ಪ್ರತಿದಿನ ರೈತರ ಆತ್ಮಹತ್ಯೆಗಳು ನಡೆಯುತ್ತಿವೆ. ನಾವು ಆತ್ಮಹತ್ಯೆ ತಡೆಯಲು ಸಾಧ್ಯ ಎನ್ನುತ್ತಲೇ ಇವರು ನಾವು ಗೊಬ್ಬರದ ಬೆಲೆ ಹೆಚ್ಚಿಸುತ್ತೇವೆ.... ವಿದ್ಯುತ್ ದರ ಏರಿಸುತ್ತೇವೆ...ರೈತರಿಗೆ ಸಹಾಯ ಮಾಡಲು ನಾವು ವಾಲ್ ಮಾರ್ಟ್ ಅನ್ನು ಕರೆಯುತ್ತೇವೆ...ಎನ್ನುತ್ತಿದ್ದಾರೆ.

ಯೂರೋಪನ್ನು ನೋಡಿ. ಕೃಷಿಗೆ ದೊಡ್ಡ ಸಹಾಯಧನ ಅಂದರೆ ಸಬ್ಸಿಡಿ ಕೊಡುತ್ತಿದ್ದಾರೆ. ಯೂರೋಪಿನ ಪಾರ್ಲಿಮೆಂಟ್ ಸದಸ್ಯರು, ಕೃಷಿ ಉತ್ಪನ್ನಗಳನ್ನು ಕೊಳ್ಳುವ ಈ ಬಹುರಾಷ್ಟ್ರೀಯ ಕಂಪನಿಗಳ ಅಧಿಪತ್ಯದಿಂದ ಅಲ್ಲಿನ ರೈತರು ನಲುಗಿದ್ದರ ಕುರಿತು ದನಿ ಎತ್ತಿದ್ದಾರೆ. ಅದೇ ರೀತಿಯಾಗಿ ಇಂಡೋನೇಷ್ಯಾ, ಮಲೇಷ್ಯಾಗಳ ಅನುಭವವೇನು ? ಸೂಪರ್ ಸ್ಟೋರುಗಳ ಮೇಲೆ ಅವರು ಹಲವಾರು ನಿಯಂತ್ರಣಗಳನ್ನು ಹಾಕಿದ್ದಾರೆ.

ಕೃಷಿ ಉತ್ಪನ್ನಗಳ ಪ್ರಶ್ನೆಯಲ್ಲಿ ಅವರು ನಿಗದಿ ಮಾಡುವ ಗುಣಮಟ್ಟ, ಬೆಲೆ, ಪ್ರಮಾಣ ಎಲ್ಲವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅವರು ಏಜೆಂಟರನ್ನು ಇಟ್ಟು ಕೊಳ್ಳುತ್ತಾರೆ. ರೈತರು ಅವರ ಸುಲಿಗೆಗೆ ಸಿಲುಕುತ್ತಾರೆ. ಸ್ವಾಮಿನಾಥನ್ ಸಮಿತಿ ರೈತರಿಗೆ ಶೇ. 50 ಲಾಭ ಬರುವಂತೆ ಬೆಲೆ ನಿಗದಿ ಮಾಡಲು ಶಿಫಾರಸ್ಸು ಮಾಡಿದೆ. ಅದನ್ನು ಸರ್ಕಾರ ಒಪ್ಪಿದೆಯಾ ? ಬಹುರಾಷ್ಟ್ರೀಯ ಕಂಪನಿಗಳು ಶೀತಲೀಕರಣ ಘಟಕ ಇತ್ಯಾದಿ ಒದಗಿಸುತ್ತವೆ ಎಂಬ ವಾದ ಇದೆ. ಆದರೆ ವಾಸ್ತವವೇನು ? ಯುರೋಪಿನ ಶೇ. 70 ಶೀತಲೀಕರಣ ಘಟಕಗಳು ಅಲ್ಲಿನ ಸರ್ಕಾರಗಳದ್ದು. ಹಿಮಾಚಲ ಪ್ರದೇಶದಲ್ಲಿ ಅಂದಾನಿ ಎಂಬಲ್ಲಿಗೆ ಹೋಗಿದ್ದೆ. ಅಲ್ಲಿ ಬಿ ಮತ್ತು ಸಿ ಗ್ರೇಡ್ ಸೇಬುಗಳನ್ನು ಶೀತಲೀಕರಣ ಘಟಕದಲ್ಲಿ ಇಡಲು ಒಪ್ಪುವುದಿಲ್ಲ. ತಿರಸ್ಕರಿಸುತ್ತಾರೆ. ತಾವು ಕೊಳ್ಳುವ ಗ್ರೇಡ್ ಸೇಬು ಮಾತ್ರ ಇಟ್ಟುಕೊಳ್ಳುತ್ತಾರೆ.

ಪ್ರಧಾನಿ ಮನಮೋಹನ ಸಿಂಗ್ ಅವರು ಆರ್ಥಿಕ ಪಂಡಿತರು, ವಿದ್ವಾನ್ ಇರಬಹುದು. ನಾವು ಆರ್ಥಿಕ ಪಂಡಿತರಲ್ಲದೇ ಇರಬಹುದು. ಆದರೆ ನಾವು ಮೂರ್ಖರಲ್ಲ.. ಜನರಿಗೆ ಅವರು ಅನುಕೂಲ ಮಾಡಿಕೊಡುತ್ತಾರೆ ಎಂದರೆ ಹೇಗೆ ಮಾಡಿಕೊಡುತ್ತಾರೆ. ? ಅವರ ಬಳಿ ಜಾದು ದಂಡವೇನಾದರೂ ಇದೆಯೇ ?

ಏನಿದು ಜಾದು ?

ಅಭಿವೃದ್ಧಿ ಹೊಂದಿದ ದೇಶಗಳಲ್ಲಿ 1.3 ಶೇ. ಮಾತ್ರ ವ್ಯಾಪಾರ ವೃದ್ದಿಯಾಗಿದೆ. 93 ದೇಶಗಳಲ್ಲಿ ಅವರ ಅಭಿವೃದ್ಧಿ ದರ ಏರಿಕೆಯಾಗಿಲ್ಲ, ಕಡಿಮೆಯಾಗಿದೆ. ಆದರೆ ಲಾಭ 2.4 –3.5 ರಷ್ಟು ಹೆಚ್ಚಾಗಿದೆ, ಇದು ಹೇಗೆ ಸಾಧ್ಯ ?

ಒಮ್ಮೆ ಮಾರುಕಟ್ಟೆಯ ಮೇಲೆ ಹಿಡಿತ ಸಿಕ್ಕ ಮೇಲೆ ಅವರು ಬೆಲೆಗಳನ್ನು ಏರಿಸುತ್ತಾರೆ. 2008 ರಿಂದ ಜಗತ್ತು ನೋಡಿರುವುದು ಏನೆಂದರೆ ಸಂಕಷ್ಟಮಯ ಆಹಾರ ಬೆಲೆಗಳ ಏರಿಕೆ. ಜೂಜುಕೋರತನ, ಆವಕ (ಕೃಷಿ ಉತ್ಪನ್ನಗಳ ಸಂಗ್ರಹಣಾ ಖರೀದಿ)ದಲ್ಲಿ ಏಕಸ್ವಾಮ್ಯ, ಜಾಗತಿಕ ವ್ಯಾಪಾರದಲ್ಲಿ ಕೈಚಳಕ,

ಈ ಕಮ್ಯೂನಿಸ್ಟರನ್ನು ನೋಡಿ, ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆ ವಿಷಯದಲ್ಲಿ ಚೀನಾ ದೇಶ ಒಪ್ಪಿಕೊಂಡಿರುವ ನೀತಿಯನ್ನು ಇವರು ಒಪ್ಪುವುದಿಲ್ಲ...ಎನ್ನುತ್ತಿದ್ದಾರೆ.

ನಾವು ಹೇಳುವುದು... ನಮ್ಮ ಬಾವುಟ ನಮಗೆ. ಅವರ ದೇಶದ ಹಿತಾಸಕ್ತಿ ಅವರು ನೋಡುತ್ತಾರೆ. ಆಯ್ತು ಚೀನಾವನ್ನು ನೋಡೋಣ. ನಮ್ಮಲ್ಲಿ ಸರ್ಕಾರ ಚಿಲ್ಲರೆ ಅಂಗಡಿಗಳನ್ನು ನಡೆಸುತ್ತದೆಯಾ ?

ಚೀನಾ ಸರ್ಕಾರವು ದೊಡ್ಡ ಪ್ರಮಾಣದ ‘ಬೈಲಿಯನ್ ಗುಂಪು’ ಎಂದು ಕರೆಯುವ ಸರ್ಕಾರಿ ಮಾಲೀಕತ್ವದ ಗುಂಪಿನ ಮೂಲಕ ಬಹುದೊಡ್ಡ ರೀತಿಯಲ್ಲಿ ಅಲ್ಲಿನ ವ್ಯಾಪಾರವನ್ನು ನಿಯಂತ್ರಿಸುತ್ತದೆ. ಹೀಗಾಗಿ ಸರ್ಕಾರ ಬೆಲೆಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ. ಭಾರತದ ಸರ್ಕಾರ ಕೂಡ ಅದನ್ನು ಮಾಡಲಿ. ಅದನ್ನು ಮಾಡಲು ತಯಾರಿಲ್ಲ.

ಈ ನಡುವೆಯೂ ಕೂಡ ಚೀನಾದಲ್ಲಿ ಜನ ಉದ್ಯೋಗ ಕಳೆದುಕೊಂಡ ಉದಾಹರಣೆಗಳು ಇವೆ. ಅಲ್ಲಿಯಾದರೋ ಪರ್ಯಾಯ ಅವಕಾಶಗಳಾದರೂ ಇವೆ. ಆದರೆ ಇಲ್ಲಿ ಪರ್ಯಾಯ ವ್ಯವಸ್ಥೆಗಳಿಲ್ಲ. ಇಲ್ಲಿ ರೈತರ ಆತ್ಮಹತ್ಯೆ ನಡೆಯುತ್ತಿರುವಂತೆ ವ್ಯಾಪಾರಸ್ಥರ ಆತ್ಮಹತ್ಯೆಗಳು ನಡೆಯುವುದು ಬೇಡ.

ಚಿಲ್ಲರೆ ವ್ಯಾಪಾರದಲ್ಲಿ ಮಹಿಳೆಯರು ದೊಡ್ಡ ಪ್ರಮಾಣದಲ್ಲಿ ತೊಡಗಿದ್ದಾರೆ. ಮುಸ್ಲಿಂ ಸಮುದಾಯದ ಜನರು ಕೂಡ ಚಿಲ್ಲರೆ ವ್ಯಾಪಾರದಲ್ಲಿ ತೊಡಗಿದ್ದಾರೆ. ಎಲ್ಲ ಜನರು ಈ ನೀತಿಗಳಿಂದ ತೊಂದರೆಗೊಳಗಾಗುತ್ತಾರೆ. 7 ಜನ ವಾಲ್ ಮಾರ್ಟ್ ಅಧಿಕಾರಿಗಳು ಭಾರತದವರು ಸಸ್ಪೆಂಡ್ ಆಗಿದ್ದಾರೆ. ವಾಲ್ ಮಾರ್ಟ್ ಬರುವ ಮೊದಲೇ ಭ್ರಷ್ಟಾಚಾರ ಆರಂಭ ಆಗಿದೆ.

ಯುಪಿಎ–2 ಕುತಂತ್ರ..


ಪುಟ 13 ರಿಂದ

ತುಂಬಿ ಹೋಗಿ ಇನ್ನು ವಿಸ್ತರಿಸಲಾರದ ಮಟ್ಟವನ್ನು ತಲುಪಿರುವ ಸಂದರ್ಭದಲ್ಲಿ.

ವಾಸ್ತವವಾಗಿ ಈ ಹರಾಜಿನ ಫಲಿತಾಂಶ 2008 ರ ‘ಮೊದಲು ಬಂದವರಿಗೆ ಮೊದಲ ಹಂಚಿಕೆ’ ಭಾರತ ಸರಕಾರದ ಖಜಾನೆಗೆ ಎಂದೂ ತುಂಬಲಾರದ ಶಾಶ್ವತ ನಷ್ಟವನ್ನು ಮಾಡಿದೆ ಎಂಬುದನ್ನು ದೃಢಪಡಿಸಿದೆ ಎಂದು ಪರಿಣಿತರು ಹೇಳುತ್ತಾರೆ. ಈ ಹರಾಜನ್ನು ಅಧ್ವಾನವಾಗಿಸುವ ಯುಪಿಎ ಸರಕಾರದ ಈ ತಂತ್ರದ ಉದ್ದೇಶ ಎರಡು–ಒಂದು, ಸಿಎಜಿ ಲೆಕ್ಕಾಚಾರ ಅತಿರಂಜಿತ ಎಂದು ಬಿಂಬಿಸುವುದು ಹಾಗೂ ಎರಡು, ಇದನ್ನೇ ನೆಪವಾಗಿಸಿ ಖಾಸಗಿಯವರಿಗೆ ಅಗ್ಗ ದರಗಳಲ್ಲಿ ತರಂಗಾಂತರಗಳನ್ನು ಒದಗಿಸುವುದು. ರಾಜಾ ಅವರ ಧೋರಣೆ ಬಿಎಸ್‌ಎನ್‌ಎಲ್ ನ ಮೂಲರಚನೆಗಳನ್ನು ಖಾಸಗಿಯವರಿಗೆ ಪುಕ್ಕಟೆಯಾಗಿ ಒದಗಿಸಿದರೆ, ‘ರೋಮಿಂಗ್’ ತೆಗೆದು ಹಾಕಬೇಕೆಂಬ ಸಿಬಾಲ್ ರಾಗಾಲಾಪನೆ ಖಾಸಗಿಯವರಿಗೆ ಕಡಿಮೆ ದರಗಳಲ್ಲಿ ದೇಶವ್ಯಾಪಿ ಮಾರುಕಟ್ಟೆಯನ್ನು ಒದಗಿಸಲು ಈ ಹರಾಜನ್ನು ‘ಅಧ್ವಾನ’ವಾಗಿಸಿದೆ.

ಈ ನಡುವೆ ಸಿಎಜಿ ಮೇಲೆ ಯುಪಿಎ ಮಂತ್ರಿಗಳ, ಮುಖಂಡರ ದಾಳಿಗಳು ಈ ಸಂಸ್ಥೆಯನ್ನು ಶಾಶ್ವತವಾಗಿ ಪಂಗುಗೊಳಿಸಲು ಮಾಡುತ್ತಿರುವ ಪ್ರಯತ್ನಗಳು, ಸಂವಿಧಾನದ ಮೂಲರಚನೆಯ ಈ ಒಂದು ನಿರ್ಣಾಯಕ ಸ್ತಂಭವನ್ನು ಧ್ವಂಸಗೊಳಿಸುವ ಉದ್ದೇಶ ಪೂರ್ವಕ ಪ್ರಹಾರ ಎಂದು ಭಾರತೀಯ ಲೆಕ್ಕ ಪರಿಶೋಧನಾ ಸೇವೆಯ ನವೃತ್ತ ಹಿರಿಯ ಅಧಿಕಾರಿಗಳು ಬಲವಾಗಿ ಖಂಡಿಸಿದ್ದಾರೆ.

ಕಾಂ. ಗೋವಿಂದನ್ ಪಿಳ್ಳೈಯವರಿಗೆ ಶ್ರದ್ಧಾಂಜಲಿ



ಹಿರಿಯ ಮಾರ್ಕ್ಸ್‌ವಾದಿ ಚಿಂತಕರು, ಸಿಪಿಐ(ಎಂ) ಪಕ್ಷದ ಕೇರಳ ರಾಜ್ಯದ ಮುಖಂಡರೂ ಆದ ಕಾಂ. ಗೋವಿಂದನ್ ಪಿಳ್ಳೈ ಅವರು ನವೆಂಬರ್ 22, 2012 ರಂದು ತಮ್ಮ 86 ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ‘ಐಕ್ಯರಂಗ’ ಮತ್ತು ‘ಜನಶಕ್ತಿ’ ಪತ್ರಿಕೆಗಳೊಂದಿಗೆ ಗೋವಿಂದನ್ ಪಿಳ್ಳೈ ಅವರ ಒಡನಾಟ ಬಹಳ ವಿಶೇಷವಾದುದು. ಹಲವಾರು ಬಾರಿ ಪತ್ರಿಕೆಯ ತರಬೇತಿ ಶಿಬಿರಕ್ಕೆ ಮಾರ್ಗದರ್ಶಕರಾಗಿ ಬಂದು ಮಾರ್ಗದರ್ಶನ ನೀಡಿದ್ದಾರೆ. ಕರ್ನಾಟಕದ ಸಾಂಸ್ಕೃತಿಕ ಚಳುವಳಿಯೊಂದಿಗೆ ವಿಶೇಷ ಸಂಬಂಧ ಹೊಂದಿದ್ದ ಅವರು ಆ ನಿಟ್ಟಿನಲ್ಲಿಯೂ ಮಾರ್ಗದರ್ಶನ ನೀಡುವ ಮೂಲಕ ಗಣನೀಯ ಕೊಡುಗೆ ನೀಡಿದ್ದಾರೆ. ಆ ಮೂಲಕ ಕರ್ನಾಟಕ ರಾಜ್ಯದಲ್ಲಿ ಮಾರ್ಕ್ಸ್‌ವಾದಿ ಚಳುವಳಿಯ ಬೆಳವಣಿಗೆಗೂ ಅವರು ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಜನಶಕ್ತಿ ಕನ್ನಡ ವಾರ ಪತ್ರಿಕೆ ಹಾಗೂ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿಗಳು ಗೋವಿಂದನ್ ಪಿಳ್ಳೈ ಅವರಿಗೆ ಹೃದಯಪೂರ್ವಕ ಶ್ರದ್ಧಾಂಜಲಿ ಸಲ್ಲಿಸುತ್ತವೆ. – ಸಂ.



ಜಿ.ಎನ್.ನಾಗರಾಜ್ 16

ಹುನಾನ್ ರಾಜ್ಯಪಾಲನ ಉಚ್ಚಾಟನೆಗಾಗಿ ಸಂಘರ್ಷ

ಹುನಾನ್‌ನಲ್ಲಿ ಮೇ ನಾಲ್ಕರ ಚಳುವಳಿ ಆರಂಭವಾದ ದಿನದಿಂದಲೇ ಅಲ್ಲಿಯ ರಾಜ್ಯಪಾಲನ ಜೊತೆಯೂ ಸಂಘರ್ಷ ಆರಂಭವಾಯಿತು. ಅದರಲ್ಲಿಯೂ ಜಪಾನೀ ಬಂಡವಾಳಿಗರ ಕಿಂಕರನಾಗಿದ್ದ ಈ ರಾಜ್ಯಪಾಲ ಉರಿದು ಬೀಳುವಂತೆ ಮಾಡಿದ್ದು ಜಪಾನೀ ವಸ್ತುಗಳ ಬಹಿಷ್ಕಾರ ಮತ್ತು ಅವುಗಳ ಸುಡುವಿಕೆ. ಇದರಿಂದಾಗಿ ಪದೇ ಪದೇ ಪೋಲೀಸರ ಜೊತೆ ಸಂಘರ್ಷ ಮತ್ತು ರಾಜ್ಯಪಾಲನ ವಿರುದ್ಧ ಮಾವೋ ಮತ್ತಿತರ ಚಳುವಳಿಕಾರರ ಆಕ್ರೋಶ ದಿನ ನಿತ್ಯದ ಪ್ರಸಂಗಗಳಾದವು. ಮಾವೋರವರ ಬಗ್ಗೆಯಂತೂ ತೀವ್ರ ಕ್ರಮ ಕೈಗೊಳ್ಳಲು ರಾಜ್ಯಪಾಲ ಸಮಯಕ್ಕಾಗಿ ಕಾಯುತ್ತಿದ್ದ. 1919ರ ಅಕ್ಟೋಬರ್‌ನಲ್ಲಿ ರಾಜ್ಯಪಾಲ ವಿದ್ಯಾರ್ಥಿಗಳ ಪ್ರತಿನಿಧಿಗಳ ಸಭೆಯೊಂದನ್ನು ಕರೆದ. ಸುಮಾರು 60 ಜನರು ಭಾಗವಹಿಸಿದ್ದ ಈ ಸಭೆಗೆ ವಿದ್ಯಾರ್ಥಿಯಲ್ಲದಿದ್ದರೂ ಸಹಜವಾಗಿಯೇ ಮಾವೋರವರೂ ಹೋದರು.

ಆ ಸಭೆಯಲ್ಲಿ ರಾಜ್ಯಪಾಲ ವಿದ್ಯಾರ್ಥಿಗಳ ಚಳುವಳಿಯ ಬಗ್ಗೆ ಅಸಹನೆಯನ್ನು ತೋರಿಸುವ ಎಲ್ಲ ಅಧಿಕಾರಸ್ಥರಂತೆ ಅವನೂ ಕೂಡ 'ವಿದ್ಯಾರ್ಥಿಗಳಿಗೆ ಸುಮ್ಮನೇ ಓದುವುದು ಬಿಟ್ಟು ರಾಜಕೀಯದ ಗೊಡವೆ ಏಕೆ ? ವಿದ್ಯಾರ್ಥಿನಿಯರು ಜಪಾನಿ ವಸ್ತುಗಳನ್ನು ಸುಡುವುದು ಇಂತಹದ್ದನ್ನೆಲ್ಲಾ ಮಾಡಿದರೆ ಅವರ ತಲೆ ತೆಗೆಯುತ್ತೇನೆ' ಎಂದು ಬೆದರಿಸಿದ. ಇದರಿಂದ ಭಯಭೀತಳಾದ ಒಬ್ಬ ವಿದ್ಯಾರ್ಥಿನಿ ಅಳುವುದಕ್ಕೇ ಶುರು ಮಾಡಿದಳು. ಆಗ ಮಾವೋರವರು ಅಲ್ಲಿದ್ದ ವಿದ್ಯಾರ್ಥಿಗಳಿಗೆ ' ಹೆದರಬೇಡಿ, ಅವನ ಈ ಮಾತುಗಳಿಗೆ ನಾಯಿಯ ಬೊಗಳುವಿಕೆಗಿರುವಷ್ಟೇ ಬೆಲೆ ಅದಕ್ಕಿಂತ ಹೆಚ್ಚೇನಿಲ್ಲ' ಎಂದು ಧೈರ್ಯ ನೀಡಿದರು. ಇದರಿಂದ ರಾಜ್ಯಪಾಲ ಕೆಂಡಾ ಮಂಡಲವಾದ.

ವಿದ್ಯಾರ್ಥಿ ಸಂಘಟನೆ ಹಾಗೂ ಪತ್ರಿಕೆಯ ನಿಷೇಧ

ಅದೇ ಸಮಯದಲ್ಲಿ ಮಾವೋರವರು ತಾವು ಆರಂಭಿಸಿದ್ದ ಪತ್ರಿಕೆ ' ಶಿಯಾಂಗ್ ನದಿ ಸಮೀಕ್ಷೆ'ಯಲ್ಲಿ ಅಂದು ಚೀನಾದಲ್ಲಿ ನಡೆಯುತ್ತಿದ್ದ ಸೈದ್ಧಾಂತಿಕ ಸಂಘರ್ಷದ ಭಾಗವಾಗಿ ಬರೆದಿದ್ದ 'ತೀವ್ರಗಾಮಿತ್ವದ ಬಗ್ಗೆ' ಎಂಬ ಲೇಖನದಲ್ಲಿ ಕ್ರಾಂತಿಕಾರಿ ಬದಲಾವಣೆಯ ದಾರಿಯ ಬಗ್ಗೆ ಪ್ರಸ್ತಾಪಿಸಿದ್ದರು. (ವಿವರಗಳಿಗೆ ಬಾಕ್ಸ್ ನೋಡಿ.) ಅದನ್ನೇ ನೆಪ ಮಾಡಿ ರಾಜ್ಯಪಾಲ ಆ ಪತ್ರಿಕೆಯನ್ನು ಮುಚ್ಚಿಸಲು ಆಜ್ಞೆ ಮಾಡಿದ. ಹಾಗೆಯೇ ಹುನಾನ್‌ನಲ್ಲಿ ತೀವ್ರತರ ರಾಜಕೀಯ ಸಂಘರ್ಷಕ್ಕೆ ನಾಂದಿ ಹಾಡಿದ್ದ ಹುನಾನ್ ವಿದ್ಯಾರ್ಥಿಗಳ ಸಂಘವನ್ನು ವಿಸರ್ಜಿಸಲು ಆಜ್ಞೆ ಮಾಡಿದ. ಇದರಿಂದ ಹುನಾನ್‌ನಲ್ಲಿ ನಡೆಯುತ್ತಿದ್ದ ಸಂಘರ್ಷ ರಾಜ್ಯಪಾಲನ ವಿರುದ್ಧ ತಿರುಗಿತು.

ಹುನಾನ್‌ನ ರಾಜ್ಯಪಾಲ ಒಬ್ಬ ಭ್ರಷ್ಟ ಹಾಗೂ ದುಷ್ಟ ಮನುಷ್ಯನೆಂದು ಆ ವೇಳೆಗಾಗಲೇ ಕುಖ್ಯಾತಿಯನ್ನು ಪಡೆದಿದ್ದ. ವಿಪರೀತವಾಗಿ ತೆರಿಗೆಗಳನ್ನು ಹೇರುವುದು ,ಅದನ್ನು ವಸೂಲು ಮಾಡಲು ಅಧಿಕಾರಿಗಳು, ಪೋಲೀಸರ ಮೂಲಕ ದೌರ್ಜನ್ಯ ನಡೆಸುವುದು ಇವುಗಳಿಂದ ರೈತರು, ವ್ಯಾಪಾರಿಗಳಲ್ಲಿ ಅತೃಪ್ತಿ ಮಡುಗಟ್ಟಿತ್ತು. ವಿದ್ಯಾರ್ಥಿಗಳಿಗಂತೂ ಆ ವೇಳೆಗಾಗಲೇ ಮೂಡಿದ್ದ ಆಕ್ರೋಶ ಭುಗಿಲೆದ್ದಿತು.

ಜಪಾನೀ ಏಜೆಂಟನಂತೆ ವರ್ತಿಸುತ್ತಿದ್ದ ರಾಜ್ಯಪಾಲನನ್ನು ಕಿತ್ತು ಹಾಕಬೇಕೆಂದು ಹಾಗೂ ಪ್ರಜಾಭುತ್ವವನ್ನು ಸ್ಥಾಪಿಸಬೇಕೆಂದು ಮಾವೋ ಒಂದು ಘೋಷಣಾ ಪತ್ರವನ್ನು ಸಿದ್ಧಪಡಿಸಿದರು. ಅದಕ್ಕೆ 13,000 ಜನ ವಿದ್ಯಾರ್ಥಿಗಳು ಸಹಿ ಹಾಕಿದರು. ರಾಜ್ಯಪಾಲನ ಕಛೇರಿಯ ಮುಂದೆ ಮೆರವಣಿಗೆ, ಪ್ರದರ್ಶನ ನಡೆಸಲಾಯಿತು. ಆಗ ಭಾಗಶಃ ಅಧಿಕಾರ ಹೊಂದಿದ್ದ ಚೀನಾದ ಪ್ರಜಾಪ್ರಭುತ್ವ ಕ್ರಾಂತಿಯ ನೇತಾರ ಸನ್ ಯಾತ್ ಸೇನ್ ಹಾಗೂ ಬೀಜಿಂಗ್‌ನ ವಿದ್ಯಾರ್ಥಿ ಸಂಘಟನೆಗೆ ಪತ್ರ ಬರೆಯಲಾಯಿತು.

ಇವೆಲ್ಲವುಗಳಿಂದ ಆ ಕ್ರೂರಿ ರಾಜ್ಯಪಾಲನಿಗೆ ಹಗಲು ನೆಮ್ಮದಿಯಿಲ್ಲ ರಾತ್ರಿ ನಿದ್ದೆಯಿಲ್ಲ ಎನ್ನುವಂತಾಯಿತು. ಅವನು ಮಾವೋರನ್ನು ಕೊಲೆ ಮಾಡಿಸಲು ದುಷ್ಟ ಯೋಜನೆ ರೂಪಿಸಿದ

ಆ ಹೊತ್ತಿಗೆ ಮಾವೋರವರು ಸಂಘಟಿಸಿದ್ದ 'ಹೊಸ ಜನತೆಯ ಅಧ್ಯಯನ ಸಂಘ'ವು ಕೇವಲ ರಾಜ್ಯಪಾಲನ ಉಚ್ಚಾಟನೆಗಾಗಿ ಮಾತ್ರ ಸೀಮಿತಗೊಳ್ಳದೆ. 'ಹುನಾನ್ ಪುನರ್ನಿರ್ಮಾಣಕ್ಕಾಗಿ ಮಿಲಿಟರಿ ಆಳ್ವಿಕೆ ವಿರೋಧಿ ಸಂಘಟನೆ'ಯನ್ನು ಪ್ರಾರಂಭಿಸಿತು. ಇದು ಹುನಾನ್ ರಾಜ್ಯಕ್ಕೆ ಸ್ವಾಯತ್ತೆಗಾಗಿ ಹಾಗೂ ಪ್ರಜಾಪ್ರಭುತ್ವದ ಆಳ್ವಿಕೆಗಾಗಿ ಹೋರಾಟ ಆರಂಭಿಸಿತು.

ಮತ್ತೆ ಬೀಜಿಂಗ್ ಭೇಟಿ ಮತ್ತು ಅಧ್ಯಯನ

ಮಾವೋರವರು ಹುನಾನ್ ರಾಜ್ಯದ ಸ್ವಾಯತ್ತತೆಗೆ ವ್ಯಾಪಕ ಬೆಂಬಲ ಗಳಿಸಲು ಬೀಜಿಂಗ್, ಶಾಂಘೈ ನಗರಗಳಿಗೆ ಭೇಟಿ ನೀಡಲು ನಿರ್ಧರಿಸಿದರು. ಮೇ ನಾಲ್ಕರ ಚಳುವಳಿಯ ನಂತರ ಚೀನಾದಲ್ಲಿ ನಡೆಯುತ್ತಿದ್ದ ಪ್ರಕ್ರಿಯೆ ಹಾಗೂ ಚರ್ಚೆಗಳಲ್ಲಿ ಭಾಗವಹಿಸುವುದೂ ಕೂಡ ಅವರ ಉದ್ದೇಶವಾಗಿತ್ತು. ಈ ಬಾರಿ ಅವರು ಹುನಾನ್ ಪತ್ರಿಕೆಗಳ ವರದಿಗಾರನಾಗಿ ಪ್ರವಾಸ ಕೈಗೊಳ್ಳಲು ಅವಕಾಶ ಸಿಕ್ಕಿತು. ಇದರಿಂದಾಗಿ ಈ ಪ್ರವಾಸದ ವೆಚ್ಚಗಳನ್ನು ನಿಭಾಯಿಸಲು ಸಾಧ್ಯವಾಯಿತು.

ಹುನಾನ್‌ನ ವಿಷಯಗಳನ್ನು ಹಲವರೊಂದಿಗೆ ಚರ್ಚಿಸುವುದರ ಜೊತೆಗೆ ಬೀಜಿಂಗ್‌ನ ಕಾರ್ಮಿಕರನ್ನು ಭೇಟಿ ಮಾಡುವುದು, ಅವರಿಗೆ ಮಾರ್ಕ್ಸ್‌ವಾದದ ಪರಿಚಯ ಮಾಡಿಸುವುದು ಇವುಗಳನ್ನು ಮುಂದುವರೆಸಿದರು. ಬೀಜಿಂಗ್ ವಿಶ್ವ ವಿದ್ಯಾನಿಲಯದ ಪುಸ್ತಕ ಭಂಡಾರದಲ್ಲಿ ಅನೇಕ ಹೊಸ ಪುಸ್ತಕಗಳನ್ನು ಅಧ್ಯಯನ ಮಾಡಿದರು. ಅವರು ಈ ಬಾರಿ ಅಧ್ಯಯನ ಮಾಡಿದ ಪುಸ್ತಕಗಳಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸ್‌ರವರ ಪ್ರಸಿದ್ಧ ಕಿರು ಹೊತ್ತಿಗೆ, ವಿಶ್ವದ ಅನೇಕರನ್ನು ಕಮ್ಯೂನಿಸ್ಟರನ್ನಾಗಿಸಿದ "ಕಮ್ಯೂನಿಸ್ಟ್ ಪ್ರಣಾಳಿಕೆ"ಯನ್ನು, ಎಂಗೆಲ್ಸ್ ಹಾಗೂ ಕೌತ್ಸ್ಕಿಯವರ ಇತರ ಕೃತಿಗಳು ಸೇರಿದ್ದವು.

ಮದುವೆಯ ನಿಶ್ಚಯ

ಆ ವೇಳೆಗೆ ಮಾವೋರವರು ಪ್ರೇಮಿಸಿದ ಹುಡುಗಿ ಯಾಂಗ್ ಕೈ ಹುಯಿ ಕೂಡ ರಾಜಕೀಯ ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳಲಾರಂಭಿಸಿದ್ದರು ಹಾಗೂ ಮಾರ್ಕ್ಸ್‌ವಾದವನ್ನು ಅಭ್ಯಾಸ ಮಾಡಲಾರಂಭಿಸಿದ್ದರು. ಅವರ ನಡುವೆ ಮಾರ್ಕ್ಸ್‌ವಾದದ ಬಗ್ಗೆ, ಕಮ್ಯೂನಿಸ್ಟ್ ಚಳುವಳಿ ಹಾಗೂ ಪಕ್ಷದ ಬಗ್ಗೆ, ಚೀನಾದ ಕ್ರಾಂತಿಕಾರಿ ದಾರಿಯಲ್ಲಿ ತಮ್ಮಿಬ್ಬರ ಪಯಣದ ಬಗ್ಗೆ ಹಲವು ಚರ್ಚೆಗಳು ನಡೆದದ್ದು ಸಹಜವೇ ! ಇವೆಲ್ಲವುಗಳ ಫಲವಾಗಿ ಅಂತೂ ಪ್ರೇಮಿಗಳಿಬ್ಬರೂ ಮುಂದೊಂದು ದಿನ ಮದುವೆಯಾಗುವುದೆಂದು ನಿಶ್ಚಯಿಸಿದರು.

ಪಟ್ಟು ಬಿಡದ ಬರಹಗಳು

ಜಗತ್ ಪ್ರಸಿದ್ಧ ವಿಚಾರವಾದಿ, ತತ್ವಶಾಸ್ತ್ರಜ್ಞರಾದ ಬರ್ಟ್ರ್ಯಾಂಡ್ ರಸೆಲ್ ಹಾಗೂ ಜಾನ್ ಡೇವೀ ಯವರಿಂದ ಚೀನಾದ ಕ್ರಾಂತಿಯನ್ನು ತಡೆಯುವ ವಿಫಲ ಪ್ರಯತ್ನ

ಮೇ ನಾಲ್ಕರ ಚಳುವಳಿಯ ಉರುಬನ್ನು ಹಾಗೂ ದೊಡ್ಡ ಸಂಖ್ಯೆಯಲ್ಲಿ ಚೀನದ ಯುವಕರು, ವಿದ್ಯಾರ್ಥಿಗಳು, ಬುದ್ಧಿಜೀವಿಗಳು ಮಾರ್ಕ್ಸ್‌ವಾದದ ಕಡೆಗೆ ಆಕರ್ಷಿತರಾಗುತ್ತಿರುವುದು ಚೀನಾದ ಬಂಡವಾಳಶಾಹೀ ಪರ ಬುದ್ಧಿ ಜೀವಿಗಳನೇಕರಿಗೆ ಹಾಗೂ ಸಾಮ್ರಾಜ್ಯಶಾಹಿಗಳಿಗೆ ಗಾಬರಿ, ಆತಂಕಗಳನ್ನುಂಟು ಮಾಡಿತು. ಎಳೆ ಮನಸ್ಸುಗಳಲ್ಲಿ ಚಿಗುರಿದ್ದ ಕಮ್ಯುನಿಸ್ಟ್ ಪ್ರಭಾವವನ್ನು ಚಿವುಟಿ ಹಾಕಲು ಏನು ಮಾಡಬೇಕು ಎಂಬ ಪ್ರಶ್ನೆ ಅವರನ್ನು ಇನ್ನಿಲ್ಲದಂತೆ ಕಾಡಿತು.

ಅಂದಿನ ಚೀನಾದ ವಿಶ್ವ ವಿದ್ಯಾಲಯಗಳಲ್ಲಿ ಹೆಚ್ಚು ಪ್ರಭಾವ ಬೀರಿದ್ದ ಬುದ್ಧಿ ಜೀವಿಗಳೆಂದರೆ ಬ್ರಿಟನ್ ದೇಶದ ಬರ್‌ಟ್ರ್ಯಾಂಡ್ ರಸೆಲ್ ಮತ್ತು ಅಮೆರಿಕದ ಜಾನ್ ಡೇವೀ. ಅವರನ್ನು ಕರೆಸಿ ಚೀನಾದ ವಿಶ್ವ ವಿದ್ಯಾಲಯಗಳಲ್ಲಿ, ಪ್ರಮುಖ ನಗರಗಳಲ್ಲಿ ಕಮ್ಯೂನಿಸಂ ವಿರುದ್ಧ ಭಾಷಣಗಳನ್ನು ಮಾಡಿಸಿದರು. ನಿಧಾನವಾಗಿ ಬದಲಾವಣೆ ಆಗಬೇಕು. ಕ್ರಾಂತಿ ಎಂದರೇ ಒಮ್ಮೆಗೇ ಎಲ್ಲವೂ ತೀವ್ರ ಸ್ವರೂಪದಲ್ಲಿ ಬದಲಾವಣೆಯಾಗುವುದು ಎಂದರ್ಥ. ಅದು ಅರಾಜಕತೆಗೆ ಎಡೆ ಮಾಡಿಕೊಡುತ್ತದೆ. ಇತ್ಯಾದಿ.

ಹುನಾನ್‌ಗೆ ಕೂಡ ರಸೆಲ್ ಬಂದು ಕಾಲೇಜು ಅಧ್ಯಾಪಕರನ್ನು ಉದ್ದೇಶಿಸಿ ಭಾಷಣ ಮಾಡಿದರು. ಈ ವಾದಗಳಿಗೆ 'ನವ ಯುವ ಜನತೆ' ಪತ್ರಿಕೆಯಲ್ಲಿ ದರ್ಖಾವೋರವರು ತುಂಡರಿಸುವಂತೆ ಉತ್ತರ ನೀಡಿದರು. ಇಡೀ ಚೀನದ ವಿವಿಧ ರಾಜ್ಯಗಳಲ್ಲಿ ವಾದ-ಪ್ರತಿವಾದಗಳ ಮೂಲಕ ಸೈದ್ಧಾಂತಿಕ ಸಂಘರ್ಷ ನಡೆಯಿತು. ಹುನಾನ್‌ನಲ್ಲಿ ಮಾವೋರವರು ತಮ್ಮ ಪತ್ರಿಕೆಯಲ್ಲಿ 'ತೀವ್ರ ವಾದದ ಬಗ್ಗೆ' ಎಂಬ ಲೇಖನ ಬರೆದರು. ನಿಧಾನವಾಗಿ ಬದಲಾವಣೆ ಎಂದರೆ ಚೀನದ ಯುದ್ಧಕೋರ ಪಾಳೆಯಗಾರರಿಗೆ, ಸಾಮ್ರಾಜ್ಯಶಾಹಿಗಳಿಗೆ ಮೇಯುವುದಕ್ಕೆ ಅವಕಾಶ ಮಾಡಿಕೊಟ್ಟಂತೆ ಎಂಬುದನ್ನು ವಿವರಿಸಿದರು. ಅದು ಎಷ್ಟು ಪ್ರಭಾವಶಾಲಿ ಯಾಗಿತ್ತೆಂದರೆ ಹುನಾನ್‌ನ ರಾಜ್ಯಪಾಲ ಇದನ್ನೇ ನೆಪ ಮಾಡಿ ಪತ್ರಿಕೆಯನ್ನು ಹಾಗೂ ವಿದ್ಯಾರ್ಥಿ ಸಂಘಟನೆಯನ್ನು ನಿಷೇಧಿಸಿದ. ಆದರೆ ಮಾವೋರವರು ಪಟ್ಟು ಬಿಡದೆ ಹುನ್ನಾನ್‌ನ ಇತರ ಪ್ರಗತಿಪರ ಪತ್ರಿಕೆಗಳಲ್ಲಿ ಸಾಲು ಸಾಲಾಗಿ ಬರೆಯುತ್ತಲೇ ಹೋದರು. ಆ ಪತ್ರಿಕೆಗಳನ್ನೂ ನಿಷೇಧಿಸಲಾಯಿತು.

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA
(MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH